● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ




ಆಳ–ಅಗಲ: ಅಮೆರಿಕ ಶಿಕ್ಷಣ ಭಾರತೀಯರ ಹಿಂದೇಟು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,408	24,125	₹1.02 ಲಕ್ಷ (ಬೆಂಗಳೂರು)	₹1.02 ಲಕ್ಷ (ಬೆಂಗಳೂರು)	85.15

ಪುತ್ರಿ ಕೃತಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ● ಹೆಚ್ಚಿನ ತನಿಖೆಗಾಗಿ ಪ್ರಕರಣ ಸಿಸಿಬಿಗೆ ವರ್ಗ

ಓಂ ಪ್ರಕಾಶ್ ಪತ್ನಿ ಬಂಧನ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಕೊಲೆ ಪ್ರಕರಣದಲ್ಲಿ ಅವರ ಪತ್ನಿ ಪಲ್ಲವಿ (64) ಅವರನ್ನು ಎಚ್.ಎಸ್.ಆರ್ ಲೇಔಟ್ ಠಾಣೆಯ ಪೊಲೀಸರು ಸೋಮವಾರ ರಾತ್ರಿ ಬಂಧಿಸಿದರು.

ಆರೋಪಿ ಪಲ್ಲವಿ ಅವರನ್ನು 39ನೇ ಎಸಿಎಂಎಂ ನ್ಯಾಯಾಲಯದ ನ್ಯಾಯಾಧೀಶರ ಮನೆಗೆ ಸೋಮವಾರ ತಡರಾತ್ರಿ ಹಾಜರುಪಡಿಸಲಾಯಿತು.

ಆರೋಪಿಯನ್ನು ಮೇ 3ರ ವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಆರೋಪಿಯನ್ನು ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಯಿತು. ಪಲ್ಲವಿ ಅವರು ಕೃತ್ಯ ಎಸಗಿರುವುದು ಪ್ರಾಥಮಿಕ ತನಿಖೆಯ ವೇಳೆ ಕಂಡು ಬಂದಿದೆ.

'ಓಂ ಪ್ರಕಾಶ್ ಅವರ ಪುತ್ರ ಕಾರ್ತಿಕೇಶ್ ನೀಡಿದ ದೂರು ಆಧರಿಸಿ ಪಲ್ಲವಿ, ಕೃತಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಕೃತಿ ಅವರಿಗೆ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಅವರ ಪಾತ್ರದ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ಕೊಲೆಯ ಹಿಂದೆ ಆಸ್ತಿ ಕಲಹ?

ಆಸ್ತಿ ವಿಚಾರಕ್ಕೆ ಓಂ ಪ್ರಕಾಶ್ ಅವರನ್ನು ಪತ್ನಿ ಪಲ್ಲವಿ ಕೊಲೆ ಮಾಡಿದ್ದಾರೆ ಎಂಬ ಅನುಮಾನದ ಮೇಲೆ ಎಚ್‌ಎಸ್‌ಆರ್ ಲೇಔಟ್ ಠಾಣೆಯ ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

'ಯಾವ ವಿಚಾರಕ್ಕೆ ಕೊಲೆ ನಡೆದಿದೆ ಎಂಬುದನ್ನು ಸದ್ಯಕ್ಕೆ ಹೇಳಲು ಸಾಧ್ಯವಿಲ್ಲ. ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ' ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.

'ಓಂ ಪ್ರಕಾಶ್ ಅವರು ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲಸ ಮಾಡುತ್ತಿದ್ದಾಗ ಅದೇ ಜಿಲ್ಲೆಯ ವಿವಿಧೆಡೆ ಅಂದಾಜು 17 ಎಕರೆಯಷ್ಟು ಜಮೀನು ಖರೀದಿಸಿದ್ದರು. ಪುತ್ರನ ಹೆಸರಿಗೆ ಬಹುಪಾಲು ಜಮೀನು ಬರೆದಿದ್ದರು. ಉಳಿದ 5 ಎಕರೆ ಜಮೀನನ್ನು ತಮ್ಮ ಸಹೋದರಿಗೆ ನೀಡಲು ಓಂ ಪ್ರಕಾಶ್ ಅವರು ನಿರ್ಧರಿಸಿದ್ದರು. ಇದು ಪಲ್ಲವಿ ಅವರಿಗೆ ಇಷ್ಟ ಇರಲಿಲ್ಲ. ಜಮೀನು ನೀಡುವುದನ್ನು ವಿರೋಧಿಸಿ ನಿತ್ಯ ಗಲಾಟೆ ಮಾಡುತ್ತಿದ್ದರು' ಎಂದು ಮೂಲಗಳು ತಿಳಿಸಿವೆ.

'ಅಪ್ಪ ಪ್ಲೀಸ್ ಮನೆಗೆ ಬನ್ನಿ ಎಂದಿದ್ದ ಪುತ್ರಿ'

'ಕೆಲವು ದಿನಗಳ ಹಿಂದೆ ಕಿವಿಗೆ ಪೆನಾಯಿಲ್ ಸುರಿದು ಪತ್ನಿ ಹಿಂಸೆ ನೀಡಿದ್ದರಿಂದ ನೊಂದಿದ್ದ ಓಂ ಪ್ರಕಾಶ್ ಅವರು ಸಹೋದರಿಯ ಮನೆಗೆ ತೆರಳಿ ಅಲ್ಲಿಯೇ ವಾಸ ಮಾಡುತ್ತಿದ್ದರು. ಈ ವಿಚಾರವನ್ನು ಓಂ ಪ್ರಕಾಶ್ ಅವರು ಆತ್ಮೀಯರಿಗೂ ತಿಳಿಸಿದ್ದರು' ಎಂದು ಮೂಲಗಳು ತಿಳಿಸಿವೆ.

ಅಮ್ಮನ ಕೃತ್ಯ ಕಂಡು ಬೇಸರ ಮಾಡಿಕೊಂಡಿದ್ದ ಪುತ್ರಿ, ಏಪ್ರಿಲ್ 18ರಂದು ಸರಿತಾ ಕುಮಾರಿ ಅವರ ಮನೆಗೆ ತೆರಳಿ ಮನೆಗೆ ವಾಪಸ್ ಬರುವಂತೆ ಅಪ್ಪನ ಎದುರು ಕಣ್ಣೀರು ಹಾಕಿದ್ದರು. ಪುತ್ರಿಯ ಕಣ್ಣೀರು ನೋಡಿ ಓಂ ಪ್ರಕಾಶ್ ಅವರು ಎಚ್‌ಎಸ್‌ಆರ್ ಬಡಾವಣೆಯ ಮನೆಗೆ ಬಂದಿದ್ದರು. ಅದಾದ ಎರಡು ದಿನಗಳ ಬಳಿಕ ಕೊಲೆ ನಡೆದಿದೆ' ಎಂದು ಮೂಲಗಳು ತಿಳಿಸಿವೆ.

> ಪೊಲೀಸರ ಮೇಲೆ ನಂಬಿಕೆಯಿದೆ. ನ್ಯಾಯ ಸಿಗುವ ಭರವಸೆಯಿದ್ದು, ಈ ಪ್ರಕರಣದ ಕುರಿತು ಹೆಚ್ಚಿನ ವಿಚಾರಗಳನ್ನು ಚರ್ಚಿಸುವುದಿಲ್ಲ
>
> **ಕಾರ್ತಿಕೇಶ್,** ಓಂ ಪ್ರಕಾಶ್ ಅವರ ಪುತ್ರ

> ಪ್ರಕರಣದ ಸಮಗ್ರ ತನಿಖೆ ಆಗುವವರೆಗೂ ಯಾವುದನ್ನೂ ಹೇಳಲು ಆಗುವುದಿಲ್ಲ. ಪ್ರಕರಣ ಬಗ್ಗೆ ಸಮಗ್ರ ತನಿಖೆ ನಡೆಸಲಾಗುತ್ತಿದೆ
>
> **ಜಿ.ಪರಮೇಶ್ವರ,** ಗೃಹ ಸಚಿವ

ಪಲ್ಲವಿ ಚಿಕಿತ್ಸೆಗೆ ₹40 ಲಕ್ಷ ಖರ್ಚು?

ಪಲ್ಲವಿ ಅವರು ಕೆಲವು ವರ್ಷಗಳಿಂದ ಖಿನ್ನತೆಯಿಂದ ಬಳಲುತ್ತಿದ್ದರು ಎನ್ನಲಾಗಿದೆ. ಓಂ ಪ್ರಕಾಶ್ ಅವರು ಪತ್ನಿಗೆ ಇಂದಿರಾನಗರದ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು. ಚಿಕಿತ್ಸೆಗೆಂದು ₹40 ಲಕ್ಷದಷ್ಟು ಖರ್ಚು ಮಾಡಿದ್ದರು. ಈ ವಿಚಾರವನ್ನು ಓಂ ಪ್ರಕಾಶ್ ಅವರು ತಮ್ಮ ಆತ್ಮೀಯರೊಂದಿಗೆ ಹೇಳಿಕೊಂಡಿದ್ದರು ಎಂದು ಮೂಲಗಳು ತಿಳಿಸಿವೆ.



ದೇಗುಲ ದರ್ಶನ

ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಪತ್ನಿ ಉಷಾ ವ್ಯಾನ್ಸ್ ಮತ್ತು ದಂಪತಿಯ ಮೂವರು ಮಕ್ಕಳು ದೆಹಲಿಯಲ್ಲಿರುವ ಸ್ವಾಮಿನಾರಾಯಣ ಅಕ್ಷರಧಾಮ ದೇವಸ್ಥಾನಕ್ಕೆ ಸೋಮವಾರ ಭೇಟಿ ನೀಡಿದರು – ಎಎಫ್‌ಪಿ ಚಿತ್ರ

ಸುದ್ದಿ 7

'ತಾರತಮ್ಯ'ಕ್ಕೆ ಜೈಲು, ದಂಡ

'ರೋಹಿತ್ ವೇಮುಲ ಕಾಯ್ದೆ'ಯ ಕರಡು

● ರಾಜೇಶ್ ರೈ ಚಟ್ಲ

ಬೆಂಗಳೂರು: ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ) ಮತ್ತು ಇತರ ಹಿಂದುಳಿದ ವರ್ಗಗಳು (ಒಬಿಸಿ) ಹಾಗೂ ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣ ಹಕ್ಕು ಕಲ್ಪಿಸುವ ಉದ್ದೇಶದಿಂದ 'ರೋಹಿತ್ ವೇಮುಲ ಕಾಯ್ದೆ' ರೂಪಿಸಲು ರಾಜ್ಯ ಸರ್ಕಾರ ಮುಂದಾಗಿದೆ.

ಈ ಉದ್ದೇಶದಿಂದ ಸಿದ್ಧಗೊಂಡಿರುವ 'ಕರ್ನಾಟಕ ರೋಹಿತ್ ವೇಮುಲ (ಹೊರಗಿಡುವಿಕೆ ಅಥವಾ ಅನ್ಯಾಯದಿಂದ ರಕ್ಷಣೆ) (ಶಿಕ್ಷಣ ಹಕ್ಕು ಮತ್ತು ಘನತೆ) ಮಸೂದೆ– 2025'ರ ಕರಡು ಕಾನೂನು ಇಲಾಖೆಯ ಪರಿಶೀಲನೆಯಲ್ಲಿದೆ. ಅದರ ಪ್ರತಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

7ನೇ ಪುಟ ನೋಡಿ

ಪೋಪ್ ಫ್ರಾನ್ಸಿಸ್ ಇನ್ನಿಲ್ಲ

ವ್ಯಾಟಿಕನ್ ಸಿಟಿ (ಎಪಿ/ಎಎಫ್‌ಪಿ): ವಿನಮ್ರ ವ್ಯಕ್ತಿತ್ವ, ಬಡವರ ಬಗ್ಗೆ ಹೊಂದಿದ್ದ ಅಪಾರ ಕಾಳಜಿಯಿಂದ ಜಗತ್ತನ್ನೇ ಮೋಡಿ ಮಾಡಿದ್ದ ಪೋಪ್ ಫ್ರಾನ್ಸಿಸ್ (88) ಸೋಮವಾರ ನಿಧನರಾದರು.

ಪೋಪ್ ಹುದ್ದೆಗೇರಿದ ಲ್ಯಾಟಿನ್ ಅಮೆರಿಕದ ಮೊದಲ ಧರ್ಮಗುರು ಅವರು. ಪಾರ್ಶ್ವವಾಯುವಿನಿಂದಾಗಿ ಕೋಮಾಕ್ಕೆ ಜಾರಿದರು, ಹೃದಯ ವೈಫಲ್ಯ ಉಂಟಾಯಿತು ಎಂದು ವ್ಯಾಟಿಕನ್ ತಿಳಿಸಿದೆ. ಸ್ಥಳೀಯ ಕಾಲಮಾನ ಸೋಮವಾರ ಬೆಳಿಗ್ಗೆ 7.35ಕ್ಕೆ ಅವರು ನಿಧನರಾದರು. ನಿಧನದ ಸುದ್ದಿ ಘೋಷಣೆ ಆಗುತ್ತಿದ್ದಂತೆ ರೋಮ್‌ನಾದ್ಯಂತ ಚರ್ಚ್‌ಗಳಲ್ಲಿ ಗಂಟೆಯ ನಾದ ಮೊಳಗಿತು.

11ನೇ ಪುಟ ನೋಡಿ



17.12.1936 - 21.4. 2025

ಬಾಲಕಿ ಮೇಲೆ ಅತ್ಯಾಚಾರ, ಕೊಲೆ: ಅಪರಾಧಿಗೆ ಗಲ್ಲು

ಪ್ರಜಾವಾಣಿ ವಾರ್ತೆ

ಕಲಬುರಗಿ: ಬಾಲಕಿ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಿ ಶವವನ್ನು ಬಾವಿಗೆ ಎಸೆದಿದ್ದ ಅಪರಾಧಿ, ಆಳಂದ ತಾಲ್ಲೂಕಿನ ದೇವಂತಗಿ ಗ್ರಾಮದ ಗುಂಡೇರಾವ ಚೋಪಡೆ (28) ಎಂಬಾತನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯವು ಸೋಮವಾರ ಗಲ್ಲು ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದೆ.



ಗುಂಡೇರಾವ

ಬಾಲಕಿ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣವು ಜಿಲ್ಲೆಯಾದ್ಯಂತ ತೀವ್ರ ಆಕ್ರೋಶಕ್ಕೆ ಕಾರಣವಾಗಿತ್ತು.

2023ರ ಜುಲೈ 15ರಂದು ವಚನ ಪುಸ್ತಕವೊಂದನ್ನು ತರಲು ಆಳಂದ ತಾಲ್ಲೂಕಿನ ಗ್ರಾಮವೊಂದರಿಂದ ಮತ್ತೊಂದು ಗ್ರಾಮಕ್ಕೆ ನಡೆದುಕೊಂಡು ಹೋಗುತ್ತಿದ್ದ 11 ವರ್ಷದ ಬಾಲಕಿಯನ್ನು ಕೃಷಿ ಕೆಲಸ ಮಾಡುತ್ತಿದ್ದ ಗುಂಡೇರಾವ ಬಲವಂತವಾಗಿ ಕಬ್ಬಿನ ಗದ್ದೆಗೆ ಎಳೆದೊಯ್ದು ಅತ್ಯಾಚಾರ ಎಸಗಿದ್ದ. ನಂತರ ಉಸಿರುಗಟ್ಟಿಸಿ ಸಾಯಿಸಿ ಪಕ್ಕದ ಹೊಲದ ಬಾವಿಗೆ ಶವವನ್ನು ಎಸೆದಿದ್ದ. ಸಾಕ್ಷ್ಯಗಳು ಇಲ್ಲದ್ದರಿಂದ ತನಿಖೆ ನಡೆಸುವುದು ಪೊಲೀಸರಿಗೂ ಸವಾಲಾಗಿತ್ತು.

7ನೇ ಪುಟ ನೋಡಿ

'ಚುನಾವಣಾ ಆಯೋಗದ ರಾಜಿ ಸ್ಪಷ್ಟವಾಗಿದೆ'

ಬಾಸ್ಟನ್ (ಪಿಟಿಐ): ಅಮೆರಿಕ ಪ್ರವಾಸದಲ್ಲಿರುವ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯನ್ನು ಉಲ್ಲೇಖಿಸಿ, 'ಚುನಾವಣಾ ಆಯೋಗವು ರಾಜಿ ಮಾಡಿಕೊಂಡಿದೆ' ಎಂದು ಆರೋಪಿಸಿದ್ದಾರೆ. 7

ಚಿನಕುರುಳಿ


ಪ್ರಕಾಶ್ ಶೆಟ್ಟಿ



ಪ್ರಾಧ್ಯಾಪಕ ಹುದ್ದೆಗೆ ₹50 ಲಕ್ಷ?

ವೈದ್ಯಕೀಯ ಕಾಲೇಜು ನೇಮಕಾತಿಯಲ್ಲಿ ಅಕ್ರಮ: ದೂರು

● ಎಂ.ಎನ್.ಯೋಗೇಶ್



ಚಿತ್ರದುರ್ಗ: ನಗರದ ಸರ್ಕಾರಿ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಪ್ರಾಧ್ಯಾಪಕ ಹುದ್ದೆಗಳಿಗೆ ₹50 ಲಕ್ಷ ಲಂಚ ಪಡೆಯಲಾಗಿದೆ ಎಂಬ ಆರೋಪ ರಾಜ್ಯದ ವೈದ್ಯಕೀಯ ಕಾಲೇಜು ವಲಯದಲ್ಲಿ ಸಂಚಲನ ಸೃಷ್ಟಿಸಿದೆ. ಈ ಕುರಿತು ಜಿಲ್ಲಾಧಿಕಾರಿ, ಪ್ರಾದೇಶಿಕ ಆಯುಕ್ತರ (ಆರ್‌.ಸಿ) ಕಚೇರಿಗಳಿಗೆ ದೂರುಗಳ ಸುರಿಮಳೆಯೇ ದಾಖಲಾಗಿದೆ.

2023–24ನೇ ಸಾಲಿನಲ್ಲಿ ಆರಂಭವಾದ ವೈದ್ಯಕೀಯ ಕಾಲೇಜಿಗೆ 58 ಬೋಧಕ ಹುದ್ದೆಗಳ ಮಂಜೂರಾತಿ ಇದೆ. ಅದರಲ್ಲಿ 36 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, ತಾತ್ಕಾಲಿಕ ಪಟ್ಟಿ ಪ್ರಕಟಿಸಲಾಗಿದೆ. ಪ್ರಾಧ್ಯಾಪಕ ಹುದ್ದೆಗೆ ₹50 ಲಕ್ಷ, ಸಹ ಪ್ರಾಧ್ಯಾಪಕ ಹುದ್ದೆಗೆ ₹40 ಲಕ್ಷ, ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ₹25 ಲಕ್ಷದಿಂದ ₹30 ಲಕ್ಷದವರೆಗೂ ಲಂಚ ಪಡೆಯಲಾಗಿದೆ ಎಂಬ ದೂರುಗಳು ದಾಖಲಾಗಿವೆ.

ವ್ಯಾಪಕ ದೂರುಗಳ ಕಾರಣ ಪ್ರಾದೇಶಿಕ ಆಯುಕ್ತ ಆದಿತ್ಯ ಆಮ್ಲಾನ್ ಬಿಸ್ವಾಸ್, ಜಿಲ್ಲಾಧಿಕಾರಿ ಟಿ.ವೆಂಕಟೇಶ್ ಅವರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಯ ನಿರ್ದೇಶಕ ಡಾ.ಯುವರಾಜ್ ಅವರಿಗೆ ನೋಟಿಸ್ ಜಾರಿಗೊಳಿಸಿದ್ದಾರೆ. ಜೊತೆಗೆ ವೈದ್ಯಕೀಯ ಶಿಕ್ಷಣ ಇಲಾಖೆಗೂ ಹಲವರು ಪತ್ರ ಬರೆದಿದ್ದು ಸಮಗ್ರ ತನಿಖೆಗೆ ಒತ್ತಾಯಿಸಿದ್ದಾರೆ. ಹೀಗಾಗಿ ತಾತ್ಕಾಲಿಕ ಪಟ್ಟಿ ತೂಗುಯ್ಯಾಲೆಯಲ್ಲಿ ನೇತಾಡುವಂತಾಗಿದೆ.

> ಚಿತ್ರದುರ್ಗ ಬಿಟ್ಟು ಬೆಂಗಳೂರಿನಲ್ಲಿ ಸಂದರ್ಶನ ನಡೆಸಿರುವುದೇ ಅನುಮಾನಾಸ್ಪದ. ದೂರುಗಳ ಗಾಂಭೀರ್ಯ ಗಮನಿಸಿದರೆ ನೇಮಕಾತಿ ಪ್ರಕ್ರಿಯೆ ಬಗ್ಗೆ ಸಮಗ್ರ ತನಿಖೆಯ ಅವಶ್ಯಕತೆ ಇದೆ
>
> **ಆದಿತ್ಯ ಆಮ್ಲಾನ್ ಬಿಸ್ವಾಸ್,** ಪ್ರಾದೇಶಿಕ ಆಯುಕ್ತ, ಬೆಂಗಳೂರು

> ನಿಯಮ ಉಲ್ಲಂಘಿಸಿ ಆಯ್ಕೆ ಪ್ರಕ್ರಿಯೆ ನಡೆಸಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ತಾತ್ಕಾಲಿಕ ಆಯ್ಕೆ ಪಟ್ಟಿ ರದ್ದತಿ ಬಗ್ಗೆ ಮುಂದಿನ ಕ್ರಮ ವಹಿಸುವಂತೆ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆಯಲಾಗುವುದು
>
> **ಟಿ.ವೆಂಕಟೇಶ್,** ಜಿಲ್ಲಾಧಿಕಾರಿ, ಚಿತ್ರದುರ್ಗ

> ಆರ್‌.ಸಿ, ಡಿ.ಸಿ ನೋಟಿಸ್‌ಗೆ ಉತ್ತರ ನೀಡಿದ್ದೇನೆ. ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿರುವ ಕಾರಣ ಮುಂದಿನ ಆದೇಶಕ್ಕಾಗಿ ಸರ್ಕಾರಕ್ಕೆ ಮನವಿ ಸಲ್ಲಿಸಲಾಗಿದೆ
>
> **ಡಾ.ಯುವರಾಜ್, ನಿರ್ದೇಶಕ**
>
> ಚಿತ್ರದುರ್ಗ ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ

11ನೇ ಪುಟ ನೋಡಿ

‘ದಲಿತರನ್ನು ರಾಜಕೀಯ ಪಕ್ಷಗಳು ಒಡೆಯುತ್ತಿವೆ’

ಕೆ.ಆರ್.ಪುರ: ರಾಜಕೀಯ ಪಕ್ಷಗಳು ದಲಿತ ಸಮುದಾಯಗಳನ್ನು ಎಡ, ಬಲ ಎಂದು ಒಡೆಯುತ್ತಿವೆ ಎಂದು ರಾಜ್ಯ ಬಿಜೆಪಿ ಎಸ್‌ಸಿಎಸ್‌ಟಿ ಮೋರ್ಚಾ ಉಪಾಧ್ಯಕ್ಷ ಎಚ್.ವಿ.ಮಂಜುನಾಥ್ ದೂರಿದರು. ಹೂಡಿಯಲ್ಲಿ ಮಹದೇವಪುರ ದಲಿತ ಸಂಘ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಏ.27ರಿಂದ ಮೆಮು ರೈಲು ಸಂಚಾರ ಭಾಗಶಃ ರದ್ದು

ಬೆಂಗಳೂರು: ದೇವನಗೊಂದಿ, ವೈಟ್‌ಫೀಲ್ಡ್ ರೈಲು ನಿಲ್ದಾಣಗಳ ನಡುವೆ ನಿರ್ವಹಣೆ ಮತ್ತು ಹಳಿ ಜೋಡಣೆ ಕಾಮಗಾರಿ ನಡೆಸಲು ಏಪ್ರಿಲ್ 27ರಿಂದ ಮೇ 3ರವರೆಗೆ ಮೆಮು ರೈಲುಗಳ ಸಂಚಾರ ಭಾಗಶಃ ರದ್ದು ಮಾಡಲಾಗಿದೆ.

ಕೆಎಸ್‌ಆರ್ ಬೆಂಗಳೂರು-ಮಾರಿಕುಪ್ಪಂ ಮೆಮು ರೈಲು ಬಂಗಾರಪೇಟೆ ವರೆಗೆ ಮಾತ್ರ ಸಂಚರಿಸಲಿದೆ. ಮಾರಿಕುಪ್ಪಂ-ಕೃಷ್ಣರಾಜಪುರ ಮೆಮು ರೈಲು ಮಾರಿಕುಪ್ಪಂನಿಂದ ಹೊರಡುವ ಬದಲು ಬಂಗಾರಪೇಟೆಯಿಂದ ನಿಗದಿತ ನಿರ್ಗಮನ ಸಮಯದಲ್ಲಿ ಪ್ರಯಾಣಿಸಲಿದೆ. ಮಾರಿಕುಪ್ಪಂ ಮತ್ತು ಬಂಗಾರಪೇಟೆ ನಡುವೆ ಸಂಚರಿಸಲ್ಲ ಎಂದು ನೈರುತ್ಯ ರೈಲ್ವೆ ತಿಳಿಸಿದೆ.

ಸಂಚಾರ ಬದಲಾವಣೆ: ಚನ್ನಸಂದ್ರ ನಿಲ್ದಾಣದ ಯಾರ್ಡ್ ಬಳಿ ರೈಲ್ವೆ ಹಳಿ ಕಾಮಗಾರಿ ನಡೆಸಲಿದ್ದು ಕೆಎಸ್‌ಆರ್ ಬೆಂಗಳೂರು-ನಾಂದೇಡ್ ದೈನಂದಿನ ಎಕ್ಸ್‌ಪ್ರೆಸ್ ರೈಲು ಸಂಚಾರದಲ್ಲಿ ಬದಲಾವಣೆ ಉಂಟಾಗಲಿದೆ.

ಏಪ್ರಿಲ್ 24, 25, 28, 30 ಹಾಗೂ ಮೇ 1 ಕೆಎಸ್‌ಆರ್ ಬೆಂಗಳೂರಿನಿಂದ ನಿಗದಿತ ಸಮಯಕ್ಕಿಂತ 45 ನಿಮಿಷ ತಡವಾಗಿ ಪ್ರಯಾಣಿಸಲಿದೆ. ಕೆಎಸ್‌ಆರ್ ಯಶವಂತಪುರ, ಯಲಹಂಕ ಮಾರ್ಗವಾಗಿ ಸಂಚರಿಸುತ್ತದೆ.



ಅನಧಿಕೃತ ಜಾಹೀರಾತು ತೆರವಿಗೆ ಆಯುಕ್ತ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಬೇಕು ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸೋಮವಾರ ನಡೆದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ‘ಅನಧಿಕೃತ ಜಾಹೀರಾತು ಅಳವಡಿಸುವ ವಿಚಾರವಾಗಿ ಹೈಕೋರ್ಟ್, ಉಪ ಮುಖ್ಯಮಂತ್ರಿಯವರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚನೆ ನೀಡಿದ್ದರು. ಆದರೂ ಇತ್ತೀಚಿಗೆ ಉಲ್ಲಂಘನೆಗಳು ಹೆಚ್ಚುತ್ತಿದ್ದು, ಅದನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಬೇಕು’ ಎಂದರು.

‘ನಗರದಲ್ಲಿ ಅನಧಿಕೃತ ಜಾಹೀರಾತು ಅಳವಡಿಸುವವರ ವಿರುದ್ಧ ಕ್ರಮ ಕೈಗೊಳ್ಳಲು ಹೊಸದಾಗಿ ಸುತ್ತೋಲೆ ಹೊರಡಿಸಲಾಗುತ್ತಿದೆ. ಅದರಲ್ಲಿ, ವಾರ್ಡ್ ವ್ಯಾಪ್ತಿಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಎಂಜಿನಿಯರ್ ಹಾಗೂ ಕಿರಿಯ ಎಂಜಿನಿಯರ್‌ಗೆ ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸುವ ಅಧಿಕಾರ ನೀಡಲಾಗುತ್ತದೆ. ಎಫ್‌ಐಆರ್ ದಾಖಲಿಸಿ, ತೆರವುಗೊಳಿಸುವುದಕ್ಕೆ ಆಗುವ ವೆಚ್ಚವನ್ನು ವಸೂಲಿ ಮಾಡುವುದರ ಜೊತೆಗೆ ದುಪ್ಪಟ್ಟು ದಂಡ ವಿಧಿಸುವ ಜವಾಬ್ದಾರಿಯನ್ನು ನೀಡಲಾಗುವುದು’ ಎಂದರು.



ತುಷಾರ್ ಗಿರಿನಾಥ್

ಮುಂಜಾಗ್ರತೆ ಕ್ರಮ: ರಾಜ ಕಾಲುವೆಗಳ ಹೂಳನ್ನು ತೆರವು ಮಾಡಬೇಕು. ವಾರ್ಡ್ ರಸ್ತೆ ಹಾಗೂ ಪ್ರಮುಖ ರಸ್ತೆಗಳ ಚರಂಡಿಗಳ ಹೂಳೆತ್ತಬೇಕು. ಮಳೆಗಾಲದ ಪ್ರಾರಂಭಕ್ಕೂ ಮೊದಲು ಆದ್ಯತೆ ಮೇರೆಗೆ ಸ್ವಚ್ಛತಾ ಕಾರ್ಯ ನಡೆಸಿ, ಎಲ್ಲಿಯೂ ಸಮಸ್ಯೆಯಾಗದಂತೆ ಕ್ರಮವಹಿಸಬೇಕು ಎಂದು ಸೂಚಿಸಿದರು.

ವಲಯ ವ್ಯಾಪ್ತಿಯ ರಸ್ತೆಗಳಲ್ಲಿ ಗುಂಡಿಗಳನ್ನು ಗುರುತಿಸಿ, ಶೀಘ್ರವೇ ಅವುಗಳನ್ನು ಮುಚ್ಚುವ ಕಾರ್ಯಾಚರಣೆ ನಡೆಸಬೇಕು ಎಂದು ಅಧಿಕಾರಿಗಳಿಗೆ ಆದೇಶಿಸಿದರು. ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಸುರಳ್ಕರ್ ವಿಕಾಸ್ ಕಿಶೋರ್, ಕೆ. ಹರೀಶ್ ಕುಮಾರ್, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರಾದ ಸತೀಶ್, ರಮೇಶ್, ರಮ್ಯಾ, ಕರೀಗೌಡ, ದಿಗ್ವಿಜಯ್ ಬೋಡ್ಕೆ, ನವೀನ್ ಕುಮಾರ್ ಉಪಸ್ಥಿತರಿದ್ದರು.

ಗುಟ್ಕಾ ಜಗಿದವನಿಗೆ ‘ಉಗಿದ’ ಮೆಟ್ರೊ ಪ್ರಯಾಣಿಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಸಿರು ಮಾರ್ಗದಲ್ಲಿ ‘ನಮ್ಮ ಮೆಟ್ರೊ’ದಲ್ಲಿ ಪ್ರಯಾಣದ ವೇಳೆ ಗುಟ್ಕಾ ಹಾಕುತ್ತಿದ್ದ ವ್ಯಕ್ತಿಗೆ ಪ್ರಯಾಣಿಕರು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಸೋಮವಾರ ಬೆಳಿಗ್ಗೆ 10 ಗಂಟೆಗೆ ಸಂಪಿಗೆ ರಸ್ತೆ ಮೆಟ್ರೊ ನಿಲ್ದಾಣದಿಂದ ರೈಲು ಮುಂದಕ್ಕೆ ಚಲಿಸುವಾಗ ಮೆಟ್ರೊ ಪ್ರಯಾಣಿಕ ಗುಟ್ಕಾ ತಿನ್ನುತ್ತಿರುವುದನ್ನು ಕಂಡು ಪ್ರಶ್ನಿಸಿದೆ’ ಎಂದು ಸಹ ಪ್ರಯಾಣಿಕ ಮದನ್ ರೆಡ್ಡಿ ಅವರು ‘ಎಕ್ಸ್’ನಲ್ಲಿ ವಿಡಿಯೊ ಹಂಚಿಕೊಂಡಿದ್ದಾರೆ. ‘ಭದ್ರತಾ ತಪಾಸಣೆಯ ಸಮಯದಲ್ಲಿ ಪಾನ್ ಮಸಾಲಾ ಸ್ಕ್ಯಾನರ್‌ಗಳು ಕೂಡ ಅಗತ್ಯವಿವೆ ಎಂದು ತೋರುತ್ತಿದೆ’ ಎಂದೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಮೆಟ್ರೊ ನಮ್ಮ ಸೊತ್ತು. ಗುಟ್ಕಾ ಜಗಿದು ಉಗಿದು ಹಾಳು ಮಾಡಬೇಡಿ’ ಎಂದು ಪ್ರಯಾಣಿಕರು ಹೇಳುವುದು, ‘ನಾನು ಗುಟ್ಕಾ ಹಾಕಿದರೆ ನಿಮಗೇನು ಸಮಸ್ಯೆ? ಮೆಟ್ರೊ ನನ್ನ ಸೊತ್ತು’ ಎಂದು ಗುಟ್ಕಾ ಹಾಕಿದವರು ಪ್ರತಿಕ್ರಿಯಿಸಿದ್ದರು. ‘ಮೆಟ್ರೊದಲ್ಲಿ ಗುಟ್ಕಾ ಹಾಕುವಂಗಿಲ್ಲ’ ಎಂದು ಪ್ರಯಾಣಿಕರು ತಿಳಿಸಿದಾಗ, ‘ಸರಿ ಆಯ್ತು ಬಿಡಿ’ ಎಂದು ಮರು ಉತ್ತರ ನೀಡಿದ್ದರು. ‘ಏನು ಆಯ್ತು ಬಿಡಿ. ಮೊದಲು ಮೆಟ್ರೊದಿಂದ ಇಳಿಯಿರಿ’ ಎಂದು ಪ್ರಯಾಣಿಕರು ಹೇಳುತ್ತಿರುವುದು ವಿಡಿಯೊದಲ್ಲಿದೆ.



ನಮ್ಮ ಮೆಟ್ರೊ ರೈಲಿನಲ್ಲಿ ವ್ಯಕ್ತಿಯೊಬ್ಬರು ಗುಟ್ಕಾ ತಿನ್ನುತ್ತಿರುವುದು

ಇದೇ ವಿಡಿಯೊವನ್ನು ಸಂಸದ ಪಿ.ಸಿ. ಮೋಹನ್ ‘ಎಕ್ಸ್’ನಲ್ಲಿ ಮರು ಹಂಚಿಕೊಂಡಿದ್ದು, ‘ಮೆಟ್ರೊ ಸಂಚಾರ ಇರುವುದು ಪಾನ್ ಹಾಕಿಕೊಂಡು ಅನೈರ್ಮಲ್ಯ ಸೃಷ್ಟಿಸಲು ಅಲ್ಲ. ಸಾರ್ವಜನಿಕ ಸಾರಿಗೆ ನಿಮ್ಮ ಪಾನ್ ಅಂಗಡಿಯಲ್ಲ. ನಮ್ಮ ಮೆಟ್ರೊ ಸ್ಥಳಗಳ ನೈರ್ಮಲ್ಯ ಕಾಪಾಡಲು ಕ್ರಮ ಅಗತ್ಯವಿದೆ. ಬಿಎಂಆರ್‌ಸಿಎಲ್ ಕ್ರಮ ಕೈಗೊಳ್ಳಬೇಕು. ಮೆಟ್ರೊವನ್ನು ಪಾನ್‌ಗಳಿಂದ ವರ್ಣಮಯಗೊಳಿಸುವುದು ಬೇಡ. ಸ್ವಚ್ಛವಾಗಿ ಇಡಬೇಕು’ ಎಂದು ಒತ್ತಾಯಿಸಿದ್ದಾರೆ.

ನೀರು ಪೂರೈಕೆ ಮಾಫಿಯಾ ನಿಯಂತ್ರಣಕ್ಕೆ ಕ್ರಮ • ಟ್ಯಾಂಕರ್ ನೀರು ಬೇಡಿಕೆ ಸಲ್ಲಿಕೆಗೆ 'ಆನ್‌ಲೈನ್' ವ್ಯವಸ್ಥೆ

ಮನೆ ಬಾಗಿಲಿಗೆ 'ಸಂಚಾರಿ ಕಾವೇರಿ'

ನೀರು ಪೂರೈಕೆ ಪ್ರಕ್ರಿಯೆ

- ಗ್ರಾಹಕರು ಆ್ಯಪ್‌ನಲ್ಲಿ ನೀರಿನ ಬೇಡಿಕೆಗೆ ನೋಂದಾಯಿಸಬೇಕು
- ಅದು ಜಲಮಂಡಳಿಯ 'ಕೇಂದ್ರ'ಕ್ಕೆ ತಲುಪಿ, ಅಲ್ಲಿಂದ ಗ್ರಾಹಕರಿಗೆ ಹತ್ತಿರುವಿರುವ ಟ್ಯಾಂಕರ್‌ಗೆ ಮಾಹಿತಿ ರವಾನೆಯಾಗುತ್ತದೆ
- ಟ್ಯಾಂಕರ್‌ನವರು 'ಕಾವೇರಿ ಸಂಪರ್ಕ ಕೇಂದ್ರ'ಕ್ಕೆ ತೆರಳುತ್ತಾರೆ
- ಟ್ಯಾಂಕರ್‌ನಲ್ಲಿರುವ ಆರ್‌ಎಫ್‌ಐಡಿ ಟ್ಯಾಗ್(ಫಾಸ್ಟ್ ಟ್ಯಾಗ್ ರೀತಿ) ಸ್ಕ್ಯಾನ್ ಆಗುತ್ತದೆ
- ಕೇಂದ್ರದಲ್ಲಿ ಟ್ಯಾಂಕರ್‌ಗೆ ನೀರು ತುಂಬಿಸಿಕೊಂಡು, ಗ್ರಾಹಕರ ವಿಳಾಸದತ್ತ ಹೊರಡುತ್ತದೆ
- ಆ್ಯಪ್‌ನಲ್ಲಿ ಆಟೊ, ಟ್ಯಾಕ್ಸಿ ಬುಕ್ ಮಾಡಿ, ಟ್ರ್ಯಾಕ್ ಮಾಡುವ ಪರಿಕಲ್ಪನೆಯಲ್ಲೇ ಈ ವ್ಯವಸ್ಥೆಯೂ ನಡೆಯುತ್ತದೆ.
- 'ಆರ್‌ಎಫ್‌ಐಡಿ'ಯಿಂದ ಗ್ರಾಹಕರಿಗೆ ಮತ್ತು ಜಲಮಂಡಳಿಗೆ ನೀರು ಪೂರೈಕೆಯ ಅಷ್ಟೂ ಮಾಹಿತಿ ಸಿಗುತ್ತದೆ

• ಗಾಣಧಾಳು ಶ್ರೀಕಂಠ

ಬೆಂಗಳೂರು: ನಗರದಲ್ಲಿ ನೀರಿನ ಕೊರತೆಯನ್ನೇ ಬಂಡವಾಳ ಮಾಡಿಕೊಂಡು ಜನರನ್ನು ಸುಲಿಗೆ ಮಾಡುವ ಟ್ಯಾಂಕರ್ ಮಾಫಿಯಾ ನಿಯಂತ್ರಣಕ್ಕೆ ಬೆಂಗಳೂರು ಜಲಮಂಡಳಿಯ 'ಸಂಚಾರಿ ಕಾವೇರಿ' (ಕಾವೇರಿ ಆನ್ ವೀಲ್ಸ್) ಕೆಲವೇ ದಿನಗಳಲ್ಲಿ ಕಾರ್ಯರೂಪಕ್ಕೆ ಬರಲಿದೆ. ಇನ್ನು ನಗರದ ನಾಗರಿಕರು ಕೊಳವೆಬಾವಿಗಳ ನೀರಿಗೆ ದುಬಾರಿ ದರ ತೆರುವ ಬದಲಿಗೆ ನೇರವಾಗಿ ಕಾವೇರಿ ನೀರನ್ನೇ ತರಿಸಿಕೊಳ್ಳಬಹುದು.

ಯೋಜನೆ ಅನುಷ್ಠಾನಕ್ಕೆ ಪೂರಕವಾಗಿ ಕ್ಯೂಆರ್ ಕೋಡ್ ಆಧಾರದಲ್ಲಿ ನೀರಿಗೆ ಬೇಡಿಕೆ ಸಲ್ಲಿಸುವ ವ್ಯವಸ್ಥೆ, ನೀರು ಪೂರೈಕೆಗೆ ಬೇಕಾದ ಟ್ಯಾಂಕರ್ ಎಲ್ಲವೂ ಸಿದ್ಧವಾಗಿವೆ. ಕಾವೇರಿ ಸಂಚಾರಿ ಯೋಜನೆಗಾಗಿ ನೋಂದಣಿಯಾಗಿರುವ ನೀರಿನ ಟ್ಯಾಂಕರ್ ಗಳನ್ನು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಶನಿವಾರ ಪರಿಶೀಲಿಸಿದ್ದಾರೆ.

'ದೇಶದಲ್ಲೇ ಮೊದಲ ಬಾರಿಗೆ ಆನ್‌ಲೈನ್ ಮೂಲಕ ನಾಗರಿಕರು ತಮಗೆ ಅಗತ್ಯವಿರುವಷ್ಟು ಶುದ್ಧ ಕುಡಿಯುವ ನೀರಿಗೆ (ಟ್ಯಾಂಕರ್ ನೀರು) ಬೇಡಿಕೆ ಸಲ್ಲಿಸುವಂತಹ ಹೊಸ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ' ಎಂದು ಹೇಳಿದ್ದಾರೆ.

ಬೇಸಿಗೆಯಲ್ಲಿ ನೀರಿನ ಕೊರತೆ ಹೆಚ್ಚುತ್ತದೆ. ಇದರ ಲಾಭ ಪಡೆಯಲು ಖಾಸಗಿ ಟ್ಯಾಂಕರ್‌ಗಳ ಮಾಲೀಕರು ನೀರಿನ ದರ ಹೆಚ್ಚಿಸಿ, ಜನರಿಂದ ದುಬಾರಿ ದರ ವಸೂಲಿ ಮಾಡುತ್ತಾರೆ. ಇದಕ್ಕೆ ಕಡಿವಾಣ ಹಾಕುವುದಕ್ಕಾಗಿ ಈ ಯೋಜನೆಯನ್ನು ಜಲಮಂಡಳಿ ಅನುಷ್ಠಾನಗೊಳಿಸುತ್ತಿದೆ.

'ಸಂಚಾರಿ ಕಾವೇರಿ' ಯೋಜನೆಗಾಗಿ ಈಗಾಗಲೇ ಸುಮಾರು 160 ಟ್ಯಾಂಕರ್‌ಗಳ ಮಾಲೀಕರು ಜಲಮಂಡಳಿಯಲ್ಲಿ ನೋಂದಣಿ ಮಾಡಿಕೊಂಡಿದ್ದಾರೆ. ಜಲಮಂಡಳಿಯ ಬಳಿ 80 ಟ್ಯಾಂಕರ್‌ಗಳಿವೆ. ಆಸಕ್ತರು ನೋಂದಣಿ ಮಾಡಿಕೊಳ್ಳುವಂತೆ ಜಲಮಂಡಳಿ ಪ್ರಕಟಣೆಯನ್ನೂ ನೀಡಿದೆ.

ಆ್ಯಪ್-ಆನ್‌ಲೈನ್ ವೇದಿಕೆ ಸಿದ್ಧ: ಗ್ರಾಹಕರು, ಜಲಮಂಡಳಿ ಅಭಿವೃದ್ಧಿ ಪಡಿಸಿರುವ ಮೊಬೈಲ್ ಅಪ್ಲಿಕೇಷನ್ (ಆ್ಯಪ್) ಮತ್ತು ಮಂಡಳಿಯ ಜಾಲತಾಣದಲ್ಲಿರುವ ಆನ್‌ಲೈನ್ ಪ್ಲಾಟ್‌ಫಾರ್ಮ್ ಮೂಲಕ ನೀರಿನ ಬೇಡಿಕೆಯನ್ನು ಸಲ್ಲಿಸಬಹುದು. ಹಾಗೆಯೇ ಹಣವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. ಪಾರದರ್ಶಕತೆ ದೃಷ್ಟಿಯಿಂದ ಎಲ್ಲ ಪ್ರಕ್ರಿಯೆಯೂ ಆನ್‌ಲೈನ್ ಮೂಲಕವೇ ನಡೆಯುವಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಟ್ಯಾಂಕರ್ ನೀರಿಗೆ ಬೇಡಿಕೆ ಸಲ್ಲಿಸುವ ಆ್ಯಪ್ ಹಾಗೂ ಆನ್‌ಲೈನ್ ವೇದಿಕೆ ಎರಡರ ಪರೀಕ್ಷಾರ್ಥ ಪ್ರಯೋಗಗಳು ಯಶಸ್ವಿಯಾಗಿವೆ. ಯೋಜನೆ ಆರಂಭವಾಗುತ್ತಿದ್ದಂತೆ ಸಾರ್ವಜನಿಕರ ಬಳಕೆಗೆ ಮುಕ್ತಗೊಳಿಸಲಾಗುತ್ತದೆ ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.

ಕಾರ್ಯನಿರ್ವಹಣೆ ಹೇಗೆ ?: ಆ್ಯಪ್ ಆಧಾರಿತ ವ್ಯವಸ್ಥೆಯಲ್ಲಿ ಎಲ್ಲವನ್ನೂ ತಂತ್ರಾಂಶದ ಜೊತೆ ಸಂಯೋಜಿಸಲಾಗಿದೆ. ಅಲ್ಲಿ ಬೇಡಿಕೆ ಸಲ್ಲಿಕೆ ಮತ್ತು ಪಾವತಿಗಳನ್ನು ಡಿಜಿಟಲ್ ರೂಪದಲ್ಲಿ ಮಾಡಲಾಗುತ್ತದೆ.

ಜಲಮಂಡಳಿಗೆ ನೋಂದಣಿ ಮಾಡಿಕೊಂಡಿರುವ ಎಲ್ಲ ಟ್ಯಾಂಕರ್‌ಗಳಿಗೆ ಜಿಪಿಎಸ್ ಅಳವಡಿಸಲಾಗುತ್ತದೆ. ಜೊತೆಗೆ ಆಟೊಮ್ಯಾಟಿಕ್ ಎನೇಬಲ್ಡ್ ರೇಡಿಯೊ ಫ್ರೀಕ್ವೆನ್ಸಿ ಐಡೆಂಟಿಫಿಕೇಷನ್ (ಆರ್‌ಎಫ್‌ಐಡಿ) ವ್ಯವಸ್ಥೆಯೂ ಇರುತ್ತದೆ. ನೀರಿಗೆ ಬೇಡಿಕೆ ಸಲ್ಲಿಸಿದ ಗ್ರಾಹಕರು, 'ನಾವು ಬುಕ್ ಮಾಡಿದ ಟ್ಯಾಂಕರ್ ಎಲ್ಲಿಂದ ಹೊರಟಿದೆ? ಎಲ್ಲಿ, ಎಷ್ಟು ನೀರು ತುಂಬಿಸಿಕೊಂಡಿದೆ? ಇನ್ನೂ ಎಷ್ಟು ದೂರದಲ್ಲಿದೆ ಎಂಬುದನ್ನು ಕುಳಿತಲ್ಲಿಂದಲೇ ಅರಿಯಬಹುದು. ನಂತರ ಗ್ರಾಹಕರ ನೋಂದಾಯಿತ ಮೊಬೈಲ್ ಸಂಖ್ಯೆಯ ಒಟಿಪಿ(ಒನ್ ಟೈಮ್ ಪಾಸ್‌ವರ್ಡ್) ಕಳುಹಿಸಲಾಗುತ್ತದೆ. ಈ ಒಟಿಪಿಯನ್ನು ಟ್ಯಾಂಕರ್ ಸಿಬ್ಬಂದಿಯೊಂದಿಗೆ ಹಂಚಿಕೊಂಡ ನಂತರವೇ ಅವರಿಗೆ ನೀರು ಸರಬರಾಜು ಮಾಡಲಾಗುತ್ತದೆ' ಎಂದು ಜಲಮಂಡಳಿ ಅಧಿಕಾರಿಗಳು ತಿಳಿಸಿದ್ದಾರೆ.



'ಸಂಚಾರಿ ಕಾವೇರಿ' ಟ್ಯಾಂಕರ್‌ಗಳನ್ನು ಪರಿಶೀಲಿಸಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್. ಈ ಸಂದರ್ಭದಲ್ಲಿ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಹಾಜರಿದ್ದರು

ಟ್ಯಾಂಕರ್ ನೀರಿನ ದರ (2 ಕಿ.ಮೀವರೆಗೆ)			
ಲೀಟರ್	ಟ್ಯಾಂಕರ್ ವೆಚ್ಚ	ನೀರಿನ ವೆಚ್ಚ	ಒಟ್ಟು ವೆಚ್ಚ
4,000	₹490	₹170	₹660
5000	₹490	₹210	₹700
6,000	₹490	250	₹740
*2 ಕಿ.ಮೀ ನಂತರದ ಪ್ರತಿ ಒಂದು ಕಿ.ಮೀಗೆ ₹50 (ಟ್ಯಾಂಕರ್ ವೆಚ್ಚ)			
12,000	₹800	490	₹1290
*2 ಕಿ.ಮೀ ನಂತರದ ಪ್ರತಿ ಒಂದು ಕಿ.ಮೀಗೆ ₹70 (ಟ್ಯಾಂಕರ್ ವೆಚ್ಚ)			

'ಟ್ಯಾಂಕರ್' ಅವಲಂಬಿತರಿಗಾಗಿ..

'110 ಹಳ್ಳಿಗಳ ವ್ಯಾಪ್ತಿಯೂ ಒಳಗೊಂಡಂತೆ ನಗರದಲ್ಲಿ ಟ್ಯಾಂಕರ್‌ಗಳ ಮೇಲೆ ಅವಲಂಬಿತರಾಗಿರುವ ಜನರಿಗೆ ಉತ್ತಮ ನೀರನ್ನು ಒದಗಿಸುವುದು ನಮ್ಮ ಮುಖ್ಯ ಗುರಿಯಾಗಿದೆ. ಆ ಕಾರಣಕ್ಕಾಗಿ ಸಂಚಾರಿ ಕಾವೇರಿ ಯೋಜನೆ ಆರಂಭಿಸುತ್ತಿದ್ದೇವೆ' ಎಂದು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಸದ್ಯ 6,000 ಲೀಟರ್ ಮತ್ತು 12,000 ಲೀಟರ್ ಸಾಮರ್ಥ್ಯದ ಟ್ಯಾಂಕರ್‌ಗಳಿವೆ. ಗ್ರಾಹಕರ ಬೇಡಿಕೆ ಆಧರಿಸಿ, ನೀರು ಪೂರೈಕೆದಾರರನ್ನು ಸಂಪರ್ಕಿಸಿ ಬೇರೆ ಬೇರೆ ಸಾಮರ್ಥ್ಯದ ಟ್ಯಾಂಕರ್‌ಗಳನ್ನು ನಿಯೋಜಿಸಲಾಗುತ್ತದೆ ಎಂದರು.

ಬೆಂಗಳೂರಿನ ಜನತೆಗೆ ನಿಗದಿತ ದರದಲ್ಲಿ ನೀರು ಪೂರೈಸಲು ಸೂಚಿಸಿದ್ದೆ. ಹೀಗಾಗಿ ಜಲಮಂಡಳಿಯವರು 'ಸಂಚಾರಿ ಕಾವೇರಿ' ಎಂಬ ವಿನೂತನ ಯೋಜನೆ ಪರಿಚಯಿಸುತ್ತಿದ್ದಾರೆ. ಈ ಯೋಜನೆ ದೇಶದಲ್ಲೇ ಮೊದಲು.
ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ

'ಸಂಚಾರಿ ಕಾವೇರಿ' ಯೋಜನೆಯ ಆ್ಯಪ್ ಮತ್ತು ಆನ್‌ಲೈನ್ ವೇದಿಕೆ ಸಿದ್ಧವಾಗಿದೆ. ಈ ತಿಂಗಳ ಅಂತ್ಯಕ್ಕೆ ಸಾರ್ವಜನಿಕರ ಸೇವೆಗೆ ಲಭ್ಯವಾಗಲಿದೆ.
ರಾಮ್‌ಪ್ರಸಾತ್ ಮನೋಹರ್
ಅಧ್ಯಕ್ಷ, ಜಲಮಂಡಳಿ

'ಸಂಸತ್ ಮತ್ತು ಕಾರ್ಯಾಂಗದಲ್ಲಿ ಹಸ್ತಕ್ಷೇಪ ಆರೋಪ'

ನವದೆಹಲಿ (ಪಿಟಿಐ): 'ಸಂಸತ್ ಮತ್ತು ಕಾರ್ಯಾಂಗದ ಕಾರ್ಯನಿರ್ವಹಣೆಯಲ್ಲಿ ಹಸ್ತಕ್ಷೇಪ ಮಾಡುತ್ತಿದ್ದೇವೆ ಎಂಬ ಆರೋಪ ನಮ್ಮ ಮೇಲಿದೆ' ಎಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಬಿ.ಆರ್. ಗವಾಯಿ ಸೋಮವಾರ ಹೇಳಿದರು.

ವಕ್ಫ್ ತಿದ್ದುಪಡಿ ಕಾಯ್ದೆ ವಿರೋಧಿಸಿ ಪಶ್ಚಿಮ ಬಂಗಾಳದಲ್ಲಿ ನಡೆದ ಹಿಂಸಾಚಾರ ಕುರಿತ ವಿಚಾರಣೆ ಸಂದರ್ಭದಲ್ಲಿ ಬಿ.ಆರ್. ಗವಾಯಿ ಅವರು, ಇತ್ತೀಚೆಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಮತ್ತು ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರ ನ್ಯಾಯಾಂಗದ ಬಗ್ಗೆ ಅಗೌರವದ ಹೇಳಿಕೆಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸಿದರು.

ನಂತರ ಸಾಮಾಜಿಕ ಮಾಧ್ಯಮಗಳು ಮತ್ತು ಒಟಿಟಿಯಲ್ಲಿ ಲೈಂಗಿಕತೆ ಮತ್ತು ಅಶ್ಲೀಲ ಅಂಶಗಳನ್ನು ಒಳಗೊಂಡ ವಿಡಿಯೊ ತಡೆಗೆ ಅಗತ್ಯ ಕ್ರಮ ಕೈಗೊಳ್ಳಲು ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿದ ಅರ್ಜಿ ವಿಚಾರಣೆ ವೇಳೆಯೂ ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು, ಇದೇ ಮಾತು ಹೇಳಿತು.

ನಗರದ ಇನ್ನಷ್ಟು ಸುದ್ದಿಗಳು 4A 4B

ಎಂ.ಎಸ್. ರಾಮಯ್ಯ ಸ್ಮಾರಕ ಉಪನ್ಯಾಸದಲ್ಲಿ ನಾರಾಯಣನ್

ವಿಶ್ವಮಟ್ಟದಲ್ಲಿ ಇಸ್ರೊ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಗ್ರಹ ಉಡಾವಣೆ, ಇತರೆ ತಂತ್ರಜ್ಞಾನಗಳಲ್ಲಿ ಇಸ್ರೊ ವಿಶ್ವ ಮಟ್ಟದಲ್ಲಿ ಮೂರು ದಾಖಲೆ ಮಾಡಿದೆ. ಇದನ್ನು ಮುಂದಿನ 50 ವರ್ಷ ಯಾರೂ ಮುರಿಯಲು ಸಾಧ್ಯವಿಲ್ಲ ಎಂದು ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ತಿಳಿಸಿದರು.

ರಾಮಯ್ಯ ಸಮೂಹ ಶಿಕ್ಷಣ ಸಂಸ್ಥೆ ಸೋಮವಾರ ಆಯೋಜಿಸಿದ್ದ ಎಂ.ಎಸ್. ರಾಮಯ್ಯ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಒಂದೇ ಬಾರಿಗೆ 104 ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಗಗನಯಾನದಲ್ಲಿ ಮಾನವರನ್ನು ಕಳುಹಿಸಿಕೊಡುವ ಸಂಶೋಧನೆಯಲ್ಲಿ ಇಸ್ರೊ ನಿರತವಾಗಿದೆ. 2040ರ ಅವಧಿಗೆ ಪಿಎಸ್‌ಎಲ್‌ವಿಗಳ ತೂಕ ಕಡಿಮೆ ಮಾಡಲಾಗುತ್ತಿದೆ. ಜಿ-20 ದೇಶಗಳಿಗೆ 20 ಉಪಗ್ರಹಗಳನ್ನು ನಿರ್ಮಿಸಿಕೊಡಲು ಇಸ್ರೊ ಕೆಲಸ ಮಾಡುತ್ತಿದೆ. ಇಸ್ರೊ 2040ರ ಹೊತ್ತಿಗೆ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ವಿಶ್ವವೇ ತಿರುಗಿ ನೋಡುವ ಹಂತಕ್ಕೆ ಬೆಳವಣಿಗೆ ಸಾಧಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

1963ರಲ್ಲಿ ಇಸ್ರೊ ತನ್ನ ಕಾರ್ಯಾಚರಣೆ ಆರಂಭಿಸಿದ್ದು, ರಾಮಯ್ಯ ಕಾಲೇಜು ತನ್ನ ಶೈಕ್ಷಣಿಕ ಕಾರ್ಯ ಚಟುವಟಿಕೆಯನ್ನು ಅದೇ ವರ್ಷ ಆರಂಭಿಸಿರುವುದು ಕಾಕತಾಳೀಯ ಎಂದು ಹೇಳಿದರು.

ಗೋಕುಲ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ (ವೈದ್ಯಕೀಯ) ಮತ್ತು ಕುಲಪತಿ (ಆರ್‌ಯುಎಎಸ್) ಎಂ.ಆರ್. ಜಯರಾಂ, 'ನಾವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದ್ದೇವೆ. ಬೇರೆ ದೇಶದವರು ಬಾಹ್ಯಾಕಾಶಕ್ಕೆ ಜನರನ್ನು ಕಳುಹಿಸಿ ದುಡ್ಡು ಮಾಡುತ್ತಿದ್ದಾರೆ. ನಾವು ಬಾಹ್ಯಾಕಾಶ ತಂತ್ರಜ್ಞಾನದ ಮೂಲಕ ಹವಾಮಾನ ವೈಪರೀತ್ಯವನ್ನು ನಿರ್ವಹಣೆ ಮಾಡುತ್ತಿದ್ದೇವೆ. ಭಾರತವು ಜ್ಞಾನ ನಗರಿಯಾಗಿದ್ದು, ಇಲ್ಲಿ ಎಲ್ಲ ಎಂಜಿನಿಯರ್‌ಗಳಿಗೆ ಉತ್ತಮ ಭವಿಷ್ಯವಿದೆ' ಎಂದರು.

ಇಸ್ರೊ ಮಾಜಿ ಅಧ್ಯಕ್ಷ ಎ.ಎಸ್. ಕಿರಣ್ ಕುಮಾರ್, ಗೋಕುಲ ಎಜುಕೇಷನ್ ಟ್ರಸ್ಟ್ ಗೌರವ ಅಧ್ಯಕ್ಷ ಎಂ.ಆರ್. ಸೀತಾರಾಂ, ಉಪಾಧ್ಯಕ್ಷ ಎಂ.ಆರ್. ಜಾನಕಿರಾಂ, ಕಾರ್ಯದರ್ಶಿ ಎಂ.ಆರ್. ಆನಂದ ರಾಮ್, ನಿರ್ದೇಶಕರಾದ ಎಂ.ಆರ್. ಸಂಪಂಗಿ ರಾಮಯ್ಯ, ಎಂ.ಆರ್. ಕೋದಂಡ ರಾಮ್, ಮುಖ್ಯ ಶೈಕ್ಷಣಿಕ ಸಲಹೆಗಾರ ಕರಿಸಿದ್ದಪ್ಪ, ಆರ್‌ಐಟಿ ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಕಾರ್ಯಕಾರಿ ನಿರ್ದೇಶಕ ಎಚ್.ವಿ. ಪಾರ್ಶ್ವನಾಥ ಭಾಗವಹಿಸಿದ್ದರು.


ಎಂ.ಎಸ್. ರಾಮಯ್ಯ ಸ್ಮಾರಕ ಉಪನ್ಯಾಸ ಸಮಾರಂಭದಲ್ಲಿ ಭಾಗವಹಿಸಿದ್ದ ಇಸ್ರೊ ಅಧ್ಯಕ್ಷ ವಿ. ನಾರಾಯಣನ್ ಅವರನ್ನು ಸನ್ಮಾನಿಸಲಾಯಿತು

ಸಂಕ್ಷಿಪ್ತ ಸುದ್ದಿ

'ಅಕ್ಕ' ಅಧ್ಯಕ್ಷರಾಗಿ ಮಧುರಂಗಯ್ಯ ಆಯ್ಕೆ

ಬೆಂಗಳೂರು: ಅಮೆರಿಕ ಕನ್ನಡ ಕೂಟಗಳ ಆಗರ(ಅಕ್ಕ)ದ ನೂತನ ಅಧ್ಯಕ್ಷರಾಗಿ ಮಧುರಂಗಯ್ಯ ಆಯ್ಕೆಯಾಗಿದ್ದಾರೆ. 2025–26ನೇ ಸಾಲಿನ ಎರಡು ವರ್ಷಗಳ ಅಧಿಕಾರ ಅವಧಿಗೆ ನಡೆದ ಚುನಾವಣೆ ಯಲ್ಲಿ ನವೀನ್ ಕೃಷ್ಣ (ಕಾರ್ಯದರ್ಶಿ), ಚಂದ್ರು ಆರಾಧ್ಯ (ಖಜಾಂಚಿ), ಉಪಾಧ್ಯಕ್ಷರಾಗಿ ರೂಪಶ್ರೀ ಮೇಲುಕೋಟೆ, ರಘು ಶಿವರಾಂ, ಲಾವಣ್ಯ ರುದ್ರಪಟ್ಟಣ, ಉಪ ಖಜಾಂಚಿಯಾಗಿ ಶ್ರೀವತ್ಸ ರಾಮನಾಥನ್, ಮೋಹನ್ ಕುಮಾರ್ ನರಸಿಂಹನ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಅಕ್ಕ ಚುನಾವಣಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

ಸೀತಾ ಕಲ್ಯಾಣಂ 26ಕ್ಕೆ

ಬೆಂಗಳೂರು: ಶ್ರೀರಾಮಸೇವಾ ಮಂಡಲಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜಿಸಿರುವ 87ನೇ ಶ್ರೀರಾಮನವಮಿ ಗ್ಲೋಬಲ್ ಮ್ಯೂಸಿಕ್ ಫೆಸ್ಟಿವಲ್ ಕಾರ್ಯಕ್ರಮದಲ್ಲಿ ಏಪ್ರಿಲ್ 26ಕ್ಕೆ ಆಯೋಜಿಸಿದ್ದ ಪಂಡಿತ್ ನೀಲಾದ್ರಿ ಕುಮಾರ್ ಸಂಗೀತ ಕಛೇರಿ ರದ್ದಾಗಿದೆ. ಅದರ ಬದಲಾಗಿ ಸೀತಾ ಕಲ್ಯಾಣಂ ಕಾರ್ಯಕ್ರಮವನ್ನು ವಿನಯ್ ವಾರಾಣಸಿ, ವಿವೇಕ್ ಸದಾಶಿವಂ ಮತ್ತು ತಂಡ ಅದೇ ದಿನ ಪ್ರಸ್ತುತಪಡಿಸಲಿದೆ ಎಂದು ಪ್ರಕಟಣೆ ತಿಳಿಸಿದೆ.

ಜಾಮೀನಿಗೆ ಅನುರಾಧ ಅರ್ಜಿ

ರಾಮನಗರ: ಭೂಗತ ಲೋಕದ ಮಾಜಿ ಡಾನ್ ಮುತ್ತಪ್ಪ ರೈ ಪುತ್ರ ರಿಕ್ಕಿ ರೈ ಮೇಲೆ ತಾಲ್ಲೂಕಿನ ಬಿಡದಿ ಬಳಿಯ ಕರಿಯಪ್ಪನದೊಡ್ಡಿಯಲ್ಲಿ ನಡೆದ ಗುಂಡಿನ ದಾಳಿಯ ತನಿಖೆಯನ್ನು ತೀವ್ರಗೊಳಿಸಿರುವ ಪೊಲೀಸರು, ರಿಕ್ಕಿ ಅವರ ಅಂಗರಕ್ಷಕರು ಹಾಗೂ ಮನೆ ಕೆಲಸಗಾರರನ್ನು ಮತ್ತಷ್ಟು ವಿಚಾರಣೆಗೆ ಒಳಪಡಿಸಿದ್ದಾರೆ.


ರಿಕ್ಕಿ ರೈ

ಇದರ ನಡುವೆಯೇ ಪ್ರಕರಣದ ಎರಡನೇ ಆರೋಪಿಯಾಗಿರುವ ಮುತ್ತಪ್ಪ ರೈ ಎರಡನೇ ಪತ್ನಿ ಅನುರಾಧ ಘಟನೆಗೆ ಐದು ದಿನ ಮುಂಚೆಯೇ ವಿದೇಶಕ್ಕೆ ಹೋಗಿದ್ದಾರೆ. ಘಟನೆಯಲ್ಲಿ ತನ್ನ ವಿರುದ್ಧ ಪ್ರಕರಣ ದಾಖಲಾಗಿರುವ ವಿಷಯ ತಿಳಿಯುತ್ತಿದ್ದಂತೆ, ರಾಮನಗರದ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ತನ್ನ ವಕೀಲರ ಮೂಲಕ ಜಾಮೀನಿಗೆ ಅರ್ಜಿ ಸಲ್ಲಿಸಿದ್ದಾರೆ. ಎರಡನೇ ಆರೋಪಿ ರಾಕೇಶದ ಮಲ್ಲಿ ಮುಂಬೈನಲ್ಲಿರುವ ಮಾಹಿತಿ ಇದೆ ಎಂದು ಮೂಲಗಳು ತಿಳಿಸಿವೆ.

ಫುಟ್‌ಬಾಲ್: ಗಜಾನನ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೀ ಗಜಾನನ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಸೋಮವಾರ 3–0 ಗೋಲುಗಳಿಂದ ಜವಾಹರ್ ಯೂನಿಯನ್ ಎಫ್‌ಸಿ ತಂಡವನ್ನು ಮಣಿಸಿತು. ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಎಫ್‌ಸಿ ಡೆಕ್ಕನ್ ತಂಡವು 6–0 ಗೋಲುಗಳಿಂದ ವಿಜಯನಗರ ತಂಡವನ್ನು ಸೋಲಿಸಿತು.

ಬೆನಕಾ ಗೋಲ್ಡ್‌ಗೆ ರೀಷ್ಮಾ ನಾಣಯ್ಯ ರಾಯಭಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆನಕಾ ಗೋಲ್ಡ್ ಕಂಪನಿಯ ನೂತನ ರಾಯಭಾರಿಯಾಗಿ ನಟಿ ರೀಷ್ಮಾ ನಾಣಯ್ಯ ಆಯ್ಕೆಯಾಗಿದ್ದಾರೆ' ಎಂದು ಕಂಪನಿಯ ಸಂಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಭರತ್ ಕುಮಾರ್ ಎಸ್. ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ರೀಷ್ಮಾ ನಾಣಯ್ಯ ಅವರ ಮೂಲಕ ಸಂಸ್ಥೆಯ ಜಾಹೀರಾತು ಚಟುವಟಿಕೆಗಳನ್ನು ಬಲಪಡಿಸಲಾಗುವುದು. ಜನರ ಹೃದಯಕ್ಕೆ ಹತ್ತಿರುವಾಗುವ ನಿಟ್ಟಿನಲ್ಲಿ ಹೊಸ ಜಾಹೀರಾತು ಅಭಿಯಾನಕ್ಕೆ ಚಾಲನೆ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

'ಬೆನಕಾ ಗೋಲ್ಡ್ ಅಭಿಯಾನದಡಿಯಲ್ಲಿ 'ಸೆಲ್ ಆ್ಯಂಡ್ ಸೇವ್' ಯೋಜನೆಯನ್ನು ಪರಿಚಯಿಸುತ್ತಿದ್ದೇವೆ. ಈ ಯೋಜನೆಯ ಮೂಲಕ ಗ್ರಾಹಕರು ತಮ್ಮ ಚಿನ್ನಾಭರಣವನ್ನು ಮಾರಾಟ ಮಾಡಿದ ನಂತರವೂ ಕೂಡ 21 ದಿನಗಳಲ್ಲಿ ಅಥವಾ ಕಂತುಗಳ ಮೂಲಕ ಹಣ ಪಾವತಿಸಿ, ಅದೇ ಚಿನ್ನಾಭರಣಗಳನ್ನು ಉಳಿಸಿಕೊಳ್ಳಬಹುದು' ಎಂದು ತಿಳಿಸಿದರು.

'ಬೆನಕಾ ಗೋಲ್ಡ್ ಕಂಪನಿ 2020ರ ಜೂನ್ 2ರಂದು ಬೆಂಗಳೂರಿನ ಬಸವನಗುಡಿಯಲ್ಲಿ ಪ್ರಾರಂಭವಾಯಿತು. ಚಿನ್ನದ ಖರೀದಿ ಮತ್ತು ಮಾರಾಟದ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಿದ್ದೇವೆ. ಕರ್ನಾಟಕ, ತಮಿಳುನಾಡು, ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ 35ಕ್ಕೂ ಹೆಚ್ಚು ಶಾಖೆಗಳಿದ್ದು, 300ಕ್ಕೂ ಹೆಚ್ಚು ನೌಕರರಿದ್ದಾರೆ' ಎಂದು ಮಾಹಿತಿ ನೀಡಿದರು.

ರೀಷ್ಮಾ ನಾಣಯ್ಯ ಮಾತನಾಡಿ, 'ಬೆನಕಾ ಗೋಲ್ಡ್ ಕಂಪನಿಯು ಗ್ರಾಹಕರಿಗೆ ಉತ್ತಮ ಸೇವೆ ನೀಡುತ್ತಿದೆ. ಕಂಪನಿಯ ಕಾರ್ಯವೈಖರಿ ಬಹಳ ಚೆನ್ನಾಗಿ ಇದೆ. ಗ್ರಾಹಕರು ತಮ್ಮ ಚಿನ್ನಾಭರಣಗಳನ್ನು ಮಾರಾಟ ಮಾಡುವುದಕ್ಕೆ ಅವಕಾಶ ನೀಡದೇ, ಚಿನ್ನಾಭರಣಗಳನ್ನು ಉಳಿಸಿಕೊಳ್ಳುವುದಕ್ಕೆ ಆದ್ಯತೆ ನೀಡುತ್ತಿರುವುದು ಶ್ಲಾಘನೀಯ ಎಂದರು.


ಬೆನಕಾ ಗೋಲ್ಡ್ ಕಂಪನಿಯ ಪ್ರಚಾರ ಕೈಪಿಡಿಯನ್ನು ಭರತ್ ಕುಮಾರ್ ಎಸ್., ನಟಿ ರೀಷ್ಮಾ ನಾಣಯ್ಯ, ಬಾಲ ನಟಿ ಪ್ರತಿ ಶೆಟ್ಟಿ, ಕಂಪನಿಯ ಮುಖ್ಯ ಕಾರ್ಯಾಚರಣೆ ಅಧಿಕಾರಿ ನಾಗರಾಜನ್ ಅವರು ಬಿಡುಗಡೆಗೊಳಿಸಿದರು– ಪ್ರಜಾವಾಣಿ ಚಿತ್ರ.

ಎಲೆಕ್ಟ್ರಿಕ್ ಸೋಲಾರ್ ವೆಹಿಕಲ್ ಚಾಂಪಿಯನ್‌ಷಿಪ್– 2025 ಸ್ಪರ್ಧೆ

ಪಿಇಎಸ್ ಕಾಲೇಜಿನ ತಂಡಕ್ಕೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ನೋಯಿಡಾದ ಗಾಲ್ಗೊಟಿಯಾಸ್ ವಿಶ್ವವಿದ್ಯಾಲಯದಲ್ಲಿ ಇಂಪೀರಿಯಲ್ ಸೊಸೈಟಿ ಆಫ್ ಇನ್ನೋವೇಟಿವ್ ಎಂಜಿನಿಯರ್ಸ್ (ಐಎಸ್‌ಐಇ) ಆಯೋಜಿಸಿದ್ದ 'ಎಲೆಕ್ಟ್ರಿಕ್ ಸೋಲಾರ್ ವೆಹಿಕಲ್ ಚಾಂಪಿಯನ್‌ಷಿಪ್ (ಇಎಸ್‌ವಿಸಿ) 2025'ರ ಸ್ಪರ್ಧೆಯಲ್ಲಿ ನಗರದ ಪಿಇಎಸ್ ವಿಶ್ವವಿದ್ಯಾಲಯದ 'ಹಯಾ ಆಫ್ ರೋಡಿಂಗ್' (ಟಿಎಚ್‌ಒಆರ್) ಎಂಜಿನಿಯರ್ ವಿದ್ಯಾರ್ಥಿಗಳ ತಂಡ 'ದಿ ಫ್ಯೂಚರ್ ಪ್ರಶಸ್ತಿ' ಮತ್ತು ₹25 ಸಾವಿರ ನಗದು ಬಹುಮಾನವನ್ನು ಪಡೆದುಕೊಂಡಿತು.

ಪಿಇಎಸ್ ಕಾಲೇಜಿನ ಈ ಎಂಜಿನಿಯರ್‌ಗಳ ತಂಡ ಆಟೋಮೋಟಿವ್ ತಂತ್ರಜ್ಞಾನ ಮತ್ತು ಎಂಜಿನಿಯರಿಂಗ್‌ನಲ್ಲಿ ಪರಿಣತಿ ಹೊಂದಿದ್ದಾರೆ. ಮಾತ್ರವಲ್ಲ, ಆಲ್ ಟೆರೈನ್ ವೆಹಿಕಲ್ಸ್(ಎಟಿವಿಗಳು)ಗಳ ವಿನ್ಯಾಸ ಮತ್ತು ತಯಾರಿಕೆಯಲ್ಲಿ

ಮಾರ್ಚ್ 27ರಿಂದ ಏಪ್ರಿಲ್ 2ರವರೆಗೆ ನಡೆದ ರಾಷ್ಟ್ರಮಟ್ಟದ ಸ್ಪರ್ಧೆಯಲ್ಲಿ ವಿವಿಧ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಇಎಸ್‌ವಿಸಿ–2025 ಸೌರ ಶಕ್ತಿ ಚಾಲಿತ ಕಾರುಗಳು ಮತ್ತು ಇ-ಬೈಕ್‌ಗಳ ಕೇಂದ್ರಿತ ಸ್ಪರ್ಧೆಯಾಗಿತ್ತು.

ಸ್ಪರ್ಧೆಯು ವರ್ಚುವಲ್ ಮತ್ತು ಆನ್-ಸೈಟ್ ಸುತ್ತುಗಳನ್ನು ಒಳಗೊಂಡಿತ್ತು. ಪೂರ್ವಭಾವಿಯಾಗಿ, ಟಿಎಚ್‌ಒಆರ್ ತಂಡದ ಸದಸ್ಯರು, ತಮ್ಮ ವಾಹನಕ್ಕೆ ತಗಲುವ ವೆಚ್ಚ ಮತ್ತು ವಿನ್ಯಾಸ ಕುರಿತು ವರದಿಯನ್ನು ಪ್ರಸ್ತುತಪಡಿಸಿದರು. ನಂತರ ಸ್ಪರ್ಧೆಯಲ್ಲಿದ್ದ ಎಲ್ಲ ಹಂತದ ಪರೀಕ್ಷೆಗಳಲ್ಲೂ ಉತ್ತೀರ್ಣರಾದರು. ತಂಡ ತಯಾರಿಸಿದ ವಾಹನವು ತಾಂತ್ರಿಕ ತಪಾಸಣೆ, ಬ್ರೇಕ್ ಪರೀಕ್ಷೆ ಮತ್ತು ತೂಕ ಪರಿಶೀಲನೆ ಸೇರಿದಂತೆ ಸುರಕ್ಷತಾ ಪರೀಕ್ಷೆಗಳಲ್ಲಿ ಉತ್ತೀರ್ಣವಾಯಿತು. ಡೈನಾಮಿಕ್ ಸುತ್ತುಗಳಲ್ಲೂ ತಂಡ ಉತ್ತಮ ಸಾಧನೆ ಮಾಡಿತು.

ಟೀಮ್ ಹಯಾ ಆಫ್ ರೋಡಿಂಗ್ ತಂಡ ಮೊದಲ ಬಾರಿಗೆ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರೂ, ಸ್ಪರ್ಧೆಯಲ್ಲಿದ್ದ ದೇಶದ ವಿವಿಧ ವಿಶ್ವವಿದ್ಯಾಲಯಗಳ ಹತ್ತು ತಂಡಗಳೊಂದಿಗೆ ಉತ್ತಮ ಪೈಪೋಟಿ ನೀಡಿ, ಗಮನಾರ್ಹ ಯಶಸ್ಸನ್ನು ಸಾಧಿಸಿತು ಎಂದು ಪಿಇಎಸ್ ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ ಪ್ರೊ. ಜವಾಹರ್ ದೊರೆಸ್ವಾಮಿ ಮತ್ತು ಕುಲಪತಿ ಪ್ರೊ. ಜೆ. ಸೂರ್ಯ ಪ್ರಸಾದ್ ಅವರು ತಂಡವನ್ನು ಅಭಿನಂದಿಸಿದರು.

ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಅಧ್ಯಕ್ಷ ಮತ್ತು ಅಧ್ಯಾಪಕ ಸಲಹೆಗಾರ ಎನ್. ರಾಜೇಶ್ ಮಥಿವನನ್ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದರು.



ಇಎಸ್‌ವಿಸಿ–2025 ಸ್ಪರ್ಧೆಯಲ್ಲಿ ತಾವು ತಯಾರಿಸಿದ ವಾಹನದೊಂದಿಗೆ ಭಾಗವಹಿಸಿದ್ದ ಪಿಇಎಸ್ ಕಾಲೇಜು ವಿದ್ಯಾರ್ಥಿಗಳ 'ಹಯಾ ಆಫ್ ರೋಡಿಂಗ್' ತಂಡ ಮುಂಚೂಣಿಯಲ್ಲಿದ್ದಾರೆ.

ಕ್ಷೇಮ ಕುಶಲ



ಅನ್ನ–ನೀರುಗಳಲ್ಲಿದೆ ಆರೋಗ್ಯದ ಗುಟ್ಟು

ಡಾ. ಕಿರಣ್ ವಿ. ಎಸ್.

‘ಪ್ರೀತಿಯಿಲ್ಲದೆ ಜೀವಿಸಲಾರೆ’ ಎನ್ನುವುದು ಕೇವಲ ಕವಿಚಾತುರ್ಯದ ಮಾತು. ಬದುಕಿನ ಅಸಲಿ ಆವಶ್ಯಕತೆಗಳು ನೀರು ಮತ್ತು ಆಹಾರ. ಪ್ರಾಣಿ-ಪಕ್ಷಿಗಳು ಮಲಿನ ನೀರು–ಆಹಾರಗಳನ್ನು ಸೇವಿಸಿಯೂ ಬದುಕುತ್ತವಾದರೂ, ನಾಗರಿಕತೆಗೆ ಹೊಂದಿಕೊಂಡಿರುವ ಮನುಷ್ಯರಿಗೆ ರೋಗದಿಂದ ಕಾಪಾಡಿಕೊಳ್ಳಲು ಆಹಾರ-ಪಾನೀಯಗಳು ಶುಚಿಯಾಗಿರುವುದು ಅತ್ಯಗತ್ಯ. ನಮ್ಮನ್ನು ಕಾಡುವ ಬಹುತೇಕ ಸಾಂಕ್ರಾಮಿಕ ರೋಗಗಳು ಮಲಿನವಾದ ನೀರು ಅಥವಾ ಆಹಾರಗಳಿಂದಲೇ ಸಂಭವಿಸುತ್ತವೆ.

ಮಲಿನ ಆಹಾರ-ಪಾನೀಯಗಳು ಎರಡು ರೀತಿಗಳಿಂದ ಅನಾರೋಗ್ಯಕ್ಕೆ ಕಾರಣವಾಗುತ್ತವೆ. ಮೊದಲನೆಯದು - ಅವುಗಳಲ್ಲಿ ಇರಬಹುದಾದ ಸೋಂಕುಕಾರಕ ಪರೋಪಜೀವಿಗಳು ಸಾಂಕ್ರಾಮಿಕ ಕಾಯಿಲೆಗಳನ್ನು ಹರಡುವ ಪ್ರಬಲ ಮಾಧ್ಯಮ. ಎರಡನೆಯದು - ಅದರೊಳಗಿನ ಹಾನಿಕಾರಕ ರಾಸಾಯನಿಕಗಳು ಬಾಯಿ ಮತ್ತು ಗಂಟಲಿನ ಸೂಕ್ಷ್ಮವಾದ ಲೋಳೆಪದರಕ್ಕೆ ಹಾನಿ ಮಾಡುತ್ತವೆ. ಲೋಳೆಪದರ ಸ್ರವಿಸುವ ಲೋಳೆಯು ಕಾಯಿಲೆಯನ್ನು ಉಂಟುಮಾಡುವ ಕ್ರಿಮಿಗಳನ್ನು ನಿಯಂತ್ರಿಸಿ, ನಮ್ಮ ಶರೀರವನ್ನು ರೋಗಗಳಿಂದ ಕಾಪಾಡುತ್ತವೆ. ಆದರೆ, ಬಿರುಕುಬಿಟ್ಟ ಲೋಳೆಪದರದ ಮೂಲಕ ಸೋಂಕುಕಾರಕ ಪರೋಪಜೀವಿಗಳು ಸುಲಭವಾಗಿ ಶರೀರದ ಒಳಗೆ ನುಗ್ಗಿ, ಕಾಯಿಲೆಗೆ ಕಾರಣವಾಗುತ್ತವೆ. ಶರೀರದ ಸಹಜ ರಕ್ಷಕವ್ಯವಸ್ಥೆ ಚೆನ್ನಾಗಿರುವವರಲ್ಲಿ ಇಂತಹ ಸೋಂಕು ಹೆಚ್ಚು ತೊಂದರೆ ನೀಡದೆ, ತಾನಾಗಿಯೇ ನಿಗ್ರಹವಾಗುತ್ತದೆ. ಆದರೆ ರಕ್ಷಕವ್ಯವಸ್ಥೆ ಕ್ಷೀಣವಾಗಿರುವ ಮಧುಮೇಹಿಗಳು, ಚಿಕ್ಕ ಮಕ್ಕಳು, ವೃದ್ಧರು, ನಿಯಮಿತವಾಗಿ ಸ್ಟಿರಾಯ್ಡ್ ಔಷಧಗಳನ್ನು ಸೇವಿಸುತ್ತಿರುವ ರೋಗಿಗಳು, ಮೊದಲಾದವರಲ್ಲಿ ಈ ಸೋಂಕುಗಳು ಅಪಾಯಕಾರಿಯಾಗಬಲ್ಲವು.

ಮಲಿನ ಆಹಾರ ಮತ್ತು ನೀರಿನ ಮೂಲಕ ಹರಡುವ ಗಂಟಲಿನ, ಜೀರ್ಣಾಂಗದ ರೋಗಗಳು ಬೇಸಿಗೆಯಲ್ಲಿ ಅಧಿಕ. ಮಕ್ಕಳಿಗೆ ರಜೆ ಇರುವುದರಿಂದ ಪ್ರವಾಸಗಳಿಗೆ ಹೋಗುವವರು ಹೆಚ್ಚು. ಪ್ರವಾಸದಲ್ಲಿ ತಿನಿಸು-ಪಾನೀಯಗಳ ಮೇಲೆ ಸಂಪೂರ್ಣ ನಿಯಂತ್ರಣ ಇರುವುದಿಲ್ಲ. ಅಂತಹ ವೇಳೆ ಸಾಧ್ಯವಾದಷ್ಟೂ ಬಿಸಿಯಾಗಿ ತಯಾರಿಸಿದ ತಾಜಾ ಆಹಾರಸೇವನೆ ಸೂಕ್ತ. ಸ್ವಚ್ಛವಾದ ನೀರು, ಭದ್ರಪಡಿಸಿದ ಪಾನೀಯಗಳ ಬಳಕೆ ಒಳ್ಳೆಯದು.

ಮಲಿನ ಆಹಾರ-ಪಾನೀಯಗಳ ಸೇವನೆಯಿಂದ ಆಗುವ ಬಹುತೇಕ ಸಣ್ಣ-ಪುಟ್ಟ ಸೋಂಕುಗಳನ್ನು ಶರೀರದ ರಕ್ಷಕವ್ಯವಸ್ಥೆಯೇ ಸರಿಪಡಿಸುತ್ತದೆ. ಅದರ ಸಾಮರ್ಥ್ಯವನ್ನು ಮೀರಿದ ಬೇನೆಗಳಿಗೆ ಮಾತ್ರ ವೈದ್ಯಕೀಯ ಸಲಹೆ ಬೇಕಾಗುತ್ತದೆ. ನಲವತ್ತೆಂಟು ಗಂಟೆಗಳಿಗಿಂತಲೂ ಹೆಚ್ಚಿನ ಕಾಲ ಅಸೌಖ್ಯ ಎನಿಸಿದರೆ ವೈದ್ಯರನ್ನು ಕಾಣುವುದು ಸೂಕ್ತ. ಸೋಂಕು ಹೆಚ್ಚುತ್ತಿರುವ ಸೂಚನೆಗಳು ಕಂಡುಬಂದರೆ ಯಾವುದೇ ಕಾರಣಕ್ಕೂ ಸ್ವಯಂ-ವೈದ್ಯ ಮಾಡಿಕೊಂಡು ಪರಿಸ್ಥಿತಿಯನ್ನು ಹದಗೆಡಿಸಬಾರದು.

ಮಲಿನ ಆಹಾರ-ಪಾನೀಯಗಳನ್ನು ಸೇವಿಸಿ ತಂದುಕೊಳ್ಳುವ ಸೋಂಕಿನ ಚಿಕಿತ್ಸೆಗಿಂತಲೂ, ಅವು ಬಾರದಂತೆ ನಿರ್ವಹಿಸುವುದು ಜಾಣತನ. ಮನೆಯಲ್ಲಿ ಕೈ ತೊಳೆಯದೇ ಏನನ್ನೂ ಸೇವಿಸದವರು, ವೈದ್ಯರು ಯಾವುದಾದರೂ ಔಷಧವನ್ನು ಸೂಚಿಸಿದಾಗ ಅದರ ಅಡ್ಡಪರಿಣಾಮಗಳ ಬಗ್ಗೆ ಪ್ರಶ್ನಿಸುವವರು, ಮಕ್ಕಳಿಗೆ ಶುಚಿತ್ವದ ಬಗ್ಗೆ ಪಾಠ ಹೇಳುವವರು ಕೂಡ ರಸ್ತೆಬದಿಯ ಅಶುಚಿಯಾದ ಆಹಾರವನ್ನು ಮುಲಾಜಿಲ್ಲದೆ ಬಾಯಿಗಿಳಿಸುವುದು ಸೋಜಿಗ. ಹತ್ತಾರು ಜನ ಅದನ್ನು ತಿನ್ನುತ್ತಿದ್ದಾರೆಂಬ ನಂಬಿಕೆಯೋ, ರುಚಿಯ ಚಪಲವೋ, ಜೊತೆಯಲ್ಲಿ ಇರುವವರ ಒತ್ತಾಯವೋ, ‘ಆಗಾಗ ಇಂತಹದ್ದನ್ನು ತಿನ್ನುತ್ತಿದ್ದರೆ ಇಮ್ಯುನಿಟಿ ಬೆಳೆಯುತ್ತದೆ’ ಎನ್ನುವ ಭ್ರಮೆಯೋ, ‘ಜಗತ್ತಿನಾದ್ಯಂತ ಸ್ಟ್ರೀಟ್-ಫುಡ್ ತಿನ್ನುವವರಿದ್ದಾರೆ’ ಎನ್ನುವ ಸಾಂಘಿಕ ಉಡಾಫೆಯ ಮನೋಭಾವವೋ - ಒಟ್ಟಿನಲ್ಲಿ ಏನೋ ಒಂದು ನೆಪದಲ್ಲಿ ಕಾಣದ ಅಪಾಯಕ್ಕೆ ಒಡ್ಡಿಕೊಳ್ಳುತ್ತಾರೆ. ಪ್ರತಿಯೊಬ್ಬರೂ ಇಂತಹ ಪ್ರಲೋಭನೆಗಳನ್ನು ಹತ್ತಿಕ್ಕುವುದು ಬಹಳ ಮುಖ್ಯ.



ಮುಂದುವರಿದ ದೇಶಗಳ ಪ್ರವಾಸಿತಾಣಗಳಲ್ಲಿ ‘ಸ್ಟ್ರೀಟ್-ಫುಡ್’ ಎನ್ನುವುದು ದೊಡ್ಡ ಪಾತ್ರವನ್ನು ವಹಿಸುತ್ತದೆ ಎನ್ನುವ ಮಾತು ಸತ್ಯ. ಆದರೆ ಅಲ್ಲಿನ ವ್ಯವಸ್ಥೆ ಅದರ ಬಗ್ಗೆ ಬಹಳ ಕಠಿಣ ನಿರ್ಬಂಧಗಳನ್ನು ಹೇರಿ, ಸುರಕ್ಷತೆಯ ಬಗ್ಗೆ ಗಮನ ನೀಡಿರುತ್ತದೆ. ನಮ್ಮ ದೇಶದಲ್ಲಿ ಅಂತಹ ಕಟ್ಟುನಿಟ್ಟನ್ನು ಅಪೇಕ್ಷಿಸುವುದು ಕಷ್ಟ. ನಮ್ಮಲ್ಲಿ ರಸ್ತೆಬದಿಯ ಆಹಾರ ಮಾರಾಟ ಮಾಡುವ ಬಹುತೇಕರಿಗೆ ಕಾನೂನಿನ ಮಾನ್ಯತೆ ಇರುವುದಿಲ್ಲ. ಹೀಗಾಗಿ, ಅವರ ಬಳಿ ಸುರಕ್ಷತೆಯ ಖಾತ್ರಿಯೂ ಇಲ್ಲ. ಅಲ್ಲಿ ಆಹಾರ ಸೇವಿಸುತ್ತಿರುವ ಹತ್ತಾರು ಅಪರಿಚಿತ ಮಂದಿಗೆ ಮುಂದಿನ ಕೆಲದಿನಗಳಲ್ಲಿ ಯಾವ ಯಾವ ಆರೋಗ್ಯಸಮಸ್ಯೆಗಳು ಬಂದವು ಎಂದು ತಿಳಿಯುವುದು ಅಸಾಧ್ಯ. ಹೊರಗೆ ತಿನ್ನುವ ಅನಿವಾರ್ಯ ಪ್ರಸಂಗಗಳಲ್ಲಿ ಶುಚಿಯಾದ ಹೋಟೆಲಿನಲ್ಲಿ ಬಿಸಿಬಿಸಿಯಾದ, ಚೆನ್ನಾಗಿ ಬೇಯಿಸಿದ, ಹಬೆಯಾಡುತ್ತಿರುವ ಆಹಾರ ಸೇವನೆ ಸೂಕ್ತ. ಆಹಾರ-ಪಾನೀಯಗಳ ಗುಣಮಟ್ಟದಲ್ಲಿ ರಾಜಿಯಾಗುವುದು ಆರೋಗ್ಯಕ್ಕೆ ಹಾನಿಕರ.

ಆಹಾರ-ಪಾನೀಯಗಳ ಸ್ವಚ್ಛತೆಯನ್ನು ಪ್ರಜ್ಞಾಪೂರ್ವಕವಾಗಿ ಕಾಯ್ದುಕೊಳ್ಳುವುದು ಬಹಳ ಮುಖ್ಯ. ಪ್ರಸ್ತುತ ಸಂಕೀರ್ಣ ಸಮಾಜದಲ್ಲಿ ಜನರು ಹೊಸ ಬಗೆಯ ಜೀವನಶೈಲಿಗಳಿಗೆ ತೆರೆದುಕೊಳ್ಳುತ್ತಿದ್ದಾರೆ. ಹೀಗಾಗಿ, ನಮ್ಮ ವೈಯಕ್ತಿಕ ಮತ್ತು ಸಾಂಘಿಕ ಬದುಕಿನ ವಾತಾವರಣಗಳು ಸ್ವಚ್ಛವಾಗಿರುವುದು ಪ್ರಾಥಮಿಕ ಅಗತ್ಯ. ಈ ಮುನ್ನ ಮನೆಯಲ್ಲಿಯೇ ಅಡುಗೆ ಮಾಡಿಕೊಳ್ಳುತ್ತಿದ್ದ ಅನೇಕರು ಈಗ ದಿನನಿತ್ಯದ ಊಟವನ್ನೂ ಹೊರಗಿನಿಂದ ತರಿಸಿಕೊಂಡು ಸೇವಿಸುತ್ತಿದ್ದಾರೆ. ಈ ರೀತಿಯ ಆಹಾರವನ್ನು ಸಿದ್ಧಪಡಿಸುವ ಸ್ಥಳಗಳು, ಅದನ್ನು ತಯಾರಿಸುವ ಬಾಣಸಿಗರು, ಅದನ್ನು ಪ್ಯಾಕ್ ಮಾಡುವ ಕೆಲಸಗಾರ, ಅದನ್ನು ಹೊತ್ತು ತಂದು ನಮ್ಮ ಮನೆಗೆ ತಲುಪಿಸುವ ವ್ಯಕ್ತಿ – ಇವರೆಲ್ಲರ ಸ್ವಚ್ಛತೆಯ ಮಟ್ಟ ಸಮಂಜಸವಾಗಿದ್ದರೆ ಮಾತ್ರ ಅಂತಹ ಆಹಾರ-ಪಾನೀಯಗಳು ನಮ್ಮ ಆರೋಗ್ಯವನ್ನು ಕಾಯಬಲ್ಲವು. ಇಲ್ಲವಾದರೆ, ಅವೇ ಅನಾರೋಗ್ಯದ ಕಾರಣವಾಗುತ್ತವೆ. ಈ ಪ್ರತಿಯೊಂದು ಹಂತವನ್ನೂ, ಪ್ರತಿದಿನವೂ ಪರೀಕ್ಷಿಸುವ ಸಾಧ್ಯತೆಗಳು ಇರುವುದಿಲ್ಲ. ಹೀಗಾಗಿ, ಇಡೀ ಸಮಾಜವೇ ತನ್ನ ನೈರ್ಮಲ್ಯದ ಮಟ್ಟವನ್ನು ಸಂದೇಹಕ್ಕೆ ಆಸ್ಪದವಿಲ್ಲದಂತೆ ಏರಿಸಿಕೊಳ್ಳಬೇಕು. ಆಹಾರ-ಪಾನೀಯಗಳಲ್ಲಿ ಶುಚಿಯನ್ನು ಸಾಧಿಸುವುದು ಈಗ ವೈಯಕ್ತಿಕ ಮಟ್ಟವನ್ನು ಮೀರಿ, ಸಾಮಾಜಿಕ ಬಾಧ್ಯತೆಯ ಭಾಗವಾಗಿದೆ. ಈ ಸ್ಥಿತ್ಯಂತರ ಸುಲಭವಲ್ಲ ಎನ್ನುವ ಎಚ್ಚರ ಎಲ್ಲರಿಗೂ ಇರಬೇಕು.

❖



ಆಯುರ್ವೇದಕ್ಕೆ ‘ಕಿವಿ’ ಕೊಡೋಣ

ಡಾ. ಸತ್ಯನಾರಾಯಣ ಭಟ್ ಪಿ.

ನವೀನನಿಗೆ ಹದಿನೆಂಟರ ಹರೆಯ. ಮನೆಯಂಗಳಕ್ಕೆ ಬೈಕ್ ಇಳಿದು ಓಡೋಡಿ ಬಂದ. ‘ಡಾಕ್ಟ್ರೇ! ನನಗೆ ಕಿವಿ ಕೇಳ್ತಿಲ್ಲ! ಕಿವಿಯೊಳಗೆ ಸದಾ ಕಾಲ ಸಾಗರದ ಅಲೆಗಳ ಭೋರ್ಗರೆತ. ಏನನ್ನೂ ಕೇಳಿಸಲಾಗದ ಸ್ಥಿತಿ.’

ಆಗ ತಾನೇ ಕೊರೊನಾಯುಗ ಕಳೆದಿತ್ತು. ಆಗ ಅಂಟಿದ ಒಂದು ಚಪಲ, ಅವನ ಎರಡೂ ಕಿವಿಗಳ ಶ್ರವಣಶಕ್ತಿಯನ್ನು ಕಸಿದುಕೊಂಡಿತ್ತು. ಸದಾ ಕಾಲ ಕಿವಿಗಳಿಗೆ ಇಯರ್–ಫೋನ್, ಹೆಡ್–ಫೋನ್ ಹಾಕಿ ಹಾಡುಗಳಿಗೋ, ಇನ್ನಿತರ ಸಂಗತಿಗಳಿಗೋ ಅಂಟಿಕೊಂಡ ಗೀಳು ನವೀನನ ನೂರ್ಕಾಲದ ಬದುಕಿಗೆ ಆಪತ್ತು ತಂದಿತ್ತು. ಆಯುರ್ವೇದದ ಒಂದು ಸಾದಾ ಮುನ್ನಚ್ಚರಿಕೆ. ಎಲ್ಲ ಇಂದ್ರಿಯಗಳಿಗೆ ಅನ್ವಯ. ಅತಿ, ಹೀನ, ಮಿಥ್ಯಾ ಮತ್ತು ಸಮ್ಯಗ್ಯೋಗ! ಕಿವಿಗಳಿಗೆ ಕೇಳುವ ಇತಿಮಿತಿ ಇದೆ. ಅದು ಸರಹದ್ದು ಮೀರಿದರೆ ಅತಿಯೋಗ. ಗಟ್ಟಿ ಮತ್ತು ಕಿವಿತಮಟೆಗೆ ಸಮೀಪದ ಹೆಡ್–ಫೋನ್ ಅತಿ ಬಳಕೆ ಮಿಥ್ಯಾಯೋಗ. ಸುಶ್ರುತರಿಗೆ ಅಂದೇ ಅಂಥ ಕಾಯಿಲೆಯ ಅರಿವಿತ್ತು; ಅದಕ್ಕೆ ‘ಪ್ರಣಾದ’ ಎಂಬ ಹೆಸರಿಟ್ಟರು.

ಅಥರ್ವವೇದದ ಸೊಲ್ಲು ಹೀಗಿದೆ: ‘ಪಶ್ಯೇಮ ಶರದ ಶತಂ ಜೀವೇಮ ಶರದ ಶತಂ ಶೃಣುಯಾಮ ಶರದ ಶತಂ ಪ್ರಬ್ರುವಾಮ ಶರದ ಶತಮ್’. ನೋಡುವ, ಕೇಳುವ, ಮಾತನಾಡುವ ನೂರ್ಕಾಲದ ಸಾರ್ಥಕ ಮತ್ತು ನಿರೋಗದ ಬದುಕು–ಸಾಧನೆಯ ಮಹತ್ವವನ್ನು ಹೇಳುವ ವೇದಮಂತ್ರವಿದು. ಆಯುರ್ವೇದದ ಮೂಲ ಅಥರ್ವವೇದ. ಹೀಗೆ ವೇದಕಾಲದ ಶ್ರವಣಾರೋಗ್ಯ ಸಾಧನೆಯ ಸಂಗತಿ ಎಂದಿಗಿಂತ ಇಂದು ಹೆಚ್ಚು ಪ್ರಸ್ತುತ. ಸುಶ್ರುತಸಂಹಿತೆಯಲ್ಲಿ ಇಪ್ಪತ್ತೆಂಟು ಪ್ರಕಾರದ ಕರ್ಣರೋಗಗಳ ವೈವಿಧ್ಯಮಯ ವಿಸ್ತಾರ ವಿವರಗಳಿವೆ. ರೋಗಕಾರಣ, ಸ್ವರೂಪ ಮತ್ತು ಚಿಕಿತ್ಸೆಯ ಒಳನೋಟಗಳಿವೆ.

ಒಂದು ಸಂಗತಿ ನೆನಪಿಡಿ. ದೇಹದ ರಚನೆ ಹಾರ್ಡ್‌ವೇರ್ ಇಡೀ ಭೌತಿಕ ಶರೀರ. ಕುತ್ತಿಗೆಯ ಮೇಲಣ ಅವಯವಗಳಿಗೆ ಇ.ಎನ್.ಟಿ. ಎನ್ನುವೆವು. ಮೊದಲನೆಯ ಅಂಗ ಕಿವಿ. ಉಳಿದವು ಮೂಗು ಮತ್ತು ಗಂಟಲಿನ ರಚನೆ. ಇಡಿಯ ದೇಹದ ಸಾಫ್ಟ್‌ವೇರ್ ಮಿದುಳು! ಅದರ ಪಕ್ಕದ ರಚನೆಗಳು ಕಿವಿ. ಹೊರಗಿವಿಯ ಆಲಿಕೆ, ನಡುಗಿವಿ, ಒಳಗಿವಿ, ಪಟಲ(ಡ್ರಮ್) ತರಂಗಸೂಚಕ ದ್ರವ ಪದಾರ್ಥಗಳಂತಹ ಅತಿ ಸೂಕ್ಷ್ಮ ವಿವರಗಳು ಆಯುರ್ವೇದ ಸಂಹಿತೆಗಳ ಹೂರಣ.

ಕಿವಿಗಳದ್ದು ವಾತಸ್ಥಾನ. ಹಾಗಾಗಿ ಕಿವಿಗೆ ಹದವಾಗಿ ಬಿಸಿಯಾಗಿರುವ ಬಿಲ್ವ ತೈಲದ ತೊಟ್ಟಿಕ್ಕಿಸಲಾದೀತು. ಬೆಳ್ಳುಳ್ಳಿ ಸಿದ್ಧ ಕಾಯಿಸಿದ ಕೊಬ್ಬರಿ ಎಣ್ಣೆ ಒಂದೆರಡು ಹನಿಗಳನ್ನು ಬಿಟ್ಟಾಗ ಶಿಶುಗಳ ಹಾಗೂ ಹಿರಿಹರೆಯದವರ ಕಿವಿನೋವು ವಾಸಿ. ತೆಂಗಿನೆಣ್ಣೆ ಅಥವಾ ಎಳ್ಳೆಣ್ಣೆಯ ಸಂಗಡ ತುಪ್ಪವನ್ನು ಹದ ಬಿಸಿ ಮಾಡಿರಿ. ಸೌಟಲ್ಲಿ ಕಾದ ಈ ನೈಯೆಣ್ಣೆಯನ್ನು ಹದ ಬಿಸಿಯಾಗಿಯೇ ಹಿತವಾಗುವಂತೆ ನೆತ್ತಿಗೊತ್ತಿರಿ. ಐದೇ ನಿಮಿಷದಲ್ಲಿ ಮಿಂದು ಎಣ್ಣೆ ತೆಗೆದು ಸ್ನಾನ ಮುಗಿಸಿಬಿಡಿ. ಇಂತಹ ಮನೆ ಮದ್ದು ಸೈನಸೈಟಿಸ್, ಮೂಗುಕಟ್ಟು, ಕಿವಿನೋವು, ಗಂಟಲ ಬೇನೆ, ನೋವುಗಳಿಗೆ ಪರಿಹಾರಿ. ಕಿವಿಯ ಆರೋಗ್ಯಕ್ಕೆ ಪೂರಕ ಸಹ. ಎಳೆ ಹಸುಗೂಸಿನ ಕಿವಿಸೋರುವಿಕೆಗೆ, ಬಾಣಂತಿಗೆ ದಶಮೂಲಾರಿಷ್ಟದ ಸೇವನೆಯಿಂದ ಲಾಭ. ಉಳಿದಂತೆ ಕೂಡ ಆಯುರ್ವೇದದ ಆ್ಯಂಟಿಬಯಾಟಿಕ್ ದಶಮೂಲಾರಿಷ್ಟ ಸೇವನೆಯಿಂದ ಮೂಗು, ಕಿವಿ, ಗಂಟಲ ಕಿರಿ ಕಿರಿ, ಮುಚ್ಚಿಕೊಳ್ಳುವ ಶೀತಬಾಧೆಗಿದು ಉತ್ತಮ ಪರಿಹಾರೋಪಾಯ; ರೋಗನಿರೋಧಕ ಕಸುವು ವರ್ಧಕ.

ಸುಶ್ರುತರ ಪ್ರಕಾರ ಕಿವಿಯ ಅರೋಗ್ಯಕ್ಕೆ ಘೃತಪಾನ ಮೊದಲ ಹೆಜ್ಜೆ. ತ್ರಿಫಲ ಘೃತಸೇವನೆಯಿಂದ ಅಂತಹ ಫಲ ಖಂಡಿತ. ರಸಾಯನ, ಅಂದರೆ ಚ್ಯವನಪ್ರಾಶ ಮುಂತಾದ ಲೇಹದ ಸೇವನೆಯಿಂದ ದೇಹಬಲ ಹೆಚ್ಚಳ. ಕರ್ಣಾರೋಗ್ಯ ಸಾಧಕ. ಬ್ರಹ್ಮಚರ್ಯದ ಎಚ್ಚರದ ನುಡಿಯೂ ಕಿವಿಯ ನೂರ್ಕಾಲ ಕೇಳುವಿಕೆಯ ಮೆಟ್ಟಲು. ಮಂಜು, ಮಳೆಹನಿ, ಬೀಸುಗಾಳಿಗೆ ಎದುರಾಗಿ ಜಾಗಿಂಗ್, ವಾಕಿಂಗ್ ಹೋಗುವ ಪರಿಪಾಠವು ಕಿವಿಕಾಯಿಲೆಗೆ ದಾರಿ ಎನ್ನುತ್ತದೆ, ಆಯುರ್ವೇದ. ಇಂಥ ಸಂದರ್ಭಗಳಲ್ಲಿ ಬೆಚ್ಚನೆಯ ಮುಚ್ಚುಟೋಪಿಯನ್ನು ಧರಿಸಬೇಕಾದೀತು.

ಕಿವಿಯನ್ನು ಚುಚ್ಚಿ ಆಭರಣ ಹಾಕುವ ಕರ್ಣವೇಧನ ಸಂಸ್ಕಾರವು ಸುಶ್ರುತೋಕ್ತ. ಮಿದುಳಿನ ಕೆಲವು ನರನಾಡಿಗಳನ್ನು ಉದ್ದೀಪಿಸಿ ದೀರ್ಘಜೀವನ ಸಾಧಿಸುವ ಹಂತಗಳಿವು.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ – ಗಣಿತ

ವಾಸ್ತವ ಸಂಖ್ಯೆಗಳು

ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯ: ದತ್ತ ಧನ ಪೂರ್ಣಾಂಕಗಳಾದ a ಮತ್ತು b ಗಳಿಗೆ, $a=bq+r$ ಗೆ ಸರಿಹೊಂದುವಂತೆ q ಮತ್ತು r ಎಂಬ ಎರಡು ಅನನ್ಯ ಪೂರ್ಣಾಂಕಗಳಿರುತ್ತವೆ ಮತ್ತು ಇಲ್ಲಿ $0 \le r < b$ ಆಗಿರುತ್ತದೆ

‘ಯೂಕ್ಲಿಡ್‌ನ ಭಾಗಾಕಾರ ಕ್ರಮವಿಧಿಯನ್ನು ಸ್ಪಷ್ಟವಾಗಿ ನಿರೂಪಿಸುವುದು. $c > d$ ಆಗಿರುವಂತಹ c ಮತ್ತು d ಎಂಬ ಎರಡು ಧನ ಪೂರ್ಣಾಂಕಗಳ ಮ.ಸಾ.ಅ.ವನ್ನು ಕಂಡುಹಿಡಿಯಲು ನಾವು ಕೆಳಗಿನ ಹಂತಗಳನ್ನು ಅನುಸರಿಸುತ್ತೇವೆ.

ಹಂತ 1: ಯೂಕ್ಲಿಡ್‌ನ ಭಾಗಾಕಾರ ಅನುಪ್ರಮೇಯವನ್ನು c ಮತ್ತು d ಗಳಿಗೆ ಅನ್ವಯಿಸಿದಾಗ, $c= dq+r$ ಆಗುವಂತೆ q ಮತ್ತು r ಎಂಬ ಎರಡು ಪೂರ್ಣ ಸಂಖ್ಯೆಗಳನ್ನು ನಾವು ಪಡೆಯುತ್ತೇವೆ.

ಇಲ್ಲಿ $0 \le r < d$ ಆಗಿರುತ್ತದೆ.

ಹಂತ 2: $r = 0$ ಆದರೆ, dಯು c ಮತ್ತು dಗಳ ಮ.ಸಾ.ಅ. ಆಗಿರುತ್ತದೆ. $r \neq 0$ ಆದರೆ, ಭಾಗಾಕಾರ ಅನುಪ್ರಮೇಯವನ್ನು d ಮತ್ತು r ಗಳಿಗೆ ಅನ್ವಯಿಸಿ.

ಹಂತ 3: ಶೇಷವು ಸೊನ್ನೆಯಾಗುವ ತನಕ ಈ ಪ್ರಕ್ರಿಯೆಯನ್ನು ಮುಂದುವರಿಸಿ. ಈ ಹಂತ (ಶೂನ್ಯ ಶೇಷ) ದಲ್ಲಿನ ಭಾಜಕವು ಅಪೇಕ್ಷಿತ ಮ.ಸಾ.ಅ. ಆಗಿರುತ್ತದೆ.

ಇಲ್ಲಿ ಮ.ಸಾ.ಅ (c,d) = ಮ.ಸಾ.ಅ. (d,r) ಆಗಿರುವುದರಿಂದ, ಈ ಕ್ರಮವಿಧಿಯು ಕಾರ್ಯನಿರ್ವಹಿಸುತ್ತದೆ. ಇಲ್ಲಿ ಮ.ಸಾ.ಅ. (c,d) ಎಂಬ ಸಂಕೇತವು c ಮತ್ತು dಗಳ ಮ.ಸಾ.ಅ.ವನ್ನು ಸೂಚಿಸುತ್ತದೆ.

ಅಭ್ಯಾಸ 1.1

1) ಕೆಳಗಿನ ಪ್ರತಿ ಸಂಖ್ಯೆಯ ಅದರ ಅವಿಭಾಜ್ಯ ಅಪವರ್ತನಗಳನ್ನು ಕಂಡುಹಿಡಿಯಿರಿ

(1) 140 (2)156 (3)3825 (4)5005 (5)7429

ಉತ್ತರ:–

1) 140 =

2|140
2|70
5|35
7|7
1

$=2^2 \times 5 \times 7$

2) 156 =

2|156
2|78
3|39
13|13
1

$= 2^2 \times 3 \times 13$

3) 3825 =

5|3825
5|765
3|153
3|51
17|12
1

$= 3 \times 3 \times 5 \times 5 \times 17$
$=3^2 \times 5^2 \times 17$

4) 5005 =

5|5005
7|1001
11|143
13|13
1

$= 5 \times 7 \times 11 \times 13$

4)7429 =

17|7429
19|437
23|23
1

$= 17 \times 19 \times 23$

2) ಕೆಳಗೆ ನೀಡಿರುವ ಜೋಡಿ ಲಸಾಅ ಮತ್ತು ಮಸಾಅ ಕಂಡು ಹಿಡಿದು ಲಸಾಅXಮಸಾಅ= ಆ ಎರಡು ಸಂಖ್ಯೆಗಳ ಗುಣಲಬ್ಧ ಎಂಬುದನ್ನು ತಾಳೆ ನೋಡಿ (1) 26 ಮತ್ತು 91 (2) 510 ಮತ್ತು 92 (3) 336 ಮತ್ತು 54

ಉತ್ತರ:– (1) 26 ಮತ್ತು 91

a = 26: 2|26, 13|13, 1

b = 91: 7|91, 13|13, 1

$\therefore 26 = 2 \times 13$
$91 = 7 \times 13$

ಎರಡು ಸಂಖ್ಯೆಗಳ ಮಸಾಅ=13

ಎರಡು ಸಂಖ್ಯೆಗಳ ಲಸಾಅ $= 2 \times 7 \times 13$
$= 14 \times 13$
$= 182$

ಲಸಾಅ x ಮಸಾಅ = a x b
$13 \times 182 = 26 \times 91$
$2366 = 2366$

ಉತ್ತರ:– (2) 510 ಮತ್ತು 92

a = 510: 2|510, 5|255, 3|51, 17|17, 1

b = 92: 2|92, 2|46, 23|23, 1

$\therefore 510 = 2 \times 5 \times 3 \times 17$
$= 2 \times 3 \times 5 \times 17$
$92 = 2 \times 2 \times 23$
$= 2^2 \times 23$

ಎರಡು ಸಂಖ್ಯೆಗಳ ಮಸಾಅ = 2

ಎರಡು ಸಂಖ್ಯೆಗಳ ಲಸಾಅ $= 2 \times 2 \times 3 \times 5 \times 17 \times 23$
$= 4 \times 3 \times 5 \times 17 \times 23$
$= 60 \times 17 \times 23$
$= 23460$

ಲಸಾಅ x ಮಸಾಅ = a x b
(a b) x (a b) = a x b
$2 \times 23460 = 510 \times 92$
$46920 = 46920$

(ಮುಂದುವರಿಯುವುದು)

PUC: CHEMISTRY

Types of Solutions

1. Write a brief note on solution.

Ans:- A solution may contain two or more substances also called components or constituents. A solution which has two components is known as binary solution (e.g a solution of NaCl in water) while a solution with three components is called ternary solution (e.g. a solution of NaCI and KCI in water). Similarly even more than three components may also be present.

2. Express the Concentration of Solutions

Ans:- Concentration of a solution implies the amount of the solute present in a given quantity of the solution or the solvent. Thus, while expressing the concentration of a solution, only the relative amounts of the components are considered. The concentration of a binary solution can be expressed in a number of ways.

(i) Mass percentage (w/w): The mass percentage of a component of a solution is defined as:

Mass % of a component =

$$= \frac{\text{Mass of the component in the solution}}{\text{Total mass of the solution}} \times 100$$

(ii) Volume percentage (V/V): The volume percentage is defined as:

$$\text{Volume \% of a component} = \frac{\text{Volume of the component}}{\text{Total volume of solution}} \times 100$$

(iii) Mass by volume percentage (w/V): It is commonly used in medicine and pharmacy. It is mass by volume percentage.

It is the mass of solute dissolved in 100 mL of the solution.

(iv) Parts per million: When a solute is present in trace quantities, it is convenient to express concentration in parts per million (ppm) and is defined as:

Parts per million =

$$\frac{\text{Number of parts of the component}}{\text{Total number of parts of all components of the solution}} \times 10^6$$

(v) Mole fraction: Commonly used symbol for mole fraction is *x* and subscript used on the right hand side of *x* denotes the component. It is defined as:

Mole fraction of a component =

$$\frac{\text{Number of moles of the component}}{\text{Total number of moles of all the components}}$$

Mole fraction unit is very useful in relating some physical properties of solutions, say vapour pressure with the concentration of the solution and quite useful in describing the calculations involving gas mixtures.

vi) Molarity: Molarity (M) is defined as number of moles of solute dissolved in one litre (or one cubic decimetre) of solution,

$$\text{Molarity} = \frac{\text{Moles of solute}}{\text{Volume of solution in litre}}$$

= Moles of solute Molarity Volume of solution in litre (2.8)

(vii) Molality: Molality (m) is defined as the number of moles of the solute per kilogram (kg) of the solvent and is expressed as:

$$\text{Molality (m)} = \frac{\text{Moles of solute}}{\text{Mass of solvent in kg}}$$

Multiple Choice Questions:-

1. Which of the following units is useful in relating concentration of solution with its vapour pressure?

a) mole fraction b) parts per million
c) mass percentage d) molality

Ans:- a

2. On dissolving sugar in water at room temperature, solution feels cool to touch. Under which of the following cases dissolution of sugar will be most rapid?

a) Sugar crystals in cold water.
b) Sugar crystals in hot water.
c) Powdered sugar in cold water.
d) Powdered sugar in hot water.

Ans:- d

3. At equilibrium the rate of dissolution of a solid solute in a volatile liquid solvent is...............

a) less than the rate of crystallization
b) greater than the rate of crystallization
c) equal to the rate of crystallization
d) Zero **Ans:-** C

4. A breaker contains a solution of substance ‘A’. Precipitation of substance ‘A’ takes place when small amount of ‘A’ is added to the solution. The solution is -

a) saturated b) supersaturated
c) unsaturated d) concentrated

Ans:- b

5. Maximum amount of a solid solute that can be dissolved in a specified amount of a given liquid solvent does *not* depend upon ....

a) Temperature b) Nature of solute
c) Pressure d) Nature of solvent

Ans:- C

6. Low concentration of oxygen in the blood and tissues of people living at high altitude is due to ....

a) low temperature
b) low atmospheric pressure
c) high atmospheric pressure
d) both low temperature and high atmospheric pressure.

Ans:- b

7. Considering the formation, breaking and strength of hydrogen bond, predict which of the following mixtures will show a positive deviation from Raoult’s law?

a) Methanol and acetone
b) Chloroform and acetone
c) Nitric acid and water
d) Phenol and aniline. **Ans:-** a

8. Colligative properties depend on

a) the nature of the solute particles dissolved in solution.
b) the number of solute particles in solution.
c) the physical properties of the solute particles dissolved in solution.
d) the nature of solvent particles.

Ans:-b

9. In comparison to a 0.01 M solution of glucose, the depression in freezing point of a 0.01M $MgCl_2$ solution is.........

a) the same b) about twice
c) about 3 times d) about 6 times

Ans:- C

10. An unripe mango placed in a concentrated salt solution to prepare pickles, shrivels because............

a) it gains water due to osmosis,
b) it loses water due to reverse osmosis.
c) it gains water due to reverse osmosis.
d) it loses water due to osmosis.

Ans:- d

11. At a given temperature, osmotic pressure of a concentrated solution of a substance

a) is higher than that of a dilute solution.
b) is lower than that of a dilute solution.
c) is same as that of a dilute solution.
d) cannot compared with osmotic pressure of dilute solution.

Ans:- a

(Contd...)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾದರಿಯ ಪ್ರಶ್ನೋತ್ತರಕ್ಕೆ ಇಲ್ಲಿ ಸ್ಕ್ಯಾನ್ ಮಾಡಿ

ದಿಕ್ಸೂಚಿ ನಿಮಗೆ ಇಷ್ಟ ಆಗಿದೆಯೇ? ನಿಮ್ಮ ಅನಿಸಿಕೆಯನ್ನು ಇಲ್ಲಿ ದಾಖಲಿಸಿ

ಎ.ಸಿ ಬಿಎಂಟಿಸಿ ಬಸ್‌ಗಳಿಗೆ ದೇವನಹಳ್ಳಿಯಲ್ಲಿ ಸಿಗಬೇಕಿದೆ ಅನುಮತಿ

ರಸ್ತೆಗಿಳಿಯಲಿವೆ ಇ.ವಿ–ಎ.ಸಿ ಬಸ್

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಬಿಎಂಟಿಸಿಯಲ್ಲಿ ಮೊದಲ ಬಾರಿಗೆ ಎಲೆಕ್ಟ್ರಿಕ್ ಹವಾ ನಿಯಂತ್ರಿತ ಬಸ್‌ಗಳು ಸಂಚಾರಕ್ಕೆ ಸಿದ್ಧವಾಗಿವೆ. ಆದರೆ, ದೇವನಹಳ್ಳಿಯಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬಸ್ ಚಾರ್ಜಿಂಗ್ ಪಾಯಿಂಟ್ ಇನ್ನೂ ತಯಾರಾಗದ ಕಾರಣ ಈ ಬಸ್‌ಗಳು ರಸ್ತೆಗಳಿದಿಲ್ಲ.

ಸದ್ಯ ಸಂಚರಿಸುವ ಬಿಎಂಟಿಸಿ ಹವಾ ನಿಯಂತ್ರಿತ ಬಸ್‌ಗಳು ಡೀಸೆಲ್ ಎಂಜಿನ್ ಹೊಂದಿರುವ ವೋಲ್ವೊ ಬಸ್‌ಗಳಾಗಿವೆ. ಎಲೆಕ್ಟ್ರಿಕ್ ಬಸ್‌ಗಳು ಹವಾ ನಿಯಂತ್ರಣವನ್ನು ಹೊಂದಿರಲಿಲ್ಲ. ಹವಾನಿಯಂತ್ರಿತ ಇ.ವಿ ಬಸ್‌ಗಳನ್ನು ಬಿಎಂಟಿಸಿಗೆ ಒದಗಿಸುವ ಗುತ್ತಿಗೆಯನ್ನು ಅಶೋಕ್ ಲೇಲ್ಯಾಂಡ್ ಅಡಿಯಲ್ಲಿರುವ ಒಎಚ್‌ಎಂ (ಓಂ) ಸಂಸ್ಥೆ ಪಡೆದಿದೆ.

ಇವಿಗಳನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರದ ಭಾರಿ ಕೈಗಾರಿಕಾ ಸಚಿವಾಲಯವು 'ಫೇಮ್-2' ಯೋಜನೆಯ ಮೂಲಕ ಖಾಸಗಿ ಕಂಪನಿಗಳಿಗೆ ರಿಯಾಯಿತಿಯನ್ನು ನೀಡುತ್ತಿದೆ. ಒಎಚ್‌ಎಂ (ಓಂ) ಸಂಸ್ಥೆ ಬಸ್‌ಗಳನ್ನು ಒದಗಿಸುತ್ತಿದ್ದು, ನಿರ್ವಹಣೆ ಮತ್ತು ಚಾಲಕರ ಜವಾಬ್ದಾರಿಯು ಇದೇ ಸಂಸ್ಥೆಯದ್ದಾಗಿದೆ. ಬಿಎಂಟಿಸಿಯು ಪ್ರತಿ ಕಿಲೋಮೀಟರ್‌ಗೆ ₹65.8 ಬಾಡಿಗೆ ನೀಡಲಿದೆ. ನಿರ್ವಾಹಕರು ಬಿಎಂಟಿಸಿಯವರೇ ಆಗಿರುತ್ತಾರೆ.

'ದೇವನಹಳ್ಳಿಯಲ್ಲಿ ಬಿಎಂಟಿಸಿ ಬಸ್‌ಗಳ ಚಾರ್ಜಿಂಗ್‌ಗಾಗಿ 9 ಪಾಯಿಂಟ್‌ಗಳನ್ನು ನಿರ್ಮಿಸಲಾಗುತ್ತಿದೆ. ಇದರ ಕೆಲಸ ಮುಗಿದ ಬಳಿಕ ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ಪರಿಶೀಲನೆ ನಡೆಸಿ ನಿರಾಕ್ಷೇಪಣಾ ಪತ್ರ ನೀಡಬೇಕು. ಇಂಧನ ಇಲಾಖೆಯ ನಿರ್ದೇಶನಾಲಯದಿಂದ ಒಪ್ಪಿಗೆ ಸಿಗಬೇಕು. ಅಗ್ನಿಶಾಮಕ ದಳದಿಂದಲೂ ನಿರಾಕ್ಷೇಪಣಾ ಪತ್ರ ಸಿಗಬೇಕು. ಎಲ್ಲ ತಪಾಸಣೆಗಳು ಮುಗಿದ ಬಳಿಕ ಬಸ್ ಸಂಚಾರ ಆರಂಭವಾಗಲಿದೆ. ದೇವನಹಳ್ಳಿಗೆ 320 ಎಲೆಕ್ಟ್ರಿಕ್ ಬಸ್‌ಗಳಲ್ಲಿ ಮೊದಲ ಹಂತದಲ್ಲಿ 86 ಬಸ್‌ಗಳು ಸಂಚರಿಸಲಿವೆ. ಆನಂತರ ಹಂತ ಹಂತವಾಗಿ ಹೆಚ್ಚಳ ಮಾಡಲಾಗುವುದು' ಎಂದು ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

'ನಗರದಲ್ಲಿ ವಾಯುಮಾಲಿನ್ಯ ಕಡಿಮೆ ಮಾಡಲು ಎಲೆಕ್ಟ್ರಿಕ್ ವಾಹನಗಳ ಸಂಚಾರ ಹೆಚ್ಚಿಸುವುದು ಒಳ್ಳೆಯದು. ಬಸ್‌ಗಳು ಸಿದ್ಧವಿದ್ದರೂ ಸಂಚರಿಸಲು ಅವಕಾಶ ಸಿಗದೇ ಇರುವುದು ನಮ್ಮ ದುರಂತ. ಮೊದಲು ಚಾರ್ಜಿಂಗ್ ಪಾಯಿಂಟ್‌ಗಳನ್ನು ಮಾಡಿಕೊಂಡು ಆನಂತರ ಎಲೆಕ್ಟ್ರಿಕ್ ಬಸ್‌ಗಳ ವ್ಯವಸ್ಥೆ ಮಾಡಿದ್ದರೆ ಸಮಸ್ಯೆ ಇರುತ್ತಿರಲಿಲ್ಲ. ಚಾರ್ಜಿಂಗ್ ಪಾಯಿಂಟ್ ತಯಾರಾಗುವ ಮೊದಲೇ ಬಸ್ ತಯಾರಿಸಿ ಇಟ್ಟುಕೊಳ್ಳುವ ಯೋಜನೆ ಯಾರ ಕಲ್ಪನೆ ಎಂಬುದು ಗೊತ್ತಿಲ್ಲ. ಆದಷ್ಟು ಬೇಗ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್‌ಗಳು ನಗರದಿಂದ ವಿಮಾನ ನಿಲ್ದಾಣಕ್ಕೆ ಸಂಚಾರ ನಡೆಸುವಂತಾಗಬೇಕು' ಎಂದು ಪ್ರಯಾಣಿಕ ಯೋಗೀಶ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.



ಪ್ರಾಯೋಗಿಕ ಸಂಚಾರ ನಡೆಸುತ್ತಿರುವ ಎಲೆಕ್ಟ್ರಿಕ್ ಹವಾ ನಿಯಂತ್ರಿತ ಬಸ್

ಅಂಕಿ ಅಂಶ

320
ಒಎಚ್‌ಎಂ (ಓಂ) ಪೂರೈಸಲಿರುವ ಇ.ವಿ ಬಸ್‌ಗಳ ಸಂಖ್ಯೆ

20
ಪ್ರಯೋಗಾರ್ಥವಾಗಿ ಐಟಿಪಿಎಲ್ ಘಟಕದಿಂದ ಸಂಚರಿಸುತ್ತಿರುವ ಬಸ್‌ಗಳ ಸಂಖ್ಯೆ

ಒಂದು ತಿಂಗಳ ಒಳಗೆ ಸಂಚಾರ

ಐಟಿಪಿಎಲ್, ಕೆಂಪೇಗೌಡ ಬಸ್ ನಿಲ್ದಾಣ, ಕತ್ರಿಗುಪ್ಪೆ ಮತ್ತು ಹೆಬ್ಬಾಳ ಡಿಪೊಗಳಿಂದ ಎಲೆಕ್ಟ್ರಿಕ್ ಬಸ್‌ಗಳು ಸಂಚರಿಸಲಿವೆ. ಬಸ್‌ಗಳು ಚಾರ್ಜ್ ಆಗಿ ಹೊರಟ ಮೇಲೆ ದೇವನಹಳ್ಳಿಯಲ್ಲಿ ಚಾರ್ಜಿಂಗ್‌ಗೆ ಅವಕಾಶ ಇರಬೇಕಾಗುತ್ತದೆ. ಚಾರ್ಜಿಂಗ್ ಪಾಯಿಂಟ್ ನಿರ್ಮಾಣ ಕಾರ್ಯ ಅಲ್ಲಿ ನಡೆಯುತ್ತಿದ್ದು, ಇನ್ನು ಒಂದು ತಿಂಗಳಲ್ಲಿ ಸಿದ್ಧಗೊಳ್ಳಲಿದೆ. ಆನಂತರ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಇವಿ ಹವಾ ನಿಯಂತ್ರಿತ ಬಸ್‌ಗಳ ಸಂಚಾರ ಆರಂಭಗೊಳ್ಳಲಿದೆ ಎಂದು ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ. ಪ್ರಭಾಕರ ರೆಡ್ಡಿ ತಿಳಿಸಿದ್ದಾರೆ.



ರಾಜಾಜಿನಗರ ಇಸ್ಕಾನ್ ದೇವಸ್ಥಾನದಲ್ಲಿ ಸೋಮವಾರ ನಡೆದ ಬ್ರಹ್ಮ ರಥೋತ್ಸವದಲ್ಲಿ ರಾಧಾ ಕೃಷ್ಣಚಂದ್ರ, ಕೃಷ್ಣ ಬಲರಾಮ ಹಾಗೂ ನಿತ್ಯೆ ಗೌರಂಗ ದೇವರುಗಳ ವಿಗ್ರಹಗಳ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಜನಸ್ತೋಮ

'ನೀರು ಪೂರೈಕೆ: ಲೋಪ ಆಗದಂತೆ ಕ್ರಮ ಕೈಗೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೇಸಿಗೆ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರು ಪೂರೈಕೆಯಲ್ಲಿ ಯಾವುದೇ ಲೋಪ ಆಗದಂತೆ ಕ್ರಮ ಕೈಗೊಳ್ಳಬೇಕು' ಎಂದು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ (ಸಿಇಒ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಸೂಚನೆ ನೀಡಿದರು.

ರಾಜ್ಯದ ಎಲ್ಲ ಸಿಇಒಗಳ ಜೊತೆ ಸೋಮವಾರ ಅವರು ವಿಡಿಯೊ ಸಂವಾದ ನಡೆಸಿದರು.

ಕಳೆದ ವರ್ಷ ಉದ್ಭವಿಸಿದ್ದ ಸಮಸ್ಯೆಗಳನ್ನು ಅವಲೋಕಿಸಿ ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ಕೊಳವೆಬಾವಿಗಳ ದುರಸ್ತಿ, ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಬೇಕು, ವಾಹನಗಳ ಮೂಲಕ ನೀರು ಸರಬರಾಜಿಗೆ ಆದ್ಯತೆ ನೀಡಬೇಕು. ಜಿಲ್ಲಾಧಿಕಾರಿಗಳು ಮತ್ತು ಇತರ ಇಲಾಖೆಗಳ ಅಧಿಕಾರಿಗಳ ಜೊತೆ ಸಭೆ ನಡೆಸಿ ಯಾವುದೇ ಸಮಸ್ಯೆ ಎದುರಾಗದಂತೆ ನಿಗಾ ವಹಿಸಬೇಕು ಎಂದು ಸಚಿವರು ನಿರ್ದೇಶನ ನೀಡಿದರು.

ಮಾಹಿತಿ ನೀಡಿ: 'ಇ-ಸ್ವತ್ತು ಅನುಷ್ಠಾನಕ್ಕೆ ಸಮಿತಿ ರಚಿಸಲಾಗಿದೆ. ಈ ಸಮಿತಿಯ ಸದಸ್ಯರು ಪ್ರವಾಸ ಮಾಡಿ ಮಾಹಿತಿ ಸಂಗ್ರಹಿಸಲಿದ್ದಾರೆ. ಆ ಸಂದರ್ಭದಲ್ಲಿ ಮಾಹಿತಿ ನೀಡಬೇಕು' ಎಂದು ಸಚಿವರು ತಿಳಿಸಿದರು.

'ಕಳೆದ ಸಾಲಿನ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ಹಾಗೂ ಹೊಸ ವರ್ಷದ ಆಯವ್ಯಯ ಯೋಜನೆಗಳ ಅನುಷ್ಠಾನದ ನೀಲನಕ್ಷೆ ತಯಾರಿಸಲು ಅಧಿಕಾರಿಗಳು ಆದ್ಯತೆ ನೀಡಬೇಕು' ಎಂದೂ ಅವರು ನಿರ್ದೇಶನ ನೀಡಿದರು.

'ಒಂದು ಸಮುದಾಯ–ಎರಡು ವರ್ಗೀಕರಣ ಸಲ್ಲ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ರಾಜ್ಯದಲ್ಲಿ ಬಲಜಿಗ ಅಥವಾ ಬಣಜಿಗ ಸಮುದಾಯವನ್ನು ಉದ್ಯೋಗ ಹಾಗೂ ಶಿಕ್ಷಣದ ಉದ್ದೇಶಕ್ಕಾಗಿ ಹಿಂದುಳಿದ ವರ್ಗಗಳ ಪ್ರವರ್ಗ 'ಬಿ' ಮತ್ತು 'ಡಿ' ಎರಡರಲ್ಲೂ ವರ್ಗೀಕರಣ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಅಸಾಂವಿಧಾನಿಕ' ಎಂದು ಹೈಕೋರ್ಟ್ ಘೋಷಿಸಿದೆ.

'ಬಲಜಿಗ ಅಥವಾ ಬಣಜಿಗ ಸಮುದಾಯವನ್ನು ಶಿಕ್ಷಣದ ಉದ್ದೇಶಕ್ಕಾಗಿ ಪ್ರವರ್ಗ-ಬಿ ಅಡಿ ವರ್ಗೀಕರಿಸಿದ ನಂತರ ಉದ್ಯೋಗದ ಉದ್ದೇಶಕ್ಕೂ ಇದೇ ಪ್ರವರ್ಗದಡಿ ವರ್ಗೀಕರಿಸುವ ಅಗತ್ಯವಿದೆಯೇ ಹೊರತು ಪ್ರವರ್ಗ 'ಡಿ' ಅಡಿ ಅಲ್ಲ' ಎಂದು ಸ್ಪಷ್ಟಪಡಿಸಿರುವ ಏಕಸದಸ್ಯ ನ್ಯಾಯಪೀಠ, 'ಬಲಜಿಗ ಅಥವಾ ಬಣಜಿಗ ಸಮುದಾಯವನ್ನು ಸಂವಿಧಾನದ 16(4)ನೇ ವಿಧಿಯ ಅಡಿಯಲ್ಲಿ ಗ್ರೂಪ್ 'ಡಿ' ಬದಲಿಗೆ ಗ್ರೂಪ್ 'ಬಿ' ಅಡಿ ಮರು ವರ್ಗೀಕರಿಸಬೇಕು' ಎಂದು ನಿರ್ದೇಶಿಸಿದೆ.

'ಶೈಕ್ಷಣಿಕ ಉದ್ದೇಶಕ್ಕಾಗಿ ಒಂದು ಪ್ರವರ್ಗಕ್ಕೆ ಸೇರಿಸಿ, ಅದೇ ಸಮುದಾಯವನ್ನು ಆರ್ಥಿಕವಾಗಿ ಮುಂದುವರಿದಿದೆ ಎಂಬ ಕಾರಣದಡಿ ಉದ್ಯೋಗದ ಉದ್ದೇಶಕ್ಕೆ ಮತ್ತೊಂದು ಪ್ರವರ್ಗದಡಿ ವರ್ಗೀಕರಿಸಿ ಪ್ರಾತಿನಿಧ್ಯ ನೀಡಲಾಗದು' ಎಂದು ನ್ಯಾಯಪೀಠ ವಿವರಿಸಿದೆ.

ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಗೆಜ್ಜಲಮಟ್ಟ ಗ್ರಾಮದ ಶಿಕ್ಷಕಿ (41) ವಿ.ಸುಮಿತ್ರಾ ಸಲ್ಲಿಸಿದ್ದ ರಿಟ್ ಅರ್ಜಿ (ಸಂಖ್ಯೆ 15499/2013 ಜಿಎಂ–ಸಿಸಿ) ಪುರಸ್ಕರಿಸಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ಗ್ರೂಪ್ 'ಬಿ' ಅಡಿ ಉದ್ಯೋಗಕ್ಕಾಗಿ ಮೀಸಲು ಪಡೆಯಲು ಅರ್ಹರಾಗಿರುತ್ತಾರೆ. ಅವರಿಗೆ ಪ್ರವರ್ಗ 'ಬಿ' ಅಡಿಯಲ್ಲಿ ಉದ್ಯೋಗದ ಪ್ರಯೋಜನ ಕಲ್ಪಿಸುವ ನಿಟ್ಟನಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಆದೇಶಿಸಿದ್ದಾರೆ.

ಪ್ರಕರಣವೇನು?: ಬಲಜಿಗ ಅಥವಾ ಬಣಜಿಗ ಸಮುದಾಯಕ್ಕೆ ಸೇರಿದ ಸುಮಿತ್ರಾ ಪ್ರವರ್ಗ 'ಬಿ' ಅಡಿಯಲ್ಲಿ ಶಿಕ್ಷಣ ಪೂರ್ಣಗೊಳಿಸಿದ್ದರು. 1991ರಲ್ಲಿ ಶಿಕ್ಷಕಿ ಹುದ್ದೆಗೆ ಅರ್ಜಿ ಸಲ್ಲಿಸಿ, ಒಬಿಸಿ ಮೀಸಲು ಕೋರಿದ್ದರು. ನಂತರ 1993ರಲ್ಲಿ ಶಿಕ್ಷಕಿಯಾಗಿ ನೇಮಕಗೊಂಡಿದ್ದರು. ಸುಮಿತ್ರಾ ಪ್ರವರ್ಗ 'ಬಿ' ಸೇರಿದ್ದಾರೆ ಎಂದು ತಹಶೀಲ್ದಾರ್ ಪ್ರಮಾಣಪತ್ರ ನೀಡಿದ್ದರು.

'ಸುಮಿತ್ರಾ ಅವರ ಜಾತಿ ಪ್ರಮಾಣಪತ್ರ ಸಮರ್ಪಕವಾಗಿಲ್ಲ. ಅವರು ಉದ್ಯೋಗ ಮೀಸಲಾತಿಗೆ ಒಳಪಡುವುದಿಲ್ಲ. ಉದ್ಯೋಗದ ಉದ್ದೇಶದಿಂದ ಅವರು ಪ್ರವರ್ಗ 'ಡಿ'ಗೆ ಸೇರುತ್ತಾರೆಯೇ ಹೊರತು ಪ್ರವರ್ಗ 'ಬಿ' ಗೆ ಅಲ್ಲ ಎಂದು 1996ರಲ್ಲಿ ಮೈಸೂರು ಜಿಲ್ಲೆಯ ಜಾತಿ ಮತ್ತು ಆದಾಯ ಪರಿಶೀಲನಾ ಸಮಿತಿಯ, ಸದಸ್ಯ ಕಾರ್ಯದರ್ಶಿ ಸುಮಿತ್ರಾ ಅವರ ಜಾತಿ ಪ್ರಮಾಣಪತ್ರವನ್ನು ರದ್ದುಪಡಿಸಿದ್ದರು. ಇದನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಕೆಎಟಿ 2013ರಲ್ಲಿ ತಿರಸ್ಕರಿಸಿತ್ತು.



ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ಸ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಗಾಯಕಿ ಸ್ಫೂರ್ತಿ ರಾವ್ ಅವರು ಸೋಮವಾರ ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ

ಚಿತ್ರವೀಣಾ ಎನ್. ರವಿಕಿರಣ್‌ಗೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್.ವಿ. ನಾರಾಯಣಸ್ವಾಮಿ ರಾವ್ ಸ್ಮಾರಕ ರಾಷ್ಟ್ರೀಯ ಪ್ರಶಸ್ತಿಗೆ ಸಂಗೀತಗಾರ ಚಿತ್ರವೀಣಾ ಎನ್. ರವಿಕಿರಣ್ ಅವರನ್ನು ಆಯ್ಕೆ ಮಾಡಲಾಗಿದ್ದು, ಏಪ್ರಿಲ್ 26ರಂದು ಸಂಜೆ 4.15ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಶ್ರೀರಾಮಸೇವಾ ಮಂಡಳಿ ಟ್ರಸ್ಟ್ ಎಸ್‌ವಿಎನ್ ಸ್ಮಾರಕ ವಾರ್ಷಿಕ ಸಂಗೀತ ಉತ್ಸವ ನಡೆಸುತ್ತಿದ್ದು, ಏ. 26ರಂದು ನೆಟ್ಟಿಗೆರೆ ಗ್ರಾಮದ ಸೋಮನಹಳ್ಳಿಯಲ್ಲಿರುವ ಎಸ್.ವಿ.ಎನ್. ಸ್ಮಾರಕ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಯದುಗಿರಿ ಯತಿರಾಜ ಮಠದ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸಾನ್ನಿಧ್ಯ ವಹಿಸುವರು. ಸಂಸದ ಡಾ. ಸಿ.ಎನ್. ಮಂಜುನಾಥ್, ಹೈಕೋರ್ಟ್ ನ್ಯಾಯಮೂರ್ತಿ ಎನ್. ಕುಮಾರ್, ಜಯತೀರ್ಥ ವಿದ್ಯಾಪೀಠದ ಆಡಳಿತಾಧಿಕಾರಿ ಸತ್ಯಧ್ಯಾನಾಚಾರ್ಯ ಕಟ್ಟಿ, ನೆಲಗುಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಂಪತ್ ರಾಜು ಭಾಗವಹಿಸುವರು.

ಅಂದು ಮಧ್ಯಾಹ್ನ 3ಕ್ಕೆ ವಿಶೇಷ ಮಂಗಳವಾದ್ಯ ಗೋಷ್ಠಿ, ಸಂಜೆ 5.15ರಿಂದ ಚಿತ್ರವೀಣಾ ಎನ್. ರವಿಕಿರಣ್ ಮತ್ತು ತಂಡದಿಂದ ಚಿತ್ರವೀಣಾ ಕಛೇರಿ ನಡೆಯಲಿದೆ ಎಂದು ಟ್ರಸ್ಟ್ ಅಧ್ಯಕ್ಷ ಎ. ರವೀಂದ್ರ ತಿಳಿಸಿದ್ದಾರೆ.



ಚಿತ್ರವೀಣಾ ಎನ್. ರವಿಕಿರಣ್

ಅಡ್ಡಗಟ್ಟಿ ಕಲ್ಲಿನಿಂದ ಹೊಡೆದ ಸಾಫ್ಟ್‌ವೇರ್ ಎಂಜಿನಿಯರ್ ಬಂಧನ

ವಿಂಗ್ ಕಮಾಂಡರ್ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯುಸೇನೆಯ ವಿಂಗ್ ಕಮಾಂಡರ್ ಅವರನ್ನು ಅಡ್ಡಗಟ್ಟಿ ಕಲ್ಲಿನಿಂದ ಹೊಡೆದು ಹಲ್ಲೆ ನಡೆಸಿದ ಆರೋಪಕ್ಕೆ ಸಂಂಧಿಸಿದಂತೆ ಸಾಫ್ಟ್‌ವೇರ್ ಎಂಜಿನಿಯರ್ ಒಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಶಿಲಾದಿತ್ಯ ಬೋಸ್ ಹಲ್ಲೆಗೆ ಒಳಗಾದ ವಿಂಗ್ ಕಮಾಂಡರ್. ಇವರ ಪತ್ನಿ ಮಧುಮಿತಾ ದತ್ತ ದೂರು ಆಧರಿಸಿ ಖಾಸಗಿ ಕಂಪನಿಯ ಟೆಕಿ ವಿಕಾಸ್ ಕುಮಾರ್ ಅವರನ್ನು ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ವಾಯುಪಡೆಯ ಕೋಲ್ಕತ್ತ ನೆಲೆಯಲ್ಲಿ ವಿಂಗ್ ಕಮಾಂಡರ್ ಆಗಿರುವ ಶಿಲಾದಿತ್ಯ ಬೋಸ್ ಅವರು ಬೆಂಗಳೂರಿನಲ್ಲಿರುವ ಪತ್ನಿಯನ್ನು ಭೇಟಿ ಮಾಡಲು ಬಂದಿದ್ದರು. ಸಿ.ವಿ.ರಾಮನ್ ನಗರದಲ್ಲಿರುವ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ವಸತಿಗೃಹದಲ್ಲಿ ಪತ್ನಿ ಮಧುಮಿತಾ ವಾಸವಾಗಿದ್ದಾರೆ.


ಶಿಲಾದಿತ್ಯ ಬೋಸ್

‘ಅನಾರೋಗ್ಯ ಪೀಡಿತ ತಂದೆ ನೋಡಲು ಬೋಸ್ ಅವರು ಸೋಮವಾರ ಬೆಳಗಿನ ಜಾವ ಕೋಲ್ಕತ್ತಾಗೆ ತೆರಳಬೇಕಿತ್ತು. ವಿಮಾನ ನಿಲ್ದಾಣಕ್ಕೆ ಕಾರಿನಲ್ಲಿ ತೆರಳುತ್ತಿದ್ದ ವೇಳೆ, ದ್ವಿಚಕ್ರ ವಾಹನ ಸವಾರ ನಮ್ಮ ಕಾರನ್ನು ಹಿಂದಿಕ್ಕಿದ. ಮತ್ತೆ ವಾಪಸ್ ಬಂದು ಕಾರನ್ನು ಅಡ್ಡಗಟ್ಟಿ, ಚಾಲನೆ ಮಾಡುತ್ತಿದ್ದ ನನ್ನನ್ನು ಅವಾಚ್ಯ ಪದಗಳಿಂದ ನಿಂದಿಸಿದ. ಕಾರಿನ ಎಡಭಾಗದಲ್ಲಿ ಕುಳಿತಿದ್ದ ಬೋಸ್ ಅವರಿಗೆ ಕೈಯಿಂದ ಹೊಡೆದ. ಬಳಿಕ ಅಲ್ಲೇ ಇದ್ದ ಕಲ್ಲಿನಿಂದ ತಲೆಗೆ ಬಲವಾಗಿ ಹೊಡೆದ ಪರಿಣಾಮ ಗಾಯವಾಗಿ, ರಕ್ತ ಸುರಿದಿದೆ. ಆಗ ಸ್ಥಳೀಯರು ಬಂದು ಜಗಳ ಬಿಡಿಸಿದರು’ ಎಂದು ಮಧುಮಿತ ದತ್ತ ದೂರಿನಲ್ಲಿ ತಿಳಿಸಿದ್ದಾರೆ.

ಘಟನೆ ಸಂಬಂಧ ಪೂರ್ವ ವಿಭಾಗದ ಡಿಸಿಪಿ ದೇವರಾಜ್ ಮಾತನಾಡಿ, ‘ವಾಯುಪಡೆ ವಿಂಗ್ ಕಮಾಂಡರ್ ಮೇಲೆ ಹಲ್ಲೆ ನಡೆಸಿರುವ ಸಂಬಂಧ ಪ್ರಕರಣ ದಾಖಲಿಸಿಕೊಂಡು ಆರೋಪಿ ವಿಕಾಸ್ ಕುಮಾರ್ ಎಂಬಾತನನ್ನು ಬಂಧಿಸಲಾಗಿದೆ. ಖಾಸಗಿ ಕಂಪನಿಯಲ್ಲಿ ಆರೋಪಿ ಕೆಲಸ ಮಾಡುತ್ತಿದ್ದು, ಸಿ.ಸಿ. ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಹಾಗೂ ಸ್ಥಳೀಯರು ಮೊಬೈಲ್‌ನಲ್ಲಿ ಸೆರೆಹಿಡಿದಿರುವ ಘಟನೆಯ ದೃಶ್ಯವನ್ನು ಪರಿಶೀಲಿಸಿದ ನಂತರ ಬಂಧಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಶಿಲಾದಿತ್ಯ ಅವರು ಪ್ರಕರಣ ದಾಖಲಾಗುವ ಮುನ್ನ ವಿಡಿಯೊ ಮಾಡಿ, ‘ಕರ್ನಾಟಕ ಏಕೆ ಹೀಗಾಯಿತು... ನನಗೆ ನಂಬಲು ಆಗುತ್ತಿಲ್ಲ. ದೇವರು ನಮಗೆ ಸಹಾಯ ಮಾಡುತ್ತಾನೆ. ಹಲ್ಲೆ ನಡೆಸಿರುವ ವ್ಯಕ್ತಿಯನ್ನು ಬಂಧಿಸಬೇಕು. ಪೊಲೀಸರು ಸರಿಯಾಗಿ ಸ್ಪಂದಿಸಿಲ್ಲ’ ಎಂದು ಆರೋಪಿಸಿದ್ದರು. ಈ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡಿತ್ತು.

ಪರಸ್ಪರ ಹೊಡೆದಾಟ

ಅಪರಾಧ ಸುದ್ದಿ

ಘಟನೆಗೆ ಸಂಬಂಧಿಸಿದಂತೆ ಶಿಲಾದಿತ್ಯ ಬೋಸ್ ಮತ್ತು ವಿಕಾಸ್ ಕುಮಾರ್ ಅವರು ಪರಸ್ಪರ ಹೊಡೆದಾಡಿ ಕೊಂಡಿರುವ ವಿಡಿಯೊ ಜಾಲತಾಣ ದಲ್ಲಿ ಹರಿದಾಡುತ್ತಿದೆ. ಬೋಸ್ ಅವರು ವಿಕಾಸ್ ಅವರ ಕೊರಳ ಪಟ್ಟಿಗೆ ಕೈ ಹಾಕಿ, ಹಲವು ಬಾರಿ ಕೈನಿಂದ ಗುದ್ದಿದ್ದಾರೆ. ವಿಕಾಸ್ ಕೆಳಗೆ ಬಿದ್ದರೂ ಬಿಡದೆ, ಒದೆಯುತ್ತಿರುವ ದೃಶ್ಯ ಘಟನಾ ಸ್ಥಳದ ಬಳಿಯ ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಅಲ್ಲದೇ ವಿಕಾಸ್ ಅವರ ದ್ವಿಚಕ್ರ ವಾಹನದ ಕೀಯನ್ನು ಕಿತ್ತುಕೊಂಡು ಬಿಸಾಡಿದ್ದಾರೆ. ಸ್ಥಳೀಯರು ಜಗಳ ಬಿಡಿಸಲು ಹರಸಾಹಸ ಪಟ್ಟ ದೃಶ್ಯವೂ ಸೆರೆಯಾಗಿದೆ.

ಸೈಬರ್ ಅಪರಾಧ: ಜಾಗೃತಿ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೈಬರ್ ಅಪರಾಧಗಳ ಬಗ್ಗೆ ವೈಜ್ಞಾನಿಕವಾಗಿ ಜಾಗೃತಿ ಮೂಡಿಸಲು ನಗರ ಪೊಲೀಸ್–ದಕ್ಷಿಣ ವಲಯದ ಸಹಯೋಗದಲ್ಲಿ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್ ವತಿಯಿಂದ ಕಾರ್ಯಕ್ರಮ ಆಯೋಜಿಸಲಾಗಿದೆ.

ಎನ್.ಆರ್. ಕಾಲೊನಿಯ ಶ್ರೀರಾಮ ಮಂದಿರದಲ್ಲಿ ಏ. 26ರಂದು ಬೆಳಿಗ್ಗೆ 10ರಿಂದ ಕಾರ್ಯಕ್ರಮ ನಡೆಯಲಿದ್ದು, ಶಾಸಕ ರವಿಸುಬ್ರಮಣ್ಯ ಅವರು ಚಾಲನೆ ನೀಡಲಿದ್ದಾರೆ. ಡಿಸಿಪಿ ಲೋಕೇಶ್ ಬಿ. ಜಗಲಾಸರ್, ಸಿಐಡಿ ಘಟಕದ ಸೈಬರ್ ಅಪರಾಧ ವಿಭಾಗದ ಡಿವೈಎಸ್‌ಪಿ ಕೆ.ಎನ್. ಯಶವಂತಕುಮಾರ್ ಹಾಗೂ ಸೈಬರ್ ಅಪರಾಧ ಉಪವಿಭಾಗದ ಎಸಿಪಿ ವಿಜಯ್ ಹಡಗಲಿ ಭಾಗವಹಿಸುವರು.

‘ಸೈಬರ್ ಅಪರಾಧದ ಬಗ್ಗೆ ಹೆಚ್ಚಿನ ತಿಳಿವಳಿಕೆ ನೀಡುವ ಕಾರ್ಯಕ್ರಮ ಇದು’ ಎಂದು ಬ್ಯಾಂಕ್‌ನ ಅಧ್ಯಕ್ಷ ಎಂ.ಆರ್. ವೆಂಕಟೇಶ್ ತಿಳಿಸಿದ್ದಾರೆ.

ಓಂ ಪ್ರಕಾಶ್ ಹತ್ಯೆ: ಮಡಿವಾಳ ಎಸಿಪಿ ನೇತೃತ್ವದಲ್ಲಿ ತನಿಖೆ

‘ನಮ್ಮನ್ನು ಏಕೆ ವಶಕ್ಕೆ ಪಡೆದುಕೊಂಡಿದ್ದೀರಿ. ನಮ್ಮನ್ನು ಮುಟ್ಟಬೇಡಿ’ ಎಂದು ಪ್ರಶ್ನಿಸಿ, ಹೊಯ್ಸಳ ಜೀಪಿನಿಂದ ಕೆಳಕ್ಕೆ ಇಳಿಯಲು ಪಲ್ಲವಿ ಸತಾಯಿಸಿದರು

ಠಾಣೆ ಎದುರು ಪಲ್ಲವಿ, ಕೃತಿ ರಂಪಾಟ

ಬೆಂಗಳೂರು: ನಿವೃತ್ತ ಪೊಲೀಸ್ ಮಹಾನಿರ್ದೇಶಕ ಓಂ ಪ್ರಕಾಶ್ ಹತ್ಯೆ ಪ್ರಕರಣದ ತನಿಖೆಯನ್ನು ಮಡಿವಾಳ ಉಪ ವಿಭಾಗದ ಎಸಿಪಿ ವಾಸುದೇವ್ ನೇತೃತ್ವದ ತಂಡವು ನಡೆಸುತ್ತಿದೆ.


ಪಲ್ಲವಿ ಮತ್ತು ಓಂ ಪ್ರಕಾಶ್

ಪ್ರಕರಣದ ಸಂಬಂಧ ಓಂ ಪ್ರಕಾಶ್ ಅವರ ಪುತ್ರ ಕಾರ್ತಿಕೇಶ್ ಅವರ ದೂರು ಆಧರಿಸಿ, ಎಚ್.ಎಸ್.ಆರ್ ಲೇಔಟ್ ಠಾಣೆ ಪೊಲೀಸರು ಮೃತರ ಪತ್ನಿ ಪಲ್ಲವಿ ಮತ್ತು ಮಗಳು ಕೃತಿ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ವಿಚಾರಣೆ ನಡೆಸುತ್ತಿದ್ದಾರೆ. ಕೃತ್ಯ ನಡೆದ ಸ್ಥಳ ದಲ್ಲಿ ಪಿಸ್ತೂಲ್, ಚಾಕು ಹಾಗೂ ಇತರೆ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಕೃತ್ಯದ ಕುರಿತು ಇಬ್ಬರಿಂದಲೂ ಹೇಳಿಕೆ ಪಡೆದುಕೊಂಡ ಬಳಿಕ ಭಾನುವಾರ ರಾತ್ರಿ ಮಹಿಳಾ ಸಾಂತ್ವನ ಕೇಂದ್ರದಲ್ಲಿ ಇರಿಸಲಾಗಿತ್ತು. ಸೋಮವಾರ ಬೆಳಿಗ್ಗೆ ಇಬ್ಬರನ್ನೂ ಠಾಣೆಗೆ ಕರೆತಂದಾಗ ರಂಪಾಟ ನಡೆಸಿದರು.

‘ಕೊನೆಗೂ ಅವರನ್ನು ಮನವೊಲಿಸಿ ಕೆಳಕ್ಕೆ ಇಳಿಸಿ ವಿಚಾರಣೆಗೆ ಕರೆದೊಯ್ದರು. ವಿಧಿ ವಿಜ್ಞಾನ ಪ್ರಯೋಗಾಲಯದ ಅಧಿಕಾರಿಗಳು ಬೆರಳಚ್ಚು ಪಡೆಯುವಾಗಲೂ ಸಹಕರಿಸಲಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಧೈರ್ಯದಿಂದ ಸಮಸ್ಯೆ ಎದುರಿಸುತ್ತಿದ್ದರು...’

‘ಓಂ ಪ್ರಕಾಶ್ ಅವರು ಎಂತಹ ಸಮಸ್ಯೆಗಳು ಬಂದರೂ ಧೈರ್ಯದಿಂದ ಎದುರಿಸುತ್ತಿದ್ದರು. ಅಧಿಕಾರಿಯಾಗಿದ್ದಾಗ ಯಾರೊಂದಿಗೂ ದರ್ಪದಿಂದ ವರ್ತಿಸಿದ ಉದಾಹರಣೆಗಳಿಲ್ಲ. ಅವರು ಪೊಲೀಸ್ ಮಹಾ ನಿರ್ದೇಶಕ ರಾಗಿದ್ದ ಅವಧಿಯಲ್ಲಿ ಉತ್ತಮ ಕಾರ್ಯಗಳು ನಡೆದಿವೆ. ಅಧಿಕಾರಿಗಳು ಮಾಡುವ ಸಣ್ಣಪುಟ್ಟ ತಪ್ಪುಗಳನ್ನು ತಿದ್ದಿ ಪ್ರೋತ್ಸಾಹ ನೀಡುತ್ತಿದ್ದರು’ ಎಂದು ನಿವೃತ್ತ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಹೇಳಿದರು.

‘ಬಾಬರಿ ಮಸೀದಿ ನೆಲಸಮ ಪ್ರಕರಣ ಸಂಭವಿಸಿದಾಗ ಶಿವಮೊಗ್ಗ ಜಿಲ್ಲೆಯ ಎಸ್‌ಪಿಯಾಗಿದ್ದ ಅವರು ಎಲ್ಲರಿಗೂ ಧೈರ್ಯ ತುಂಬಿ, ಕೋಮು ಗಲಭೆಗಳು ಸಂಭವಿಸದಂತೆ ನೋಡಿಕೊಂಡಿದ್ದರು’ ಎಂದು ಸ್ಮರಿಸಿದರು.

ಚಿತ್ರಾವಳಿ



ಬಿಎಂಟಿಸಿ ಉಳಿಕೆ ಮೂಲ ವೃಂದದ ನಿರ್ವಾಹಕ ಹುದ್ದೆಯ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸಿ ನೇಮಕಾತಿ ಆದೇಶ ಪತ್ರವನ್ನು ನೀಡುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಖಿಲ ಕರ್ನಾಟಕ ವಿದ್ಯಾರ್ಥಿ ಒಕ್ಕೂಟದಿಂದ ಸೋಮವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ



‘ಭಾರತ್ ಗ್ಲೋಬಲ್ ಕಲ್ಚರಲ್ ಎಕ್ಸ್‌ಪೋ ಫೆಬ್ರುವರಿ–2026’ ಇದರ ಪೂರ್ವಭಾವಿಯಾಗಿ ನಗರದ ವಿಧಾನಸೌಧದ ಮೆಟ್ಟಿಲುಗಳ ಮುಂಭಾಗದಲ್ಲಿ ಆಯೋಜಿಸಿದ್ದ ಬಿಜಿಸಿಇ ಬೈಕ್ ರ್‍ಯಾಲಿ–2025ಕ್ಕೆ ವಿಧಾನ ಸಭಾಧ್ಯಕ್ಷ ಯು.ಟಿ. ಖಾದರ್, ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಇ. ಸುಧೀಂದ್ರ ಭಾನುವಾರ ಚಾಲನೆ ನೀಡಿದರು. ವಿಧಾನ ಪರಿಷತ್ ಮಾಜಿ ಸದಸ್ಯ ಎಸ್.ವಿ. ಉಗ್ರಪ್ಪ, ಮಾಜಿ ಶಾಸಕಿ ಸೌಮ್ಯಾ ರೆಡ್ಡಿ, ಮಾಜಿ ಮೇಯರ್ ಸಂಪತ್ ರಾಜ್ ಭಾಗವಹಿಸಿದ್ದರು



ಶ್ರೀ ಸಿರಿನಾಡು ಮಹಾಸಭಾ ಸೋಮವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ (ಎಕೆಬಿಎಂಎಸ್) ನೂತನ ಅಧ್ಯಕ್ಷ ಎಸ್. ರಘುನಾಥ್ ಅವರನ್ನು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಸನ್ಮಾನಿಸಿದರು. ಎಕೆಬಿಎಂಎಸ್‌ನ ಹಿರಿಯ ಉಪಾಧ್ಯಕ್ಷ ಆರ್. ಲಕ್ಷ್ಮೀಕಾಂತ್, ಖಜಾಂಚಿ ಸುಬ್ಬನರಸಿಂಹ, ಸಿರಿನಾಡು ಮಹಾಸಭಾದ ಗೌರವ ಅಧ್ಯಕ್ಷ ಎಚ್.ಎನ್. ಸುಬ್ರಹ್ಮಣ್ಯ, ಅಧ್ಯಕ್ಷ ಎಸ್. ಸುದರ್ಶನಂ ಉಪಸ್ಥಿತರಿದ್ದರು

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತಗಳಲ್ಲಿ ಇಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ.

ಲಾರಿ ಡಿಕ್ಕಿ ಹೊಡೆದ ಪರಿಣಾಮ ದ್ವಿಚಕ್ರ ವಾಹನ ಸವಾರ ಮೃತಪಟ್ಟ ಘಟನೆ ವೈಟ್‌ಫೀಲ್ಡ್ ಬಳಿ ನಡೆದಿದೆ. ಕರಾಟೆ ತರಬೇತುದಾರ ಸರೋಜ್ ಪಾಲ್ (49) ಮೃತ ವ್ಯಕ್ತಿ.

ಪಶ್ಚಿಮ ಬಂಗಾಳದ ಸರೋಜ್ ಪಾಲ್ ನಾಗನಾಥಪುರದಲ್ಲಿ ವಾಸವಾಗಿದ್ದರು. ಭಾನುವಾರ ರಾತ್ರಿ ವೈಟ್‌ಫೀಲ್ಡ್‌ನಿಂದ ನಾಗನಾಥಪುರದಲ್ಲಿರುವ ತಮ್ಮ ಮನೆಗೆ ದ್ವಿಚಕ್ರ ವಾಹನದಲ್ಲಿ ಹೋಗುವಾಗ ಲಾರಿ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟರು.

ಬೆಳ್ಳಂದೂರು ಸಂಚಾರ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

‘ಅಪಘಾತದ ಬಳಿಕ ಲಾರಿ ಚಾಲಕ ಪರಾರಿಯಾಗಿದ್ದಾನೆ. ಲಾರಿಯನ್ನು ವಶಕ್ಕೆ ಪಡೆಯಲಾಗಿದ್ದು, ಮಾಲೀಕರನ್ನು ಪತ್ತೆ ಮಾಡಲಾಗಿದೆ. ಪ್ರಕರಣ ದಾಖಲಿಸಿಕೊಂಡಿದ್ದು, ಶೀಘ್ರದಲ್ಲಿ ಆರೋಪಿ ಬಂಧಿಸಲಾಗುವುದು’ ಎಂದು ಪೊಲೀಸರು ತಿಳಿಸಿದರು.

ಮತ್ತೊಂದು ಪ್ರಕರಣದಲ್ಲಿ ಕುಮಾರಸ್ವಾಮಿ ಲೇಔಟ್ ಪೊಲೀಸ್ ಠಾಣಾ ವ್ಯಾಪ್ತಿಯ ವಸಂತಪುರದಲ್ಲಿ ಸೋಮವಾರ ಬೆಳಿಗ್ಗೆ ಲಾರಿ ಡಿಕ್ಕಿ ಹೊಡೆದು ಪಾದಚಾರಿ ಕೇಸಿದೇವಿ (49) ಮೃತಪಟ್ಟಿದ್ದಾರೆ.

ಸುಬ್ರಮಣ್ಯಪುರ ಕಡೆಯಿಂದ ವಸಂತಪುರ ಕಡೆಗೆ ರಸ್ತೆಯಲ್ಲಿ ನಡೆದುಕೊಂಡು ಹೋಗುವಾಗ ಮಹೇಶ್ ಪಿ.ಯು ಕಾಲೇಜು ಸಮೀಪ ಹಿಂದಿನಿಂದ ಬಂದ ಟಿಪ್ಪರ್ ಲಾರಿ ಡಿಕ್ಕಿ ಹೊಡೆದಿದೆ. ಕೆಳಕ್ಕೆ ಬಿದ್ದ ಅವರ ತಲೆ ಮೇಲೆ ಚಕ್ರಗಳು ಹರಿದು ಸಾವಿಗೀಡಾದರು. ಈ ಬಗ್ಗೆ ಮೃತರ ಪತಿ ಖುಮರಾಮ್ ದೂರು ನೀಡಿದ್ದಾರೆ.

‘ಮದ್ಯದ ಅಮಲಿನಲ್ಲಿದ್ದ ಚಾಲಕ ಡಿಕ್ಕಿ ಹೊಡೆದಿದ್ದು, ಲಾರಿಯನ್ನು ವಶಕ್ಕೆ ಪಡೆಯಲಾಗಿದೆ. ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಕುಮಾರಸ್ವಾಮಿ ಲೇಔಟ್ ಸಂಚಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ವಿಶ್ವ ಭೂಮಿ ದಿನಾಚರಣೆ: ಎಚ್.ಎಸ್.ಎಂ. ಪ್ರಕಾಶ್, ಬಿ.ಆರ್. ವೆಂಕಟೇಶ್, ನಾಗೇಶ ಹೆಗಡೆ, ಟಿ.ಜೆ. ರೇಣುಕಾ ಪ್ರಸಾದ್, ಆಯೋಜನೆ: ಪರಿಸರಕ್ಕಾಗಿ ನಾವು ಮತ್ತು ಜ್ಞಾನಭಾರತಿ ವಾಯು ವಿಹಾರಿಗಳ ಸಂಘ, ನಮ್ಮವರ ತಂಡ, ಸ್ವಯಂ ಜಾಗೃತಿ, ಮಿಡಿತ ಫೌಂಡೇಶನ್, ಗ್ರೀನ್ ಆರ್ಮಿ, ಸ್ಥಳ: ಜಿಯೋ ಪಾರ್ಕ್, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 7ರಿಂದ

‘ರಾಜ್ಯಮಟ್ಟದ ಕಲಾ ಸಂಸ್ಕೃತಿ ಉತ್ಸವ’ ವಿಚಾರಸಂಕಿರಣ: ಉದ್ಘಾಟನೆ: ಕೆ.ಬಿ. ಲೋಕೇಶ್, ಅತಿಥಿಗಳು: ಕೆ.ಎಲ್. ಬಬಿತಾ, ಆರ್. ಕೃಷ್ಣಮೂರ್ತಿ, ಉಪಸ್ಥಿತಿ: ಎನ್. ಯೋಗೇಶ್, ಪ್ರಾಸ್ತಾವಿಕ ನುಡಿ: ಬಂಡ್ಲಹಳ್ಳಿ ವಿಜಯಕುಮಾರ್, ‘ಸಾಮಾಜಿಕ ಜಾಲತಾಣಗಳಿಂದ ಮಾನವೀಯ ಮೌಲ್ಯಗಳ ಕುಸಿತ’ ವಿಚಾರಸಂಕಿರಣ: ಬಿ. ಸುರೇಶ್‌ಗೌಡ, ‘ನಾಯಕತ್ವ ಮತ್ತು ವೃತ್ತಿ ಮಾರ್ಗದರ್ಶನ’ ವಿಚಾರಸಂಕಿರಣ: ಎಚ್.ಎಸ್. ಗಣೇಶ್ ಭಟ್ಟ, ಆಯೋಜನೆ ಮತ್ತು ಸ್ಥಳ: ಮರಿಯಪ್ಪ ಪ್ರಥಮ ದರ್ಜೆ ಕಾಲೇಜು, ಮಹಾಕವಿ ಕುವೆಂಪು ರಸ್ತೆ, ಗಾಯಿತ್ರಿನಗರ, ಬೆಳಿಗ್ಗೆ 8


ಜಿಲ್ಲಾಮಟ್ಟದ ಪ್ರಥಮ ದಲಿತ ಸಾಹಿತ್ಯ ಸಮ್ಮೇಳನ–2025: ಸಮ್ಮೇಳನಾಧ್ಯಕ್ಷ: ಕೋಟಿಗಾನಹಳ್ಳಿ ರಾಮಯ್ಯ, ಉದ್ಘಾಟನೆ: ಬರಗೂರು ರಾಮಚಂದ್ರಪ್ಪ, ಅಧ್ಯಕ್ಷತೆ: ಅರ್ಜುನ ಗೊಳಸಂಗಿ, ಅತಿಥಿಗಳು: ಮಾವಳ್ಳಿ ಶಂಕರ್, ಪಿಚ್ಚಳ್ಳಿ ಶ್ರೀನಿವಾಸ್, ಹೊನ್ನು ಸಿದ್ಧಾರ್ಥ, ಮಂಜುಳಾ ಪಿ., ಗೋಷ್ಠಿಗಳು: ‘ದಲಿತ ಸಾಹಿತ್ಯದ ಚಾರಿತ್ರಿಕ ನೆಲೆಗಳು’, ‘ದಲಿತ ಚಳವಳಿ ಹಾಗೂ ದಲಿತ ಸಾಹಿತ್ಯದ ಮುಂದಿರುವ ಸವಾಲು ಮತ್ತು ಸಾಧ್ಯತೆಗಳು’, ‘ಕೋಟಿಗಾನಹಳ್ಳಿ ರಾಮಯ್ಯ ಅವರ ಬದುಕು–ಬರಹ’, ಆಯೋಜನೆ: ದಲಿತ ಸಾಹಿತ್ಯ ಪರಿಷತ್ತು ಬೆಂಗಳೂರು ನಗರ ಜಿಲ್ಲಾ ಘಟಕ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 8.30ರಿಂದ

ಪದವಿ ಪ್ರದಾನ ಸಮಾರಂಭ: ಉದ್ಘಾಟನೆ: ಡಾ. ಶರಣಪ್ರಕಾಶ ಪಾಟೀಲ, ಉಪಸ್ಥಿತಿ: ಡಾ.ಸಿ.ಆರ್. ಚಂದ್ರಶೇಖರ್, ಅತಿಥಿಗಳು: ಡಾ.ಎನ್. ಶ್ರೀನಿವಾಸನ್, ಆಯೋಜನೆ ಮತ್ತು ಸ್ಥಳ: ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಕೆ.ಆರ್. ರಸ್ತೆ, ಕೋಟೆ, ಬೆಳಿಗ್ಗೆ 8.30ರಿಂದ

31ನೇ ವಾರ್ಷಿಕ ಘಟಿಕೋತ್ಸವ: ಅತಿಥಿಗಳು: ದಿ ಗ್ರೇಟ್ ಖಲಿ, ಅಧ್ಯಕ್ಷತೆ: ಶ್ರುತಿ ಶರ್ಮಾ, ಉಪಸ್ಥಿತಿ: ಎ.ಆರ್. ವೇಣುಗೋಪಾಲ್, ಶ್ರೀಧರನ್ ಶರ್ಮಾ, ಬಿ.ಆರ್. ಶೆಟ್ಟಿ, ಸಿ.ಆರ್. ಶೆಟ್ಟಿ, ಆಯೋಜನೆ ಮತ್ತು ಸ್ಥಳ: ಬೃಂದಾವನ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ದ್ವಾರಕಾನಗರ, ಬಾಗಲೂರು ಮುಖ್ಯರಸ್ತೆ, ಯಲಹಂಕ, ಬೆಳಿಗ್ಗೆ 9


ದಿ ಗ್ರೇಟ್ ಖಲಿ ದಲೀಪ್ ಸಿಂಗ್ ರಾಣಾ

ರವಿ ಸಂಭ್ರಮ: ಅತಿಥಿಗಳು: ಜಿ. ಪರಮೇಶ್ವರ, ರಾಧಾಕೃಷ್ಣ, ಎಸ್.ಟಿ. ಸೋಮಶೇಖರ್, ಗುರುರಾಜ ಕರಜಗಿ, ಮುರಳಿ, ರಶ್ಮಿ ರವಿಕಿರಣ್, ತೇಜಸ್ ಕಿರಣ್, ಆಯೋಜನೆ ಮತ್ತು ಸ್ಥಳ: ಈಸ್ಟ್ ವೆಸ್ಟ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಮಾಗಡಿ ರಸ್ತೆ, ಭರತನಗರ, ಅಂಜನಾನಗರ, ಬ್ಯಾಡರಹಳ್ಳಿ, ಬೆಳಿಗ್ಗೆ 10.30


ಗುರುರಾಜ ಕರಜಗಿ

ವಸುಂಧರ, ಪರಮಶಿವಯ್ಯ ದತ್ತಿ ಹಸ್ತಪ್ರತಿ ಮತ್ತು ತಾಳೆಗರಿ ಅಧ್ಯಯನ ಪುರಸ್ಕಾರ ಪ್ರದಾನ: ಪುರಸ್ಕಾರ ಸ್ವೀಕರಿಸುವವರು: ಅಶೋಕ್ ಹೆದ್ಲಿ, ವಸುಂಧರ ಅವರ ‘ತಾಮ್ರಶಾಸನಗಳು ಮತ್ತು ತಾಳೆಗರಿ ಹಸ್ತಪ್ರತಿಗಳು ತೌಲನಿಕ ಅಧ್ಯಯನ’ ಪುಸ್ತಕ ಬಿಡುಗಡೆ: ಕೆ.ಆರ್. ಗಣೇಶ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಸಂಜೆ 5

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ವೀಣಾ ಮೃದಂಗ ಜುಗಲಬಂದಿ: ಜಿ. ಶ್ರೀಲತಾ, ಪುತ್ತೂರು ನಿಕ್ಷೀತ್, ಸುಕನ್ಯಾ ರಾಂಗೋಪಾಲ್, ಆರ್. ಕಾರ್ತಿಕ್, ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಬೆಂಗಳೂರು ಸಹೋದರರು, ಮತ್ತೂರು ಶ್ರೀನಿಧಿ, ಉಮಯಾಲಪುರಂ ಶಿವರಾಮನ್, ರಂಗನಾಥ ಚಕ್ರವರ್ತಿ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu @prajavani.co.in

ಜಾತಿಜನಗಣತಿ ಕುರಿತು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಹೇಳಿಕೆ

‘ಕುರ್ಚಿ ಉಳಿಸಿಕೊಳ್ಳಲು ಮುನ್ನೆಲೆಗೆ ತಂದಿಲ್ಲ’

ಪ್ರಜಾವಾಣಿ ವಾರ್ತೆ



ಯತೀಂದ್ರ

ಮೈಸೂರು: ‘ಮುಖ್ಯಮಂತ್ರಿ ಕುರ್ಚಿಯನ್ನು ಉಳಿಸಿಕೊಳ್ಳಲು ಸಿದ್ದರಾಮಯ್ಯ ಜಾತಿ ಜನಗಣತಿಯನ್ನು ಮುನ್ನೆಲೆಗೆ ತಂದಿದ್ದಾರೆಂಬುದು ಸುಳ್ಳು’ ಎಂದು ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಇಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕುರ್ಚಿಗೆ ಆಪತ್ತೆಲ್ಲಿ ಬಂದಿದೆ? ಸುರಕ್ಷಿತವಾಗಿದೆ. ಇಳಿಸಬೇಕೆಂದು ಯಾರಾದರೂ ಹೇಳಿದ್ದಾರಾ? ನಮ್ಮ ಶಾಸಕರು ಮತ್ತು ಹೈಕಮಾಂಡ್‌ನವರು ಸಿ.ಎಂ. ಪರ ನಿಂತಿದ್ದಾರೆ. ಮುಡಾ ಪ್ರಕರಣದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ತನಿಖೆಗೂ–ಜಾತಿ ಜನಗಣತಿ ವರದಿಗೂ ಸಂಬಂಧವಿಲ್ಲ. ಈಗಿನದಕ್ಕಿಂತಲೂ ಕಠಿಣ ಪರಿಸ್ಥಿತಿ ಹಿಂದೆ ಇದ್ದಾಗಲೂ ವರದಿ ತಂದಿರಲಿಲ್ಲ’ ಎಂದರು.

‘ಮುಡಾ ಪ್ರಕರಣವನ್ನು ಇ.ಡಿಗೆ ವಹಿಸಿದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡುವ ಪರಿಸ್ಥಿತಿ ಬರುವುದಿಲ್ಲ. ಮುಂದಿನ ನ್ಯಾಯಾಲಯಕ್ಕೆ ಅಪೀಲು ಹಾಕುತ್ತೇವೆ. ಇ.ಡಿ ಬೇಕೆಂದೇ ಹಿಂಸೆ ನೀಡುತ್ತಿದ್ದು, ಕಾನೂನು ಹೋರಾಟವನ್ನು ಮುಂದುವರಿಸುತ್ತೇವೆ. ಪ್ರಕರಣವನ್ನು ಸಿಬಿಐಗೇ ಕೊಡಲಿ. ತಪ್ಪೇ ಮಾಡಿಲ್ಲವಾದ್ದರಿಂದ ಹೆದರೋಲ್ಲ’ ಎಂದರು.

‘ಜಾತಿ ಜನಗಣತಿಯ ಮೂಲಪ್ರತಿ ಹಾಳಾಗಿದ್ದರೆ ಆಯೋಗದ ಅಂದಿನ ಮುಖ್ಯಸ್ಥರು ಸ್ಪಷ್ಟನೆ ಕೊಡುತ್ತಾರೆ. ದತ್ತಾಂಶ ಕಂಪ್ಯೂಟರ್‌ನಲ್ಲಿ ಶೇಖರಿಸಿಟ್ಟಿರಬಹುದು. ಮೂಲಪ್ರತಿ ಸಿದ್ದರಾಮಯ್ಯ ಮನೆಯಲ್ಲಿದೆ ಎಂಬ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರ ಆರೋಪದಲ್ಲಿ ಹುರುಳಿಲ್ಲ’ ಎಂದರು.

‘ಹಿಂದುಳಿದ ವರ್ಗದ ಸಿದ್ದರಾಮಯ್ಯ ಪ್ರಬಲ ವರ್ಗಗಳಿಗೆ ಅನ್ಯಾಯ ಮಾಡಿಬಿಡುತ್ತಾರೆಂಬುದು ಪೂರ್ವಗ್ರಹಪೀಡಿತ. ಗಣತಿಯಿಂದ ಯಾರಿಗೂ ಅನ್ಯಾಯವಾಗದು. ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಸಿಗುತ್ತದೆ’ ಎಂದರು.

ಅಶೋಕ ಸುಳ್ಳು ಹೇಳಬಾರದು: ಡಿ.ಕೆ.ಶಿವಕುಮಾರ್



ಶಿವಕುಮಾರ್

ಬೆಂಗಳೂರು: ‘ಜವಾಬ್ದಾರಿಯುತ ಸ್ಥಾನದಲ್ಲಿರುವ ಆರ್. ಅಶೋಕ ಅವರು ಸುಳ್ಳು ಹೇಳಬಾರದು. ಜಾತಿಗಣತಿ ವರದಿ ನಿಜವೇ ಸುಳ್ಳೇ, ನಕಲಿಯೇ ಎಂಬುದರ ಬಗ್ಗೆ ಆಯೋಗದ ಅಧ್ಯಕ್ಷರಾಗಿದ್ದ ಜಯಪ್ರಕಾಶ್ ಹೆಗ್ಡೆ ಅಥವಾ ಅಧಿಕಾರಿಯಾದ ದಯಾನಂದ್ ಅವರ ಬಳಿ ವಿಚಾರಿಸಿದರೆ, ಉತ್ತರ ಸಿಗಬಹುದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪ್ರತಿಕ್ರಿಯಿಸಿದರು.

‘ಜಾತಿಗಣತಿ ವರದಿಯನ್ನು ಸಿದ್ದರಾಮಯ್ಯ ಅವರು ಮನೆಯಲ್ಲಿ ಇಟ್ಟುಕೊಂಡಿದ್ದಾರೆ’ ಎನ್ನುವ ಆರ್. ಅಶೋಕ ಅವರ ಆರೋಪಕ್ಕೆ ಪ್ರತಿಕ್ರಿಯಿಸಿದ ಶಿವಕುಮಾರ್, ‘ಹಿಂದುಳಿದ ವರ್ಗಗಳ ಆಯೋಗ ಸ್ವಾಯತ್ತ ಸಂಸ್ಥೆ. ಸೀಲ್ ಮಾಡಿದ್ದ ವರದಿಯನ್ನು ಸಚಿವ ಸಂಪುಟದ ಮುಂದೆ ತಂದು ಅಲ್ಲಿಯೇ ತೆರೆದು ನೋಡಲಾಯಿತು. ಇದನ್ನು ವಿಡಿಯೊ ಚಿತ್ರೀಕರಣ ಕೂಡ ಮಾಡಲಾಗಿದೆ’ ಎಂದರು.

‘ಜಾತಿಗಣತಿ ಅನುಷ್ಠಾನಕ್ಕೆ ಇನ್ನೂ ಒಂದು ವರ್ಷವಾಗಲಿದೆ’ ಎಂಬ ಸತೀಶ ಜಾರಕಿಹೊಳಿ ಅವರ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದಾಗ, ‘ಇದು ಆಂತರಿಕವಾಗಿ ಸಚಿವ ಸಂಪುಟದಲ್ಲಿ ಚರ್ಚೆ ಮಾಡುವ ವಿಚಾರ. ಸಾರ್ವಜನಿಕವಾಗಿ ಚರ್ಚೆ ಮಾಡುವ ಸಂಗತಿ ಅಲ್ಲ’ ಎಂದು ಹೇಳಿದರು.

‘ಸಂಪುಟ ಸಭೆಯಲ್ಲಿ ಚರ್ಚೆ’

ಬೆಂಗಳೂರು: ‘ಹಿಂದುಳಿದ ವರ್ಗಗಳ ಆಯೋಗ 2015ರಲ್ಲಿ ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ ವರದಿಯ (ಜಾತಿ ಜನಗಣತಿ) ಮೂಲ ಪ್ರತಿ ನಾಪತ್ತೆಯಾಗಿದೆ ಎಂಬ ಬಿಜೆಪಿಯವರ ಆರೋಪಗಳ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚೆ ಮಾಡಲಾಗುವುದು’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಬಿಜೆಪಿಯವರು ಎಲ್ಲ ವಿಷಯಗಳಲ್ಲಿ ಆರೋಪಗಳನ್ನು ಮಾಡುತ್ತಾರೆ. ಅನವಶ್ಯಕ ಆರೋಪಗಳನ್ನು ಮಾಡುವುದರಿಂದ ಪ್ರಯೋಜನವಿಲ್ಲ. ಮೂಲ ಪ್ರತಿ ಇಲ್ಲದೇ ವರದಿ ಸಿದ್ಧಪಡಿಸಲು ಹೇಗೆ ಸಾಧ್ಯ? ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ಮಾಡುವಾಗ ವಿಪಕ್ಷದವರ ಆರೋಪಗಳ ಬಗ್ಗೆಯೂ ಗಮನಿಸುತ್ತೇವೆ’ ಎಂದರು.

‘ಹಿಂದುಳಿದ ಸಮುದಾಯಗಳಿಗೆ ನ್ಯಾಯ ಒದಗಿಸಬೇಕೆಂಬ ಉದ್ದೇಶದಿಂದ ಕೆಲವು ಸಮಿತಿಗಳು ಮಾದರಿ ದತ್ತಾಂಶ ಸಂಗ್ರಹಿಸಿ ವರದಿ ನೀಡಿವೆ. ಆದರೆ, ಇದೇ ಮೊದಲ ಬಾರಿಗೆ ಸಂಪೂರ್ಣ ದತ್ತಾಂಶ ಸಂಗ್ರಹಿಸಿ ಹಿಂದುಳಿದ ವರ್ಗಗಳ ಆಯೋಗ ವರದಿ ನೀಡಿದೆ. ಹೀಗಾಗಿ ಇದಕ್ಕೆ ಹೆಚ್ಚು ಮಹತ್ವವಿದೆ’ ಎಂದರು.

‘ಸಮುದಾಯಗಳು ಹಿಂದುಳಿದಿವೆಯೇ ಅಥವಾ ಮುಂದುವರಿದಿವೆಯೇ ಎಂಬುದನ್ನು ಅಧ್ಯಯನ ಮಾಡಿ ಹೇಳಬೇಕಾದರೆ, ಆ ಜಾತಿಯ ಜನಸಂಖ್ಯೆಯನ್ನು ನೋಡಬೇಕಾಗುತ್ತದೆ. ಆ ಆಧಾರದಲ್ಲಿ ವಿಶ್ಲೇಷಣೆಗಳಾಗುತ್ತಿವೆ. ಕೆಲವರು ಸರಿ ಇದೆ ಎನ್ನುತ್ತಾರೆ. ಇನ್ನು ಕೆಲವರು ಸರಿ ಇಲ್ಲ ಎನ್ನುತ್ತಾರೆ. ಚರ್ಚೆ, ವಿಶ್ಲೇಷಣೆ, ತಪ್ಪು- ಒಪ್ಪುಗಳನ್ನು ಅಧ್ಯಯನ ಮಾಡಿದ ನಂತರ ಸರ್ಕಾರ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದೆ’ ಎಂದರು.

‘ಬಿಜೆಪಿಯಿಂದ ಸಲ್ಲದ ಆರೋಪ’

ಬೆಂಗಳೂರು: ‘ನ್ಯಾಷನಲ್ ಹೆರಾಲ್ಡ್ ಪತ್ರಿಕೆ ಮೇಲೆ ಬಿಜೆಪಿ ಇಲ್ಲಸಲ್ಲದ ಆರೋಪಗಳನ್ನು ಮಾಡುತ್ತಿದೆ. ಈ ಪ್ರಕರಣದಲ್ಲಿ ಕೇಂದ್ರದ ನರೇಂದ್ರ ಮೋದಿ ಸರ್ಕಾರ ರಾಜಕೀಯ ಉದ್ದೇಶಕ್ಕೆ ಇ.ಡಿಯನ್ನು (ಜಾರಿ ನಿರ್ದೇಶನಾಲಯ) ಬಳಸಿಕೊಂಡಿದೆ’ ಎಂದು ಕೇಂದ್ರದ ಮಾಜಿ ಸಚಿವ, ಕಾಂಗ್ರೆಸ್ ನಾಯಕ ಪಲ್ಲಂರಾಜು ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇ.ಡಿ ದಾಳಿ ಮಾಡಿರುವ ಶೇ 98 ಪ್ರಕರಣಗಳಲ್ಲಿ ಶೇ 1ರಷ್ಟು ಆರೋಪಗಳು ಮಾತ್ರ ಸಾಬೀತಾಗಿವೆ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ, ಆಸ್ತಿ ಯಾವುದೂ ವರ್ಗಾವಣೆ ಆಗಿಲ್ಲ. ಆದರೂ ಇದು ಅಪರಾಧ ಹೇಗಾಗುತ್ತದೆ’ ಎಂದು ಪ್ರಶ್ನಿಸಿದರು.

‘ಬಿಜೆಪಿ ₹1.76 ಲಕ್ಷ ಕೋಟಿ ಮೊತ್ತದ ಸ್ಪೆಕ್ಟ್ರಂ ಹರಾಜು ಪ್ರಕ್ರಿಯೆಯನ್ನು ಹಗರಣ ಎಂದು ಬಿಂಬಿಸಿತು. ಅದೇ ಮಾದರಿಯಲ್ಲಿ ನ್ಯಾಷನಲ್ ಹೆರಾಲ್ಡ್ ಪ್ರಕರಣವನ್ನೂ ಬಿಂಬಿಸುತ್ತಿದೆ. ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಇದರ ಮುಖ್ಯ ಫಲಾನುಭವಿಗಳು ಎಂದೂ ಬಿಂಬಿಸಲಾಗುತ್ತಿದೆ. ಈಗ ಇಬ್ಬರ ಮೇಲೆ ಚಾರ್ಜ್‌ಶೀಟ್ ದಾಖಲಾಗಿದೆ. ಆದರೆ, ಇದರಲ್ಲಿ ಏನಿದೆ ಎಂದು ಯಾರಿಗೂ ತಿಳಿದಿಲ್ಲ. ಈ ರೀತಿಯ ಕಳ್ಳಾಟವನ್ನು ಬಿಜೆಪಿ ಆಡುತ್ತಿದೆ’ ಎಂದರು.

‘ಎಜೆಎಲ್ (ಅಸೋಸಿಯೇಟೆಡ್ ಜರ್ನಲ್ ಲಿಮಿಟೆಡ್) ಮತ್ತು ಯಂಗ್ ಇಂಡಿಯನ್ ಕಂಪನಿಯ ಎಲ್ಲ ವ್ಯವಹಾರಗಳು ಪಾರದರ್ಶಕವಾಗಿವೆ’ ಎಂದೂ ಹೇಳಿದರು.

‘ಸಿಂಪಿ ಸಮುದಾಯಕ್ಕೆ ಸೌಲಭ್ಯ ಕಲ್ಪಿಸಿ’

ಬೆಂಗಳೂರು: ‘ನಾಮದೇವ ಸಿಂಪಿ ಸಮುದಾಯ ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಅತ್ಯಂತ ಹಿಂದುಳಿದಿದೆ. ಸಮುದಾಯದ ಅಭಿವೃದ್ಧಿಗೆ ಪೂರಕವಾಗಿ ರಾಜ್ಯ ಸರ್ಕಾರವು ಸೌಲಭ್ಯ ಒದಗಿಸಬೇಕು’ ಎಂದು ಕರ್ನಾಟಕ ರಾಜ್ಯ ನಾಮದೇವ ಸಿಂಪಿ ಸಮಾಜದ ರಾಜ್ಯ ಘಟಕದ ಅಧ್ಯಕ್ಷ ನಾರಾಯಣರಾವ್ ವಿ. ಕೋಪರ್ಡೆ ಆಗ್ರಹಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ ನಮ್ಮ ಸಮುದಾಯ 8 ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಹೊಂದಿದೆ. ಆದರೆ ರಾಜಕೀಯವಾಗಿ ನಮಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಆದ್ದರಿಂದ, ನಾಮದೇವ ಸಿಂಪಿ ಸಮಾಜ ಅಭಿವೃದ್ಧಿ ಮಂಡಳಿ ರಚಿಸಿ, ₹50 ಕೋಟಿ ಅನುದಾನ ನೀಡಬೇಕು. ನಮ್ಮ ಸಮುದಾಯದ ಒಬ್ಬರನ್ನು ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಮಾಡಬೇಕು’ ಎಂದು ಆಗ್ರಹಿಸಿದರು.

‘ತಾಲ್ಲೂಕು ಮಟ್ಟದಲ್ಲಿ ಸಮುದಾಯ ಭವನ ಹಾಗೂ ವಿದ್ಯಾರ್ಥಿನಿಲಯಗಳನ್ನು ನಿರ್ಮಿಸಲು ಜಮೀನು ಮಂಜೂರು ಮಾಡಿ, ಅನುದಾನ ಒದಗಿಸಬೇಕು. ವೈದ್ಯಕೀಯ, ಎಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳ ಸ್ಥಾಪನೆಗೆ ನೆರವು ನೀಡಬೇಕು. ನೇಕಾರಿಕೆ ಮತ್ತು ಬಟ್ಟೆ ಹೊಲಿಯುವ ವೃತ್ತಿ ನಡೆಸುವವರಿಗೆ ತರಬೇತಿ ನೀಡಿ, ಉದ್ಯಮ ಸ್ಥಾಪಿಸಲು ಹಣಕಾಸಿನ ಸೌಲಭ್ಯ ಒದಗಿಸಬೇಕು’ ಎಂದು ಒತ್ತಾಯಿಸಿದರು.

‘ಕರ್ನಾಟಕ ನಾಮದೇವ ಸಿಂಪಿ ಸಮಾಜವು ಬೆಂಗಳೂರಿನ ವಿಲ್ಸನ್ ಗಾರ್ಡನ್‌ನ ಹೊಂಬೇಗೌಡ ನಗರದಲ್ಲಿ ನಿರ್ಮಿಸಿರುವ ಸಮುದಾಯ ಭವನ ಹಾಗೂ ವಿದ್ಯಾರ್ಥಿನಿಲಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಏಪ್ರಿಲ್ 25ರಂದು ಉದ್ಘಾಟಿಸಲಿದ್ದಾರೆ’ ಎಂದರು.



ಜಳಕದ ಪುಳಕ

ಬಿಸಿಲ ಝಳ ಏರುತ್ತಿರುವುದರಿಂದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಕಾವೇರಿ ನದಿಗೆ ನಿರ್ಮಿಸಿರುವ ‘ಎಡಮುರಿ’ ಕಿರು ಅಣೆಕಟ್ಟೆಯಲ್ಲಿ ಸೋಮವಾರ ಮಧ್ಯಾಹ್ನ ಪ್ರವಾಸಿಗರು ಜಳಕದ ಖುಷಿ ಅನುಭವಿಸಿ ಮೈಮನ ತಂಪಾಗಿಸಿಕೊಂಡರು

ಪ್ರಜಾವಾಣಿ ಚಿತ್ರ: ಅನೂಪ್ ರಾಘ.ಟಿ.

ಮಾಜಿ ಪ್ರೇಮಿಯ ಬ್ಲ್ಯಾಕ್‌ಮೇಲ್ ದೈಹಿಕ ಶಿಕ್ಷಣ ಶಿಕ್ಷಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮುರಿದುಬಿದ್ದಿದ್ದ ಪ್ರೀತಿ
- ಬೇರೆ ಯುವಕನೊಂದಿಗೆ ಮದುವೆ ನಿಶ್ಚಯ

ಗದಗ: ಮಾಜಿ ಪ್ರೇಮಿಯ ಬ್ಲ್ಯಾಕ್‌ಮೇಲ್‌ಗೆ ಹೆದರಿ, ಮದುವೆ ಸಂಭ್ರಮದಲ್ಲಿದ್ದ ತಾಲ್ಲೂಕಿನ ಅಸುಂಡಿ ಗ್ರಾಮದ ಯುವತಿ, ಶಿಕ್ಷಕಿ ಸೈರಾಬಾನು ನದಾಫ್ (29) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

‘ಖಾಸಗಿ ಶಾಲೆಯೊಂದರಲ್ಲಿ ದೈಹಿಕ ಶಿಕ್ಷಣ ಶಿಕ್ಷಕಿಯಾಗಿದ್ದ ಸೈರಾಬಾನು ಅವರ ಮದುವೆ ಮೇ 8ರಂದು ನಡೆಯಬೇಕಿತ್ತು. ವಾರದ ಹಿಂದಷ್ಟೇ ಮದುವೆ ಜವಳಿ, ಬಂಗಾರ ಖರೀದಿ ಮಾಡಿದ್ದರು. ಭಾನುವಾರ ಕುಟುಂಬದ ಸದಸ್ಯರೆಲ್ಲರೂ ಮದುವೆ ಇನ್ನಿತರ ವಸ್ತುಗಳ ಖರೀದಿಗೆ ಗದಗ ನಗರಕ್ಕೆ ಹೋದಾಗ, ಸೈರಾಬಾನು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಡೆತ್‌ನೋಟ್‌ನಲ್ಲಿ ಮೈಲಾರಿ ಎಂಬ ಯುವಕನ ವಿರುದ್ಧ ಅವರು ಬ್ಲ್ಯಾಕ್‌ಮೇಲ್ ಆರೋಪ ಮಾಡಿದ್ದು, ಯುವತಿಯ ತಂದೆ ಹುಚ್ಚುಸಾಬ ನದಾಫ್ ದೂರು ದಾಖಲಿಸಿದ್ದಾರೆ’ ಎಂದು ಗದಗ ಗ್ರಾಮೀಣ ಠಾಣೆ ಪೊಲೀಸರು ತಿಳಿಸಿದ್ದಾರೆ.

‘ಆತ್ಮಹತ್ಯೆ ಮಾಡಿಕೊಂಡ ಸೈರಾಬಾನು ಹಾಗೂ ಮೈಲಾರಿ ಪ್ರೀತಿಸುತ್ತಿದ್ದರು. ಐದು ವರ್ಷಗಳ ಹಿಂದೆಯೇ ಅವರಿಬ್ಬರ ಪ್ರೀತಿ ಮುರಿದುಬಿದ್ದಿತ್ತು. ಆದರೆ ಮೈಲಾರಿ, ತಿಂಗಳ ಹಿಂದಷ್ಟೆ ಇನ್‌ಸ್ಟಾಗ್ರಾಂ ಮೂಲಕ ಸೈರಾಬಾನು ಸಂಪರ್ಕಿಸಿ, ಭವಿಷ್ಯದಲ್ಲಿ ಯಾವುದೇ ರೀತಿಯ ತೊಂದರೆ ಕೊಡಲ್ಲ ಎಂದು ನಂಬಿಸಿ, ಆಕೆಯ ಜನ್ಮದಿನವನ್ನು ಆಚರಿಸಿದ್ದ. ಆದರೆ ಜನ್ಮದಿನಾಚರಣೆ ನಂತರ ವರಸೆ ಬದಲಿಸಿದ ಮಾಜಿ ಪ್ರೇಮಿ, ತನ್ನ ಬಳಿ ಇರುವ ಫೋಟೊ, ವಿಡಿಯೊ ವೈರಲ್ ಮಾಡುವುದಾಗಿ ಬೆದರಿಕೆ ಒಡ್ಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

‘ನನ್ನ ಮಗಳ ಸಾವಿಗೆ ಮೈಲಾರಿ ಕಾರಣ, ಮರ್ಯಾದೆಗೆ ಹೆದರಿ ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಯುವತಿಯ ತಂದೆ ದೂರಿನಲ್ಲಿ ತಿಳಿಸಿದ್ದಾರೆ.

ಪ್ರಾಣಿ ವಧೆ: ಸ್ಮಾರಕಕ್ಕೆ ಭದ್ರತೆ

ಪ್ರಜಾವಾಣಿ ವಾರ್ತೆ



ಗಂಗಾವತಿ ತಾಲ್ಲೂಕಿನ ಆನೆಗೊಂದಿಯಲ್ಲಿರುವ ಶ್ರೀಕೃಷ್ಣದೇವರಾಯ ಸಮಾಧಿ ಸ್ಮಾರಕಕ್ಕೆ ಪುರಾತತ್ವ ಇಲಾಖೆಯ ಅಧಿಕಾರಿಗಳು ಭೇಟಿ ನೀಡಿದರು

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಆನೆಗೊಂದಿಯಲ್ಲಿರುವ ವಿಜಯನಗರ ಸಾಮ್ರಾಜ್ಯದ ರಾಜ ಶ್ರೀಕೃಷ್ಣದೇವರಾಯನ ಸಮಾಧಿ ಸ್ಮಾರಕದ ಮೇಲೆ (64 ಕಂಬಗಳ ಮಂಟಪ) ಇತ್ತೀಚೆಗೆ ಪ್ರಾಣಿ ವಧೆ ಮಾಡಿದ್ದರಿಂದ ಅಲ್ಲಿನ ಸ್ಥಳ ಸ್ವಚ್ಛಗೊಳಿಸಲಾಗಿದ್ದು, ತಾತ್ಕಾಲಿಕವಾಗಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಹಾಗೂ ಪರಂಪರೆ ಇಲಾಖೆ ಸರ್ಕಾರಕ್ಕೆ ವರದಿ ನೀಡಿದೆ.

ಸ್ಮಾರಕದ ಮೇಲೆ ಪ್ರಾಣಿ ವಧೆ ಮಾಡಿದ ವಿಡಿಯೊ ಸಾಮಾಜಿಕ ತಾಣಗಳಲ್ಲಿ ಹರಿದಾಡಿತ್ತು. ಈ ಕುರಿತು ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಕೆ. ವೈಷ್ಣವಿ ಅವರು ಇಲಾಖೆಗೆ ವರದಿ ಕೇಳಿದ್ದರು.

ಇದಕ್ಕೆ ಉತ್ತರಿಸಿರುವ ಇಲಾಖೆಯ ಹಂಪಿಯ ವಿಭಾಗದ ಉಪ ನಿರ್ದೇಶಕ ಆರ್. ಶೇಜೇಶ್ವರ, ‘ಮಾಧ್ಯಮಗಳಲ್ಲಿ ಈ ಕುರಿತು ವರದಿಯಾದ ಬಳಿಕ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿದೆ. ಆನೆಗೊಂದಿ ಭಾಗದಲ್ಲಿ ಒಟ್ಟು 74 ರಾಜ್ಯ ಸಂರಕ್ಷಿತ ಸ್ಮಾರಕಗಳಿದ್ದು, ಅದರಲ್ಲಿ ಈ ಮಂಟಪವೂ ಒಂದಾಗಿದೆ. ಇದರ ಬಗ್ಗೆ ಸ್ಥಳೀಯ ಜನರಿಗೆ ತಿಳಿವಳಿಕೆ ನೀಡಿ ಮುಂದೆ ಈ ರೀತಿ ಮಾಡದಂತೆ ಸೂಚಿಸಲಾಗಿದೆ. ಹಂಪಿಯ ಸ್ಮಾರಕಗಳಿಗೆ ನಿಯೋಜಿಸಿದ್ದ ನೌಕರರನ್ನು ಕಳುಹಿಸಿ ಸ್ವಚ್ಛತೆ ಮಾಡಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ’ ಎಂದು ಹೇಳಿದ್ದಾರೆ.

‘ಈ ಮಂಟಪದಲ್ಲಿ 64 ಕಂಬಗಳು ವಾಸ್ತುಶಾಸ್ತ್ರದ ಕಲೆಗಳನ್ನು ಪ್ರತಿಬಿಂಬಿಸುತ್ತದೆ. ಕೃಷ್ಣದೇವರಾಯನು ಕಲೆ ಮತ್ತು ಸಾಹಿತ್ಯದ ಮಹಾನ್ ಪೋಷಕರಾಗಿದ್ದರಿಂದ ಆತನ ನೆನಪಿಗಾಗಿ ಮಂಟಪ ನಿರ್ಮಿಸಿರಬಹುದು’ ಎಂದು ತಿಳಿಸಿದ್ದಾರೆ.



ಬೇಡಿಕೆ ಈಡೇರಿಸಲು ಆಗ್ರಹಿಸಿ ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಸದಸ್ಯರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು

ವಸತಿ ಶಾಲೆಗೆ ಅಲೆಮಾರಿಗಳ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಅಲೆಮಾರಿ, ಅರೆ ಅಲೆಮಾರಿ ಮಕ್ಕಳಿಗೆ ವಸತಿ ಶಾಲೆಗಳನ್ನು ಆರಂಭಿಸುವುದೂ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ, ರಾಜ್ಯ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗಗಳ ಒಕ್ಕೂಟದ ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರದಿಂದ ಅನಿರ್ದಿಷ್ಟ ಅವಧಿ ಧರಣಿ ಆರಂಭಿಸಿದರು.

ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಎಂ. ಪ್ರಕಾಶ್ ಮಾತನಾಡಿ, ‘ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮದಲ್ಲಿ ಜಮೀನು ಖರೀದಿ, ಗಂಗಾ ಕಲ್ಯಾಣ ಹಾಗೂ ಧನಸಹಾಯ ಯೋಜನೆ ಜಾರಿಗೊಳಿಸಬೇಕು. ಅಲೆಮಾರಿ ಸಮುದಾಯದಲ್ಲಿ ಬರುವ 46 ಜಾತಿಗಳ ಕುಲಶಾಸ್ತ್ರೀಯ ಅಧ್ಯಯನವನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಎನ್‌ಇಇಟಿ ಮತ್ತು ಸಿಇಟಿ ಪರೀಕ್ಷೆಗೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ನೀಡುವ ಮಾನದಂಡವನ್ನು ನಮ್ಮ ವಿದ್ಯಾರ್ಥಿಗಳಿಗೂ ನೀಡಬೇಕು’ ಎಂದು ಆಗ್ರಹಿಸಿದರು.

‘ಸಮುದಾಯದ ವಿದ್ಯಾರ್ಥಿಗಳು ವಿದೇಶಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಶೈಕ್ಷಣಿಕ ಸಾಲ ನೀಡಬೇಕು. ಅಲೆಮಾರಿ, ಅರೆ ಅಲೆಮಾರಿ ಆಯೋಗವನ್ನು ರಚಿಸಬೇಕು’ ಎಂದು ಮನವಿ ಮಾಡಿದರು.

ಒಕ್ಕೂಟದ ಗೌರವಾಧ್ಯಕ್ಷ ಕೆ.ರವೀಂದ್ರ ಶೆಟ್ಟಿ ಮಾತನಾಡಿ, ಪ್ರತಿಷ್ಠಿತ ಖಾಸಗಿ ಕಾಲೇಜುಗಳಲ್ಲಿ ಅಲೆಮಾರಿ ವಿದ್ಯಾರ್ಥಿಗಳಿಗೆ ಯಾವುದೇ ತಾರತಮ್ಯ ಮಾಡದೆ ಉಚಿತವಾಗಿ ನೇರ ಪ್ರವೇಶಾತಿಗೆ ಅವಕಾಶ ಕಲ್ಪಿಸಬೇಕು. ಅಲೆಮಾರಿ, ಅರೆ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಅಧ್ಯಕ್ಷರನ್ನು ನೇಮಕಾತಿ ಮಾಡಿ ಹೆಚ್ಚಿನ ಅನುದಾನ ನೀಡಬೇಕು ಎಂದೂ ಅವರು ಒತ್ತಾಯಿಸಿದರು.

ಗೌರವ ಸಲಹೆಗಾರ ಬಿ.ಎನ್. ನಾರಾಯಣ ಸ್ವಾಮಿ, ಪದಾಧಿಕಾರಿಗಳಾದ ಗೋವಿಂದರಾಜು, ಹುಲ್ಲಪ್ಪ ಅಪ್ಪಣ್ಣ ಜಾಡರ್, ಶಿವಾಜಿ ಮಧುಕರ್ ಜೋಗಿ, ಮಹೇಶ್ ಭಾಗವಹಿಸಿದ್ದರು.

ಕೂರ್ಮ ರಾವ್‌ಗೆ ನಿಗಾ ಕೋಶದ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಅವಧಿಯ ಹಗರಣಗಳ ಆರೋಪ ಕುರಿತು ನಿವೃತ್ತ ನ್ಯಾಯಮೂರ್ತಿ ಮೈಕಲ್ ಡಿಕುನ್ಹ ಆಯೋಗ ಸಲ್ಲಿಸಿರುವ ವರದಿಗಳು ಮತ್ತು ಸಚಿವ ಸಂಪುಟ ಉಪ ಸಮಿತಿಯ ಶಿಫಾರಸುಗಳ ಅನುಷ್ಠಾನಕ್ಕೆ ರಾಜ್ಯ ಮಟ್ಟದಲ್ಲಿ ರಚಿಸಲಾಗಿರುವ ನಿಗಾ ಕೋಶದ ವಿಶೇಷ ಅಧಿಕಾರಿ ಹುದ್ದೆಯನ್ನು ಕೂರ್ಮ ರಾವ್ ಎಂ. ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

‘ಇಂಟೆಲ್’ನಲ್ಲಿ ಬೆಳಗಾವಿ ಪ್ರತಿಭೆ



ಸಚಿನ್ ಕತ್ತಿ

ಬೆಳಗಾವಿ: ‘ಇಂಟೆಲ್ ಕಾರ್ಪೊರೇಷನ್’ನ ಮುಖ್ಯ ತಾಂತ್ರಿಕ ಅಧಿಕಾರಿಯಾಗಿ ಹಾಗೂ ಕೃತಕ ಬುದ್ಧಿಮತ್ತೆ ವಿಭಾಗದ ಮುಖ್ಯಸ್ಥರಾಗಿ ಬೆಳಗಾವಿ ಮೂಲದ ಸಚಿನ್ ಕತ್ತಿ ನೇಮಕಗೊಂಡಿದ್ದಾರೆ.

ಸಚಿನ್ ಜಿಲ್ಲೆಯ ಹುಕ್ಕೇರಿ ತಾಲ್ಲೂಕಿನ ಬೆಲ್ಲದ ಬಾಗೇವಾಡಿ ಮೂಲದವರು. ಅವರ ತಂದೆ- ತಾಯಿ ವೈದ್ಯರಾಗಿದ್ದು, ಊರಿನಲ್ಲಿಯೇ ಸ್ವಂತ ಆಸ್ಪತ್ರೆ ನಡೆಸುತ್ತಿದ್ದಾರೆ. ಸಚಿನ್ ಪತ್ನಿ ಸೀಮಾ ಕೂಡ ಸಾಫ್ಟ್‌ವೇರ್ ಎಂಜಿನಿಯರ್. ಸಹೋದರ ಅಮಿತ್ ಹಾಗೂ ಅವರ ಪತ್ನಿ ಕೂಡ ವೈದ್ಯರಾಗಿದ್ದು, ಬೆಳಗಾವಿಯಲ್ಲಿ ವೃತ್ತಿ ಕೈಗೊಂಡಿದ್ದಾರೆ.

ಇಲ್ಲಿನ ಸೇಂಟ್ ಕ್ಸೇವಿಯರ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಧಾರವಾಡದ ಕೆ.ಇ. ಬೋರ್ಡ್ಸ್‌ನಲ್ಲಿ ಪ್ರೌಢಶಿಕ್ಷಣ, ಕರ್ನಾಟಕ ಕಾಲೇಜಿನಲ್ಲಿ ಬಿಎಸ್‌ಸಿ, ಮುಂಬೈನ ಐಐಟಿಯಲ್ಲಿ ಬಿ.ಟೆಕ್ ಪದವಿ ಪಡೆದಿದ್ದಾರೆ. 2003ರಿಂದ 2008ರವರೆಗೆ ಅಮೆರಿಕದ ಬಾಸ್ಟನ್‌ನ ಎಂಐಟಿ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಮತ್ತು ಕಂಪ್ಯೂಟರ್ ಸೈನ್ಸಸ್‌ನಲ್ಲಿ ಎಂ.ಎಸ್ ಮತ್ತು ಪಿಎಚ್.ಡಿ ಪಡೆದಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿಕೆ ● ತಾಳಿ, ಓಲೆ, ಜನಿವಾರ ಮುಟ್ಟಬಾರದು: ಡಿಕೆಶಿ

‘ಜನಿವಾರ ತೆಗೆಸಿದ್ದವರ ಮೇಲೆ ಕ್ರಮ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿದ್ಯಾರ್ಥಿಗಳು ಜನಿವಾರ ತೆಗೆಯದ್ದಕ್ಕೆ ಸಿಇಟಿ ಪರೀಕ್ಷೆ ಬರೆಯಲು ಅವಕಾಶ ನೀಡದ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ವಿಧಾನಸೌಧದ ಬಳಿ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಈ ಘಟನೆಗಳ ಬಗ್ಗೆ ಮಾಹಿತಿ ಪಡೆದುಕೊಂಡಿದ್ದೇನೆ. ವಿದ್ಯಾರ್ಥಿಗಳ ಜನಿವಾರ ತೆಗೆಸಿರುವ ಕ್ರಮ ನಿಯಮ ಬಾಹಿರವಾದುದ್ದು. ಪರೀಕ್ಷೆಯಲ್ಲಿ ಅಕ್ರಮ ನಡೆಸಬಹುದಾದ ಸಾಧ್ಯತೆಗಳನ್ನು ಪರಿಗಣಿಸಿ ಮಾತ್ರವೇ ಕ್ರಮ ಕೈಗೊಳ್ಳಬೇಕು, ವಿನಃ ಹೀಗೆ ಅನವಶ್ಯಕವಾಗಿ ಇತರರ ಧಾರ್ಮಿಕ ನಂಬಿಕೆಗಳಿಗೆ ವಿರುದ್ಧವಾದ ನಿಯಮ ಹೇರಿಕೆ ಮಾಡಬಾರದು. ಇಂಥದ್ದನ್ನು ನಾವು ಸಹಿಸುವುದಿಲ್ಲ’ ಎಂದರು.

‘ತಾಳಿ, ಓಲೆ, ಜನಿವಾರ ಮುಟ್ಟಬಾರದು’: ‘ಪರೀಕ್ಷೆಗೆ ಬಂದಿದ್ದ ವಿದ್ಯಾರ್ಥಿಯ ಜನಿವಾರ ತೆಗೆಸಿದ್ದು ತಪ್ಪು. ತಾಳಿ, ಓಲೆ, ಜನಿವಾರಗಳನ್ನು ಯಾರೂ ಮುಟ್ಟಬಾರದು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

‘ನಮ್ಮಲ್ಲಿ ಕೆಲವು ಮಂದಿ ಲಿಂಗ ಧರಿಸುತ್ತಾರೆ. ಒಂದಷ್ಟು ಮಂದಿ ಉಡುದಾರ ಕಟ್ಟುತ್ತಾರೆ. ಕೆಲವರು ಜನಿವಾರ ತೊಡುತ್ತಾರೆ. ಇವೆಲ್ಲಾ ಧಾರ್ಮಿಕ ನಂಬಿಕೆಯ ವಿಚಾರಗಳು. ಅವುಗಳನ್ನು ತೆಗೆಸುವ ವಿಚಾರ ಮಾಡಬಾರದು. ನಮ್ಮ ಸರ್ಕಾರ ಇಂಥದ್ದಕ್ಕೆ ಅವಕಾಶ ಕೊಡುವುದಿಲ್ಲ’ ಎಂದರು.

‘ಸ್ಪರ್ಧಾತ್ಮಕ ಪರೀಕ್ಷೆ ವೇಳೆ ಬ್ಲೂಟೂತ್ ಉಪಕರಣ ಸೇರಿ ಒಂದಷ್ಟು ಸಾಧನಗಳನ್ನು ಬಳಸಿಕೊಂಡು ನಕಲು ಮಾಡಿದ್ದ ಘಟನೆಗಳು ಈ ಹಿಂದೆ ನಡೆದಿತ್ತು. ಇದನ್ನು ತಪ್ಪಿಸಲು ಕ್ರಮ ತೆಗೆದುಕೊಳ್ಳಲಾಗಿತ್ತು. ಪೊಲೀಸ್ ಹುದ್ದೆಗಳಿಗೆ ನೇಮಕಾತಿ ನಡೆಸುವಾಗ ಇವುಗಳನ್ನು ತೆಗೆಸುವ ಪದ್ಧತಿ ಇದೆ. ಆದರೆ, ವಿದ್ಯಾರ್ಥಿಗಳು ಪರೀಕ್ಷೆ ಬರೆಯಲು ಬಂದಾಗ ಹೀಗೆ ಮಾಡುವುದು ಸರಿಯಲ್ಲ’ ಎಂದರು.



ಜನಿವಾರ ತೆಗೆಸಿದ್ದು ತಪ್ಪು. ಜನಿವಾರ ಇರಲಿ, ಹಿಜಾಬ್ ಇರಲಿ ನಮ್ಮ ನಿಲುವು ಒಂದೇ. ಜನಿವಾರ ತೆಗೆಸಿದವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಬಿಜೆಪಿ ರಾಜಕೀಯ ಮಾಡುವ ಅಗತ್ಯವಿಲ್ಲ
ಡಾ.ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ



ವಿದ್ಯಾರ್ಥಿಯ ಜನಿವಾರ ತೆಗೆಯಿಸಿದ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದೇವೆ. ಈ ಬಗ್ಗೆ ತನಿಖೆ ಮಾಡಿಸಿ ವರದಿ ಪಡೆದು ಕ್ರಮ ಕೈಗೊಳ್ಳುತ್ತೇವೆ
ಸಂತೋಷ್ ಲಾಡ್ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವ

ಸರ್ಕಾರ ಜನಿವಾರ ತೆಗೆಸಲು ಹೇಳಿತ್ತೇ: ಸುಧಾಕರ್ ಪ್ರಶ್ನೆ

ಚಿಕ್ಕಬಳ್ಳಾಪುರ: ಕೆ–ಸಿಇಟಿ ಬರೆಯುವ ವಿದ್ಯಾರ್ಥಿಗಳ ಜನಿವಾರ ತೆಗೆಯಿರಿ ಎಂದು ಸರ್ಕಾರ ಹೇಳಿತ್ತೇ ಎಂದು ಉನ್ನತ ಶಿಕ್ಷಣ ಸಚಿವ



ಡಾ.ಎಂ.ಸಿ. ಸುಧಾಕರ್ ಪ್ರಶ್ನಿಸಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಪರೀಕ್ಷೆಯ ವೇಳೆ ತಪಾಸಣೆ ಮಾಡುವ ವ್ಯಕ್ತಿಯ ಬೇಜವಾಬ್ದಾರಿಯಿಂದ ಈ ಅಚಾತುರ್ಯ ನಡೆದಿದೆ. ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಅಥವಾ ನನಗೆ ಈ ವಿಚಾರ ಯಾವ ರೀತಿ ಅನ್ವಯ ಆಗುತ್ತದೆ’ ಎಂದು ಕೇಳಿದರು.

ಜನಿವಾರವನ್ನು ಮುಂದಿಟ್ಟುಕೊಂಡು ಬಿಜೆಪಿಯವರು ಕೀಳುಮಟ್ಟದ ರಾಜಕೀಯ ಮಾಡುತ್ತಿದ್ದಾರೆ. ಬಿಜೆಪಿಯವರಿಗೆ ಜಾತಿ, ಧರ್ಮ ಬಿಟ್ಟರೆ ಬದುಕೇ ಇಲ್ಲ. ಬಿಜೆಪಿಯವರು ಇಂಥ ಚಿಲ್ಲರೆ ರಾಜಕೀಯ ಬಿಡಬೇಕು ಎಂದು ಕಿಡಿಕಾರಿದರು.

ತಪ್ಪು ಇಲ್ಲದಿದ್ದರೂ ಗಣಿತ ಪರೀಕ್ಷೆಯಿಂದ ವಿದ್ಯಾರ್ಥಿ ವಂಚಿತನಾಗಿದ್ದಾನೆ. ಭಾಲ್ಕಿಯ ತಮ್ಮ ಒಡೆತನದ ಭೀಮಣ್ಣ ಖಂಡ್ರೆ ತಾಂತ್ರಿಕ ವಿದ್ಯಾಲಯದಲ್ಲಿ ವಿದ್ಯಾರ್ಥಿಗೆ ಉಚಿತ ಸೀಟು ಕೊಡುವುದಾಗಿ ಸಚಿವ ಈಶ್ವರ್ ಖಂಡ್ರೆ ಹೇಳಿದ್ದಾರೆ. ಏನು ಮಾಡಬಹುದು ಎಂದು ಪರಿಶೀಲಿಸಿ ಸರ್ಕಾರ ಒಂದು ನಿರ್ಧಾರ ತೆಗೆದುಕೊಂಡು ಖಂಡಿತ ಪರಿಹಾರ ಕೊಡುತ್ತದೆ ಎಂದರು.

ಸುದ್ದಿ 2 ನಿಮಿಷ

‘ಕೇಂದ್ರವೇ ಗೊಂದಲ ನಿವಾರಿಸಲಿ’

ಬೆಂಗಳೂರು: ‘ಪ್ರವೇಶ ಪರಿಕ್ಷೆಗಳ ಸಂದರ್ಭದಲ್ಲಿ ಧಾರ್ಮಿಕ ಉಡುಗೆಗಳನ್ನೂ ತೆಗೆದು ತಪಾಸಣೆ ನಡೆಸಬೇಕು ಎಂದು ಕೇಂದ್ರ ಸರ್ಕಾರದ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯ (ಎನ್‌ಟಿಎ) ಮಾರ್ಗಸೂಚಿ ಹೇಳುತ್ತದೆ. ರಾಜ್ಯದ ಸಂಸ್ಥೆಗಳೂ ಎನ್‌ಟಿಎಯ ಮಾರ್ಗಸೂಚಿಯನ್ನೇ ಪಾಲಿಸುತ್ತವೆ. ಈ ಸಂಬಂಧ ಕೇಂದ್ರ ಸರ್ಕಾರವೇ ಗೊಂದಲ ನಿವಾರಿಸಬೇಕು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದ್ದಾರೆ.

ರಾಜ್ಯ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ಈ ಬಗ್ಗೆ ಪತ್ರ ಬರೆದಿರುವ ಅವರು, ‘ಸಿಇಟಿ ಪರೀಕ್ಷೆ ಬರೆಯಲು ಬಂದಿದ್ದ ವಿದ್ಯಾರ್ಥಿಯ ಜನಿವಾರ ತೆಗೆಸಿರುವ ಪ್ರಕರಣ ತೀವ್ರ ಆಘಾತಕಾರಿ. ಇದನ್ನು ಖಂಡಿಸುತ್ತೇನೆ’ ಎಂದಿದ್ದಾರೆ.

‘ಆದರೆ ಈ ವಿಚಾರದಲ್ಲಿ ಬಿಜೆಪಿ ನಾಯಕರು ಮತ್ತು ಶಾಸಕರು, ರಾಜ್ಯ ಸರ್ಕಾರವನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಹೊರಟಿರುವುದು ಕಳವಳಕಾರಿ. ಕೇಂದ್ರ ಸರ್ಕಾರದ ಪರೀಕ್ಷಾ ಸಂಸ್ಥೆಗಳು ರೂಪಿಸಿದ ಮಾರ್ಗಸೂಚಿ ಮತ್ತು ವಸ್ತ್ರ ಸಂಹಿತೆಯನ್ನು ಎಲ್ಲ ರಾಜ್ಯಗಳೂ ಪಾಲಿಸುತ್ತಿರುವಂತೆ ಕರ್ನಾಟಕದಲ್ಲೂ ಪಾಲಿಸಲಾಗಿದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

‘ಕೇಂದ್ರ ಸರ್ಕಾರ ರೂಪಿಸಿದ ನಿಯಮವನ್ನು ಪರೀಕ್ಷಾ ಕೇಂದ್ರದ ತಪಾಸಕರು ಪಾಲಿಸಿದ್ದಾರೆ. ಹೀಗಿರುವಾಗ ಕೇಂದ್ರದ ನಿಯಮ, ರಾಜ್ಯ ಸರ್ಕಾರ ಮತ್ತು ಪರೀಕ್ಷಾ ಕೇಂದ್ರದ ತಪಾಸಕರಿಗೆ ಯಾವ ರೀತಿಯ ಸಂಬಂಧ’ ಎಂದು ಅವರು ಪ್ರಶ್ನಿಸಿದ್ದಾರೆ.

‘ಎನ್‌ಟಿಎ ಮೂಲಕ ನಡೆಯುವ ನೀಟ್ ಪರೀಕ್ಷೆ ವೇಳೆ ಉದ್ದ ಅಂಗಿ, ಕೋಟ್, ಕೈದಾರ, ಜನಿವಾರ, ಬೂಟ್, ಓಲೆ, ಗೆಜ್ಜೆ, ಸರ, ಉಂಗುರ ಧರಿಸಿರುವುದು ನಿಷಿದ್ಧ. ತಪಾಸಣೆಯ ನಂತರವಷ್ಟೇ ಧಾರ್ಮಿಕ ಉಡುಗೆಗಳನ್ನು ತೊಡಲು ಅವಕಾಶವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ’ ಎಂದು ವಿವರಿಸಿದ್ದಾರೆ.

‘ಪರೀಕ್ಷಾ ಶುದ್ಧತೆ ಕಾಪಾಡುವ ಉದ್ದೇಶ ಒಳ್ಳೆಯದೆ. ಜತೆಗೆ ಧಾರ್ಮಿಕ ಸ್ವಾತಂತ್ರ್ಯಕ್ಕೂ ಚ್ಯುತಿ ಬರಬಾರದು. ಹೀಗಾಗಿ ಕೇಂದ್ರ ಸರ್ಕಾರದ ಸಂಸ್ಥೆಗಳ ಪರೀಕ್ಷಾ ಮಾರ್ಗಸೂಚಿಗಳಲ್ಲಿ ಕೆಲ ಬದಲಾವಣೆಗಳನ್ನು ತರಬೇಕಿದೆ. ಈ ಸಂಬಂಧ ನೀವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಿರಿ. ವಸ್ತ್ರ ಸಂಹಿತೆಯಲ್ಲಿ ಅಗತ್ಯ ಬದಲಾವಣೆ ಮಾಡುವಂತೆ ಕೋರಿ’ ಎಂದು ಹೇಳಿದ್ದಾರೆ.



ಮುದಗಲ್: ಬಸ್‌ನಲ್ಲೇ ಹೆರಿಗೆ

ಮುದಗಲ್ (ರಾಯಚೂರು ಜಿಲ್ಲೆ): ಯಾದಗಿರಿ ಜಿಲ್ಲೆಯ ಹುಣಸಗಿ ತಾಲ್ಲೂಕಿನ ಹೊಂಬಳಕಲ್ ಗ್ರಾಮದ ಶಾಂಭವಿ ರೇವಣಸಿದ್ದಪ್ಪ ಹಿರೇಕುರಬರ ಅವರಿಗೆ ಪಟ್ಟಣದ ಬಳಿ ಭಾನುವಾರ ರಾತ್ರಿ ಹುಬ್ಬಳ್ಳಿ–ಹಟ್ಟಿ ಮಾರ್ಗದ ಬಸ್‌ನಲ್ಲಿ ಹೆರಿಗೆಯಾಗಿದೆ.

ಶಾಂಭವಿ ಅವರು ಕಾರವಾರಕ್ಕೆ ಕೂಲಿ ಕೆಲಸಕ್ಕೆ ತೆರಳಿದ್ದರು. ಗರ್ಭಿಣಿಯಾಗಿದ್ದ ಅವರು ಗ್ರಾಮಕ್ಕೆ ಹಿಂದಿರುಗುತ್ತಿದ್ದರು. ಪಟ್ಟಣ ಸಮೀಪ ಹೆರಿಗೆ ನೋವು ಕಾಣಿಸಿಕೊಂಡಿದೆ. ಆಗ ಅದೇ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಆಶಾ ಕಾರ್ಯಕರ್ತೆ ಮೇರಿಯಮ್ಮ ನೆರವಾಗಿದ್ದಾರೆ. ಶಾಂಭವಿ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಾರೆ.

ಹೆರಿಗೆಯ ಬಳಿಕ ಬಸ್ ಚಾಲಕ ಸಿದ್ಧಲಿಂಗಪ್ಪ ಶಿರೂರು, ನಿರ್ವಾಹಕ ಬಸಯ್ಯ ಹಿರೇಮಠ ಅವರು ಶಾಂಭವಿ ಅವರನ್ನು ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿದ್ದಾರೆ. ಅವಧಿ ಪೂರ್ವದಲ್ಲಿಯೇ ಹೆರಿಗೆಯಾದ ಕಾರಣ ತಾಯಿ ಮತ್ತು ಮಗುವನ್ನು ಹೆಚ್ಚಿನ ಚಿಕಿತ್ಸೆಗಾಗಿ ಲಿಂಗಸುಗೂರು ಆಸ್ಪತ್ರೆಗೆ ದಾಖಲಿಸಲಾಗಿದೆ.

ಸಂಕ್ಷಿಪ್ತ ಸುದ್ದಿ


ಗ್ರಾ.ಪಂ ಉಪ ಚುನಾವಣೆ 15 ದಿನ ಮುಂದೂಡಿಕೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದಲ್ಲಿ ಏ.24ರಂದು ನಿಗದಿಯಾಗಿರುವ ಸಚಿವ ಸಂಪುಟ ಸಭೆಗೆ ಗ್ರಾಮ ಪಂಚಾಯಿತಿ ಉಪ ಚುನಾವಣೆಯ ನೀತಿಸಂಹಿತೆ ಅಡ್ಡಿಯಾಗಿದ್ದರಿಂದ ರಾಜ್ಯ ಚುನಾವಣಾ ಆಯೋಗವು ಚುನಾವಣೆಯನ್ನು 15 ದಿನ ಮುಂದೂಡಿದೆ.

ಕಾನೂನು ಸುವ್ಯವಸ್ಥೆ ಪರಿಪಾಲಿಸಲು ನೆರವಾಗುವಂತೆ ಚುನಾವಣೆಯನ್ನು ಮುಂದೂಡಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಜಿಲ್ಲಾಧಿಕಾರಿ ಸಲ್ಲಿಸಿದ್ದ ಮನವಿಯನ್ನು ಪರಿಗಣಿಸಿರುವ ಆಯೋಗ ಮೇ 11ರಂದು ನಿಗದಿಯಾಗಿದ್ದ ಚುನಾವಣೆ ದಿನಾಂಕವನ್ನು ಮುಂದೂಡಿ ಆದೇಶಿಸಿದೆ.

ಚಾಮರಾಜನಗರ ತಾಲ್ಲೂಕಿನ ಕೆಂಪನಪುರ ಗ್ರಾಮ ಪಂಚಾಯಿತಿಯ ಸಿಂಗನಪುರ ಕ್ಷೇತ್ರ, ಗುಂಡ್ಲುಪೇಟೆ ತಾಲ್ಲೂಕಿನ ಸೋಮಹಳ್ಳಿ ಪಂಚಾಯಿತಿಯ ಕೊಡಗಾಪುರ ಕ್ಷೇತ್ರ, ಯಳಂದೂರು ತಾಲ್ಲೂಕಿನ ಗೌಡಹಳ್ಳಿ ಪಂಚಾಯಿತಿಯ ಟಿ.ಹೊಸೂರು ಕ್ಷೇತ್ರ ಹಾಗೂ ಹನೂರು ತಾಲ್ಲೂಕಿನ ಪಿ.ಜಿ. ಪಾಳ್ಯ ಪಂಚಾಯಿತಿಯ ಅತ್ತಿಖಾನೆ ಮತ್ತು ಮಲೆ ಮಹದೇಶ್ವರ ಬೆಟ್ಟ ಗ್ರಾಮ ಪಂಚಾಯಿತಿಯ ಗೊರಸಾಣೆ ಕ್ಷೇತ್ರಗಳ ಉಪಚುನಾವಣೆ ಮಂದೂಡಲಾಗಿದೆ ಎಂದು ಆಯೋಗ ಸ್ಪಷ್ಟಪಡಿಸಿದೆ. ಒಟ್ಟು 222 ಗ್ರಾಮ ಪಂಚಾಯಿತಿಗಳ ಉಪಚುನಾವಣೆ ಮುಂದೂಡಲಾಗಿದೆ.

‘ತುಂಗಭದ್ರಾ ಅಣೆಕಟ್ಟೆ: ಇತರ 32 ಗೇಟ್ ನಿರ್ಮಾಣ ಈ ವರ್ಷ ಇಲ್ಲ’



ಹೊಸಪೇಟೆ (ವಿಜಯನಗರ): ‘ತುಂಗಭದ್ರಾ ಅಣೆಕಟ್ಟೆಯ 32 ಗೇಟ್‌ಗಳನ್ನು ಬದಲಿಸುವುದಕ್ಕೆ ಟೆಂಡರ್ ಕರೆಯಲಾಗಿದ್ದು, ಮುಂದಿನ ವರ್ಷದ ಜೂನ್ ಒಳಗೆ ಈ ಕಾಮಗಾರಿ ಕೊನೆಗೊಳ್ಳಲಿದೆ’ ಎಂದು ತುಂಗಭದ್ರಾ ಮಂಡಳಿಯ ಮೂಲಗಳು ತಿಳಿಸಿವೆ.

‘ಇದೀಗ ಕರೆಯಲಾಗಿರುವ ಟೆಂಡರ್ ಅನ್ನು ಏಪ್ರಿಲ್ 28ರಂದು ತೆರೆಯಲಾಗುತ್ತದೆ, ಮೇ 2ರೊಳಗೆ ಗುತ್ತಿಗೆ ಪಡೆಯುವ ಕಂಪನಿಗೆ ಕೆಲಸ ವಹಿಸಲಾಗುವುದು. ಗೇಟ್ ಬದಲಾವಣೆಗೆ ₹80 ಕೋಟಿಯಷ್ಟು ವೆಚ್ಚ ತಗಲುವ ನಿರೀಕ್ಷೆ ಇದೆ. ಜೂನ್ ವೇಳೆ ಮತ್ತೆ ಜಲಾಶಯದಲ್ಲಿ ನೀರು ಸಂಗ್ರಹ ಆರಂಭವಾಗುತ್ತದೆ. ಆ ವೇಳೆಗೆ 19ನೇ ಗೇಟ್ ಬದಲಿಸುವ ಕೆಲಸ ಆಗಲಿದೆ. ಉಳಿದ ಗೇಟ್‌ಗಳ ಬದಲಾವಣೆಗೆ 13 ತಿಂಗಳ ಕಾಲಾವಕಾಶವನ್ನು ಗುತ್ತಿಗೆ ಕಂಪನಿಗೆ ನೀಡುವ ಸಾಧ್ಯತೆ ಇದೆ’ ಎಂದು ಮಂಡಳಿಯ ಅಧಿಕಾರಿಯೊಬ್ಬರು ತಿಳಿಸಿದರು.

‘19ನೇ ಗೇಟ್ ಬದಲಿಸುವ ಗುತ್ತಿಗೆ ಪಡೆದಿರುವ ಅಹಮದಾಬಾದ್‌ನ ಹಾರ್ಡ್‌ವೇರ್ ಟೂಲ್ಸ್ ಆ್ಯಂಡ್ ಮಷಿನರಿ ಪ್ರೊಜೆಕ್ಟ್ ಕಂಪನಿ ಈ ವಾರವೇ ಕೆಲಸ ಆರಂಭಿಸಲಿದೆ. ತಾತ್ಕಾಲಿಕ ಸ್ಟಾಪ್‌ಲಾಗ್ ಗೇಟ್ ತೆಗೆದು, ಕಾಯಂ ಕ್ರಸ್ಟ್‌ಗೇಟ್ ಅಳವಡಿಸುವ ಹೊಣೆಗಾರಿಕೆ ಹೊತ್ತುಕೊಂಡಿರುವ ಕಂಪನಿ, ಮೇ ಅಂತ್ಯದೊಳಗೆ ಕಾಮಗಾರಿ ಕೊನೆಗೊಳಿಸುವ ವಿಶ್ವಾಸ ಇದೆ’ ಎಂದು ಅವರು ಹೇಳಿದರು.

ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಜಗದ್ಗುರು ರೇಣುಕಾದಿ ಪಂಚಾಚಾರ್ಯ ಫ್ರೀ ಬೋರ್ಡಿಂಗ್ ಟ್ರಸ್ಟ್, ಬೆಂಗಳೂರಿನ ಚಿಕ್ಕಪೇಟೆಯಲ್ಲಿ ನಡೆಸುತ್ತಿರುವ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನಿಸಿದೆ.

ಮಹಂತಿನ ಮಠದ ಗುರುಕುಲದಲ್ಲಿ ಜಗದ್ಗುರು ರೇಣುಕಾದಿ ಪಂಚಾಚಾರ್ಯ ವೇದಾಗಮ, ಸಂಸ್ಕೃತ, ಜ್ಯೋತಿಷ್ಯ ಮತ್ತು ಸಂಗೀತ ಪಾಠಶಾಲೆಯಲ್ಲಿ ಅಭ್ಯಾಸ ಮಾಡಲು ಬಯಸುವ ವೀರಶೈವ ಲಿಂಗಾಯತ ಸಮುದಾಯದ ವಿದ್ಯಾರ್ಥಿಗಳು ಮೇ 15ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ: 99809 71394, 94838 46735

ಕನ್ನಡ ಮಹಿಳಾ ಕಿರುಚಿತ್ರೋತ್ಸವ

ಬೆಂಗಳೂರು: ಗುಬ್ಬಿವಾಣಿ ಟ್ರಸ್ಟ್ ಆಯೋಜಿಸಿರುವ ‘ಅವಳ ಹೆಜ್ಜೆ ಕಿರುಚಿತ್ರೋತ್ಸವ–2025’ಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಇದೇ ಮೊದಲ ಬಾರಿಗೆ ಮಹಿಳೆಯರು ತಯಾರಿಸಿದ ಕಿರುಚಿತ್ರಗಳ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಅತ್ಯುತ್ತಮ ಕಿರುಚಿತ್ರಕ್ಕೆ ₹1 ಲಕ್ಷ ನಗದು ಬಹುಮಾನ ಪಡೆಯುವ ಅವಕಾಶವಿದೆ. ಜೊತೆಗೆ ಸಾಕ್ಷ್ಯಚಿತ್ರಗಳೂ ಸೇರಿದಂತೆ ಅನೇಕ ವಿಶೇಷ ವರ್ಗಗಳಲ್ಲಿ ಒಂದು ಚಿತ್ರಕ್ಕೆ ₹10 ಸಾವಿರ ನಗದು ಬಹುಮಾನ ಪಡೆಯುವ ಅವಕಾಶವಿದೆ. ಆಸಕ್ತ ಮಹಿಳೆಯರು ಏಪ್ರಿಲ್ 30ರೊಳಗೆ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗೆ www.avalahejje.net ವೆಬ್‌ಸೈಟ್‌ಗೆ ಭೇಟಿ ನೀಡಬಹುದು. 88677 47236 ಸಂಪರ್ಕಿಸಬಹುದು ಎಂದು ‘ಅವಳ ಹೆಜ್ಜೆ’ ಸಂಸ್ಥಾಪಕಿ ಶಾಂತಲಾ ದಾಮ್ಲೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ/ಹುಬ್ಬಳ್ಳಿ: ‘ಸಿಇಟಿ ಬರೆಯಲು ಹೋದ ವಿದ್ಯಾರ್ಥಿಗಳ ಜನಿವಾರ ಕತ್ತರಿಸಿದರೆ ಸುಮ್ಮನೇ ಇರಬೇಕೆ? ಜನಿವಾರ ಕತ್ತರಿಸಿದವರ ಕೈ ಕತ್ತರಿಸಿದರೆ ಸರ್ಕಾರ ಸುಮ್ಮನೆ ಇರುತ್ತದೆಯೇ?’ ಎಂದು ಶಾಸಕ ಅಭಯ ಪಾಟೀಲ ಕಿಡಿಕಾರಿದರು.

ಜನಿವಾರ ಕತ್ತರಿಸಿದ ಘಟನೆ ಖಂಡಿಸಿ ಬ್ರಾಹ್ಮಣ ಸಮಾಜದಿಂದ ನಗರದಲ್ಲಿ ಸೋಮವಾರ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ‘ಹಿಜಾಬ್ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ಬಹಳ ಕಾಳಜಿ ತೋರಿಸಿದೆ. ಆದರೆ, ಜನಿವಾರದ ವಿಚಾರದಲ್ಲಿ ಏಕೆ ಮೌನವಾಗಿದೆ? ಈ ಧೋರಣೆ ನೋಡಿದರೆ ಕೃತ್ಯದ ಹಿಂದೆ ಸರ್ಕಾರದ ಕೈವಾಡ ಇದೆ ಎಂಬ ಅನುಮಾನ ವ್ಯಕ್ತವಾಗುತ್ತಿದೆ’ ಎಂದು ಆರೋಪಿಸಿದರು.

ಸಮಾಜದ ಮುಖಂಡ ಅನಿಲ ಪೋತದಾರ ಮಾತನಾಡಿ, ‘ಇಂಥ ಘಟನೆ ಮರುಕಳಿಸಿದರೆ ಬ್ರಾಹ್ಮಣರು ಪರಶುರಾಮನ ಅವತಾರ ತಾಳಬೇಕಾಗುತ್ತದೆ. ಜನಿವಾರಕ್ಕೆ ಕೈ ಹಾಕಿದರೆ ತಲವಾರ ಹಿಡಿಯಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ಇದಕ್ಕೂ ಮುನ್ನ ರಾಣಿ ಚನ್ನಮ್ಮ ವೃತ್ತದಲ್ಲಿ ಒಂದು ತಾಸು ಮಾನವ ಸರಪಳಿ ನಿರ್ಮಿಸಿದರು. ಜಿಲ್ಲಾಧಿಕಾರಿ ಕಚೇರಿ ಮುಂದೆ ಜನಿವಾರ ಕೈಯಲ್ಲಿ ಹಿಡಿದುಕೊಂಡು ಧರಣಿ ಮಾಡಿದರು. ಕೃಷ್ಣ ಮಠದ ಆಚಾರ್ಯ ಶ್ರೀನಿವಾಸ ಹೊನ್ನಿದಿಬ್ಬ, ಸಮೀರ್ ಆಚಾರ್ಯ, ಗುರುರಾಜ್ ಆಚಾರ್ಯ, ಜಿಲ್ಲಾ ಬ್ರಾಹ್ಮಣ ಸಮಾಜ ಟ್ರಸ್ಟ್ ಉಪಾಧ್ಯಕ್ಷ ಭರತ ದೇಶಪಾಂಡೆ, ಆರ್.ಎಸ್ ಮುತಾಲಿಕ ದೇಸಾಯಿ, ಎಕೆಬಿಎಂಎಸ್‌ನ ಜಿಲ್ಲಾ ಪ್ರತಿನಿಧಿ ಅಕ್ಷಯ ಕುಲಕರ್ಣಿ, ಅಶೋಕ್ ದೇಶಪಾಂಡೆ, ಅನುಶ್ರೀ ದೇಶಪಾಂಡೆ ನೇತೃತ್ವ ವಹಿಸಿದ್ದರು.

ವಿದ್ಯಾರ್ಥಿಗಳ ಜನಿವಾರ ಹಾಗೂ ಕೈ ದಾರವನ್ನು ಬಲವಂತವಾಗಿ ತೆಗೆಸಿದ ಸಿಇಟಿ ಕೇಂದ್ರದ ಅಧಿಕಾರಿಗಳ ಕ್ರಮವನ್ನು ಖಂಡಿಸ ಎಬಿವಿಪಿ ಕಾರ್ಯಕರ್ತರು ಹುಬ್ಬಳ್ಳಿಯಲ್ಲಿ ಕೆಎಲ್‌ಇ ಭೂಮರೆಡ್ಡಿ ಎಂಜಿನಿಯರಿಂಗ್ ಕಾಲೇಜು ಎದುರು ಮಾನವ ಸರಪಳಿ ನಿರ್ಮಿಸಿ ರಸ್ತೆ ತಡೆ ನಡೆಸಿ ಪ್ರತಿಭಟಿಸಿದರು. ಧಾರವಾಡದಲ್ಲಿ ಬ್ರಾಹ್ಮಣ ಸಮಾಜ, ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗದಳದ ಕಾರ್ಯಕರ್ತರು ಧಾರವಾಡದ ಕೋರ್ಟ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು.



ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳ ಜನಿವಾರ ಹಾಗೂ ಕೈ ದಾರವನ್ನು ಬಲವಂತವಾಗಿ ತೆಗಿಸಿದ ಸಿಇಟಿ ಕೇಂದ್ರದ ಅಧಿಕಾರಿಗಳ ಕ್ರಮವನ್ನು ಖಂಡಿಸಿ ಎಬಿವಿಪಿ ಕಾರ್ಯಕರ್ತರು ಹುಬ್ಬಳ್ಳಿಯ ಬಿವಿಬಿ ಎಂಜಿನಿಯರಿಂಗ್ ಕಾಲೇಜು ಎದುರು ಮಾನವ ಸರಪಳಿ ನಿರ್ಮಿಸಿ ಸೋಮವಾರ ಪ್ರತಿಭಟಿಸಿದರು ಪ್ರಜಾವಾಣಿ ಚಿತ್ರ



ಹಿಜಾಬ್ ವಿವಾದವೇ ಬೇರೆ ಜನಿವಾರ ವಿಷಯವೇ ಬೇರೆ. ಹೋಲಿಕೆ ಮಾಡಲು ಆಗುವುದಿಲ್ಲ. ತಪ್ಪಿತಸ್ಥರ ಮೇಲೆ ಕ್ರಮ ಆಗಲಿ. ಆದರೆ, ಘಟನೆಗೂ ಸರ್ಕಾರಕ್ಕೂ ಏನೂ ಸಂಬಂಧವಿಲ್ಲ
ಸತೀಶ ಜಾರಕಿಹೊಳಿ, ಸಚಿವ

‘ಜನಿವಾರ ತೆಗೆಸಿದರೆ ವಿವಾದ; ತಾಳಿ ತೆಗೆಸಿದರೆ ಲೆಕ್ಕಕ್ಕಿಲ್ಲ’

ಚಿಕ್ಕಮಗಳೂರು: ‘ಸಿಇಟಿ ಪರೀಕ್ಷಾ ಕೊಠಡಿಗೆ ಹೋಗುವ ಮುನ್ನ ಅಭ್ಯರ್ಥಿಗಳ ಜನಿವಾರ ತೆಗೆಸಿದರೆ ದೊಡ್ಡ ವಿವಾದವಾಗುತ್ತದೆ. ಹೆಣ್ಣು ಮಗಳ ಕೊರಳಿಂದ ತಾಳಿ ತೆಗೆಸಿದಾಗ ಸುದ್ದಿಯೇ ಆಗುವುದಿಲ್ಲ’ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದರು.



ಕೆ.ಎನ್.ರಾಜಣ್ಣ

‘ಜನಿವಾರ ತೆಗೆಸಿದ್ದನ್ನು ನಾನು ಒಪ್ಪುವುದಿಲ್ಲ, ಖಂಡಿಸುತ್ತೇನೆ’ ಎಂದು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ತಾಳಿ ತೆಗೆಸಿದ್ದು ಮಾಧ್ಯಮಗಳಿಗೆ ಲೆಕ್ಕಕ್ಕೇ ಇಲ್ಲ. ಏಕೆಂದರೆ ಆಕೆ ಶೂದ್ರ ಹೆಣ್ಣು ಮಗಳು. ಅವರ ತಾಳಿ ಬೇಕಿದ್ದರೆ ತೆಗೆಸಬಹುದು, ಜನಿವಾರ ತೆಗೆಸಿದ್ದೇ ದೊಡ್ಡ ವಿಷಯವಾಗಿದೆ’ ಎಂದರು.

ತಟ್ಟಿದ ‘ಬಿಸಿ’ಲು: ಕಸಾಪ ಸಭೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳ್ಳಾರಿಯ ಬಿಸಿಲು ಮತ್ತು ವಿರೋಧದ ಬಿಸಿ ತಟ್ಟಿರುವುದರಿಂದ ಏಪ್ರಿಲ್ 27ರಂದು ನಂದಿಹಳ್ಳಿಯಲ್ಲಿ ನಡೆಸಲು ಉದ್ದೇಶಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಸಾಮಾನ್ಯ ಸರ್ವಸದಸ್ಯರ ಸಭೆ ಮತ್ತು ವಿಶೇಷ ಸರ್ವಸದಸ್ಯರ ಸಭೆಯನ್ನು ಕಸಾಪ ಮುಂದೂಡಿದೆ.

ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ನಂದಿಹಳ್ಳಿ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸರ್ವ ಸದಸ್ಯರ ಸಭೆ ನಡೆಸಲು ಕನ್ನಡ ಸಾಹಿತ್ಯ ಪರಿಷತ್ತು ನಿರ್ಧರಿಸಿತ್ತು. ಬೈಲಾ ತಿದ್ದುಪಡಿ ಮಾಡಲು ತಮಗೆ ಬೇಕಾದವರನ್ನು ಮಾತ್ರ ಸಭೆಗೆ ಕರೆಯಲಾಗಿದೆ ಎಂದು ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ವಿರುದ್ಧ ಅನೇಕರು ಆರೋಪ ಮಾಡಿದ್ದರು. ಸಭೆ ರದ್ದು ಮಾಡುವಂತೆ ಆಗ್ರಹಿಸಿದ್ದರು.

‘ಹವಾಮಾನ ವೈಪರೀತ್ಯ ಮತ್ತು ಬಿಸಿಲಿನಿಂದ ತಾಪಮಾನ ಏರಿಕೆಯಾಗಿರುವುದರಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಬಳ್ಳಾರಿ ಜಿಲ್ಲಾ ಘಟಕದ ಅಧ್ಯಕ್ಷ ನಿಷ್ಠಿ ರುದ್ರಪ್ಪ ಅವರು ಸಭೆ ಮುಂದೂಡುವಂತೆ ಕೋರಿದ್ದರು. ಬಳ್ಳಾರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ರಮೇಶ್ ಬಾಬು ಅವರಲ್ಲಿ ಸಲಹೆ ಕೇಳಿದಾಗ ಅವರೂ ಅದೇ ಅಭಿಪ್ರಾಯ ವ್ಯಕ್ತಪಡಿಸಿರುವುದರಿಂದ ಸರ್ವ ಸದಸ್ಯರ ಸಭೆಯನ್ನು ಜೂನ್ 22ಕ್ಕೆ ಮುಂದೂಡಲಾಗಿದೆ. ಸಂಡೂರಿನಲ್ಲಿ ಸಭೆ ನಡೆಯಲಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಮಾಧ್ಯಮ ವಿಭಾಗದ ಸಂಚಾಲಕ ಎನ್.ಎಸ್. ಶ್ರೀಧರಮೂರ್ತಿ ತಿಳಿಸಿದ್ದಾರೆ.

ವಿ.ವಿಗೆ ಪತ್ರ: ‘ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ಅವರು ಎಲ್ಲರಿಗೂ ಮಾಹಿತಿ ನೀಡದೇ ತಮಗೆ ಬೇಕಾದವರನ್ನಷ್ಟೇ ಕರೆದು ಏಪ್ರಿಲ್ 27ರಂದು ನಂದಿಹಳ್ಳಿಯ ಸ್ನಾತಕೋತ್ತರ ಕೇಂದ್ರದ ಸಭಾಂಗಣದಲ್ಲಿ ‘ಸರ್ವ ಸದಸ್ಯರ ಸಭೆ’ ನಡೆಸಲು ನಿರ್ಧರಿಸಿದ್ದಾರೆ. ಸಭಾಂಗಣ ಬಳಕೆಗೆ ನೀಡಿರುವ ಒಪ್ಪಿಗೆಯನ್ನು ವಾಪಸ್ ಪಡೆಯಬೇಕು’ ಎಂದು ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯದ ಕುಲಪತಿಗೆ ಪರಿಷತ್ತಿನ ಕೆಲ ಆಜೀವ ಸದಸ್ಯರು ಪತ್ರ ಬರೆದಿದ್ದರು.

‘ಜೋಶಿಯವರಿಗೆ ಬೇಕಾದಂತೆ ಬೈಲಾ ತಿದ್ದುಪಡಿಗೆ ಅನುಮತಿ ಪಡೆದು ಸರ್ವಾಧಿಕಾರಿಯಾಗಲು ಅವರು ಹೊರಟಿದ್ದಾರೆ. ಪರಿಷತ್ತಿನ ಮೂಲ ಆಶಯಕ್ಕೆ ಧಕ್ಕೆ ತರುವ ದುರುಳ ಪ್ರಯತ್ನ ಇದು’ ಎಂದು ಜಾಣಗೆರೆ ವೆಂಕಟರಾಮಯ್ಯ, ಜಯಪ್ರಕಾಶ ಗೌಡ, ಶ್ರೀನಿವಾಸ ಜಿ. ಕಪ್ಪಣ್ಣ ಸೇರಿ ಹಲವು ಪತ್ರದಲ್ಲಿ ಆರೋಪಿಸಿದ್ದರು.



ಅಗ್ನಿ ಆಟ... ದಕ್ಷಿಣ ಕನ್ನಡ ಜಿಲ್ಲೆಯ ಕಟೀಲು ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ನಸುಕಿನ ಜಾವ ಅತ್ತೂರು ಹಾಗೂ ಕೊಡತ್ತೂರು ಗ್ರಾಮಗಳ ವ್ರತಾಧಾರಿಗಳು ತೂಟೆದಾರ ಸೇವೆ (ಅಗ್ನಿಕೇಳಿ) ಸಲ್ಲಿಸಿದರು ಚಿತ್ರ: ಫಕ್ರುದ್ದೀನ್ ಎಚ್.

ಗ್ರಾಮೀಣ ಗ್ರಂಥಪಾಲಕರ ಮುಷ್ಕರ 28ರಿಂದ

ಶಿವಮೊಗ್ಗ: ‘ಗ್ರಾಮೀಣ ಗ್ರಂಥಪಾಲಕರನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಕಾಯಂ ನೌಕರರು’ ಎಂದು ಆದೇಶ ಹೊರಡಿಸಿ ನಿಯಮಾವಳಿ ರೂಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಏಪ್ರಿಲ್ 28ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳಲಾಗಿದೆ ಎಂದು ರಾಜ್ಯ ಗ್ರಾಮೀಣ ಗ್ರಂಥಾಲಯಗಳ ನೌಕರರ ಸಂಘದ ಅಧ್ಯಕ್ಷ ಕೆ.ವಿ. ಸತ್ಯನಾರಾಯಣ ತಿಳಿಸಿದ್ದಾರೆ.

ವೇತನವನ್ನು ಪ್ರತಿ ತಿಂಗಳ 5ರ ಒಳಗೆ ಜಮಾ ಮಾಡಬೇಕು. ಗ್ರ್ಯಾಚ್ಯುಟಿ ಮತ್ತು ಪಿಂಚಣಿ ಸೌಲಭ್ಯ ಒದಗಿಸಬೇಕು ಎಂಬ ಬೇಡಿಕೆಗಳನ್ನು ಸರ್ಕಾರದ ಮುಂದೆ ಇಡಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಾಜಿ ಸಿ.ಎಂ ವಿರುದ್ಧ ಡಿನೋಟಿಫಿಕೇಷನ್ ಆರೋಪ

ವಿಸ್ತೃತ ಪೀಠಕ್ಕೆ ಬಿಎಸ್‌ವೈ ಪ್ರಕರಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ವಿರುದ್ಧದ ಡಿನೋಟಿಫಿಕೇಷನ್ ಪ್ರಕರಣದಲ್ಲಿ ತೀರ್ಪು ಪ್ರಕಟಿಸುವುದರಿಂದ ಸುಪ್ರೀಂ ಕೋರ್ಟ್‌ನ ದ್ವಿಸದಸ್ಯ ಪೀಠವು ಸೋಮವಾರ ಹಿಂದೆ ಸರಿದಿದೆ.

2018ರ ಜುಲೈನಲ್ಲಿ ಭ್ರಷ್ಟಾಚಾರ ನಿಗ್ರಹ ಕಾಯ್ದೆಗೆ ತಿದ್ದುಪಡಿ ತಂದು ಸೆಕ್ಷನ್ 17ಎ ಸೇರಿಸಲಾಗಿದೆ. ಸಾರ್ವಜನಿಕ ಸೇವಕನ ವಿರುದ್ಧ ಈ ಕಾಯ್ದೆಯ ಅಡಿಯಲ್ಲಿ ವಿಚಾರಣೆ, ತನಿಖೆ ಆರಂಭಿಸಲು ಪೊಲೀಸ್ ಅಧಿಕಾರಿಯು ಸಕ್ಷಮ ಪ್ರಾಧಿಕಾರದಿಂದ ಒಪ್ಪಿಗೆ ಪಡೆಯುವುದು ಕಡ್ಡಾಯ ಎಂದು ಈ ಸೆಕ್ಷನ್ ಹೇಳುತ್ತದೆ.

‘ಪೂರ್ವಾನುಮತಿಗೆ ಸಂಬಂಧಿಸಿದ ಎರಡು ಪ್ರಕರಣಗಳು ವಿಸ್ತೃತ ಪೀಠದಲ್ಲಿ ವಿಚಾರಣೆಗೆ ಬಾಕಿ ಇವೆ. ನ್ಯಾಯಾಂಗ ಶಿಸ್ತು ಮತ್ತು ಔಚಿತ್ಯ ಕಾಪಾಡಿಕೊಳ್ಳುವ ಸಲುವಾಗಿ, ಸೂಕ್ತ ಆದೇಶಗಳಿಗಾಗಿ ಯಡಿಯೂರಪ್ಪ ಪ್ರಕರಣವನ್ನು ಭಾರತದ ಮುಖ್ಯ ನ್ಯಾಯಮೂರ್ತಿಗಳ ಮುಂದೆ ಇಡಬೇಕು’ ಎಂದು



ಯಡಿಯೂರಪ್ಪ

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಪೀಠವು ನಿರ್ದೇಶನ ನೀಡಿತು.

ದ್ವಿಸದಸ್ಯ ಪೀಠವು ಏಪ್ರಿಲ್ 4ರಂದು ಬಿಎಸ್‌ವೈ ಪ್ರಕರಣದ ವಿಚಾರಣೆ ಪೂರ್ಣಗೊಳಿಸಿತ್ತು. ಸಿಆರ್‌ಪಿಸಿ ಸೆಕ್ಷನ್ 156 (3) ಅಡಿಯಲ್ಲಿ ಪ್ರಕರಣದ ತನಿಖೆ ನಡೆದಿದೆಯೇ ಮತ್ತು ಈಗಲೂ ಕೂಡ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಸೆಕ್ಷನ್ 17 ಎ ಅನುಸಾರ ಸೂಕ್ತ ಸರ್ಕಾರಿ ಪ್ರಾಧಿಕಾರಗಳಿಂದ ಪೂರ್ವಾನುಮತಿಯ ಅಗತ್ಯವಿದೆಯೇ ಎಂಬುದು ಸೇರಿದಂತೆ ಹಲವು ಕಾನೂನಾತ್ಮಕ ಪ್ರಶ್ನೆಗಳನ್ನು ನ್ಯಾಯಪೀಠ ಕೇಳಿತ್ತು.

‘ನಾವು ಈ ತೀರ್ಪಿನ ಬಗ್ಗೆ ಕೆಲಸ ಪ್ರಾರಂಭಿಸುವ ಹಂತದಲ್ಲಿದ್ದಾಗ, ಶೆಮಿನ್ ಖಾನ್ ವರ್ಸಸ್ ದೇಬಾಶಿಶ್ ಚಕ್ರವರ್ತಿ ಮತ್ತು ಇತರರು ಪ್ರಕರಣದಲ್ಲಿ 2024ರ ಏಪ್ರಿಲ್ 16ರಂದು ನ್ಯಾಯಪೀಠವು ಹೊರಡಿಸಿದ್ದ ಮತ್ತೊಂದು ಆದೇಶವು ಗಮನಕ್ಕೆ ಬಂತು. ಆ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿತ್ತು. ಮಂಜು ಸುರಾನ ವರ್ಸಸ್ ಸುನೀಲ್ ಅರೋರಾ ಪ್ರಕರಣವನ್ನು 2018ರಲ್ಲೇ ವಿಸ್ತೃತ ಪೀಠಕ್ಕೆ ವರ್ಗಾಯಿಸಲಾಗಿತ್ತು. ಹೀಗಾಗಿ, ಈ ಪ್ರಕರಣವನ್ನು ವಿಸ್ತೃತ ಪೀಠಕ್ಕೆ ಶಿಫಾರಸು ಮಾಡುವುದು ಸೂಕ್ತ ಎಂದು ಭಾವಿಸಿದ್ದೇವೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.

ಯಡಿಯೂರಪ್ಪ ಪರ ವಾದ ಮಂಡಿಸಿದ್ದ ಹಿರಿಯ ವಕೀಲ ಸಿದ್ಧಾರ್ಥ್ ಲೂತ್ರಾ, ‘ಯಡಿಯೂರಪ್ಪ ವಿರುದ್ಧ ಈ ಹಿಂದೆ ಎರಡು ದೂರುಗಳಲ್ಲಿ ಉಲ್ಲೇಖಿಸಲಾದ ಸಂಗತಿಗಳು ಮತ್ತು ಸಾಕ್ಷ್ಯಗಳು ಹೆಚ್ಚಾಗಿ ಒಂದೇ ಆಗಿವೆ. ಕರ್ನಾಟಕ ಹೈಕೋರ್ಟ್ 2015ರ ಸಂಬಂಧಿತ ಪ್ರಕರಣವನ್ನು ಅದರ ಅರ್ಹತೆ ಪರಿಶೀಲಿಸದೆ ತಾಂತ್ರಿಕ ಆಧಾರದ ಮೇಲೆ ಪರಿಗಣಿಸಿ ತಪ್ಪು ಮಾಡಿದೆ’ ಎಂದು ವಾದಿಸಿದ್ದರು.

ಕರ್ನಾಟಕ ಸರ್ಕಾರದ ಪರವಾಗಿ ಹಿರಿಯ ವಕೀಲರಾದ ವಿಕಾಸ್ ಸಿಂಗ್, ಆರ್.ಬಸಂತ್, ಹೆಚ್ಚುವರಿ ಅಡ್ವೋಕೇಟ್ ಜನರಲ್ ಅಮನ್ ಪನ್ವಾರ್, ವಕೀಲ ಡಿ.ಎಲ್.ಚಿದಾನಂದ ವಾದ ಮಂಡಿಸಿದ್ದರು.

ನಾಯ್ಡು ಪ್ರಕರಣದಲ್ಲಿ ಭಿನ್ನ ತೀರ್ಪು ನೀಡಿದ್ದ ‘ಸುಪ್ರೀಂ’

ಕೌಶಲ ಅಭಿವೃದ್ಧಿ ನಿಗಮದ ಹಗರಣದಲ್ಲಿ ತಮ್ಮ ವಿರುದ್ಧ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿದ್ದ ಹೈಕೋರ್ಟ್ ಆದೇಶ ಪ್ರಶ್ನಿಸಿ ಎನ್. ಚಂದ್ರಬಾಬು ನಾಯ್ಡು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು 2024ರ ಜನವರಿ 16ರಂದು ಭಿನ್ನಮತದ ತೀರ್ಪು ನೀಡಿತ್ತು.

ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ‘ಸೆಕ್ಷನ್ 17ಎ’ಯ ವ್ಯಾಖ್ಯಾನ ಹಾಗೂ ಅದರ ಅನ್ವಯದ ವಿಚಾರದಲ್ಲಿ ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್ ಮತ್ತು ಬೇಲಾ ಎಂ. ತ್ರಿವೇದಿ ಅವರಲ್ಲಿ ಒಮ್ಮತ ಮೂಡಿರಲಿಲ್ಲ.

ನಾಯ್ಡು ಅವರ ವಿರುದ್ಧ ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಅಡಿಯಲ್ಲಿ ತನಿಖೆ ನಡೆಸಲು ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕಿತ್ತು ಎಂದು ನ್ಯಾಯಮೂರ್ತಿ ಬೋಸ್ ಹೇಳಿದ್ದರು. ಆದರೆ, ನ್ಯಾಯಮೂರ್ತಿ ತ್ರಿವೇದಿ ಅವರು, ಈ ಸೆಕ್ಷನ್ ಅನ್ನು ಪೂರ್ವಾನ್ವಯಗೊಳಿಸಲು ಅವಕಾಶ ಇಲ್ಲ ಎಂದು ಅಭಿಪ್ರಾಯಪಟ್ಟಿದ್ದರು.

ರಾಜ್ಯ ಸರ್ಕಾರಿ ನೌಕರರಿಗೆ ಡಿಸಿಎಂ ಶಿವಕುಮಾರ್ ಕಿವಿಮಾತು

‘ಜನರನ್ನು ಅಲೆದಾಡಿಸಬಾರದು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರಿ ನೌಕರರು ಜನರನ್ನು ವಿನಾ ಕಾರಣ ಅಲೆದಾಡಿಸಬಾರದು. ನಿಮ್ಮಲ್ಲಿಗೆ ಬರುವ ಸಾರ್ವಜನಿಕರ ಕೆಲಸಗಳನ್ನು ತ್ವರಿತವಾಗಿ ಮಾಡಿಕೊಡಬೇಕು’ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಕಿವಿಮಾತು ಹೇಳಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಹಾಗೂ ರಾಜ್ಯ ಸರ್ಕಾರಿ ನೌಕರರ ಸಂಘವು ವಿಧಾನಸೌಧದ ಬಾಂಕ್ವೆಟ್ ಹಾಲ್‌ನಲ್ಲಿ ಸೋಮವಾರ ಆಯೋಜಿಸಿದ್ದ, ರಾಜ್ಯ ಸರ್ಕಾರಿ ನೌಕರರ ದಿನಾಚರಣೆಯಲ್ಲಿ ಅವರು ಮಾತನಾಡಿದರು.

‘ಕೆಲಸ ಹೇಗೆ ಆಗುತ್ತದೆ ಎಂಬ ಎಲ್ಲ ವಿವರ ಸರ್ಕಾರಿ ನೌಕರನಿಗೆ ಇರುತ್ತದೆ. ಆದರೂ ಆ ದಾಖಲೆ, ಈ ದಾಖಲೆ ತೆಗೆದುಕೊಂಡು ಬನ್ನಿ ಎಂದು ಸಾರ್ವಜನಿಕರನ್ನು ಅಲೆಸುತ್ತಾರೆ. ಸಾರ್ವಜನಿಕರು ತಮಗೆ ಸಲಾಂ ಹೊಡೆಯಬೇಕು, ಕಡಲೆ ಕಾಯಿ, ಹಣ್ಣು, ಕೋಳಿ ತಂದುಕೊಡಬೇಕು ಎನ್ನುವ ಧೋರಣೆ ಇತ್ತು. ನೀವ್ಯಾರೂ ಈ ರೀತಿ ಮಾಡಬಾರದು’ ಎಂದರು.

‘ನಾವು ರಾಜಕಾರಣಿಗಳು ಐದು ವರ್ಷದ ನಂತರ ಮನೆಗೆ ಹೋಗುತ್ತೇವೆ. ಸರ್ಕಾರಿ ನೌಕರರು 60 ವರ್ಷವಾಗುವವರೆಗೂ ಜನರ ಸೇವೆ ಮಾಡಬಹುದು. ಎಲ್ಲರಿಗೂ ಅಂತಹ ಅವಕಾಶ ಸಿಗುವುದಿಲ್ಲ. ನಿಮಗೆ ಸಿಕ್ಕಿರುವ ಈ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ಜನರು ನಿಮ್ಮನ್ನು ನೆನಪಿಸಿಕೊಳ್ಳುವಂತಹ ಕೆಲಸ ಮಾಡಬೇಕು’ ಎಂದು ತಿಳಿ ಹೇಳಿದರು.

‘ಇಂದಿರಾ ಗಾಂಧಿ ಅವರ ಹತ್ಯೆಯಾಗಿದ್ದ ಸಂದರ್ಭ. ಪುಟ್ಟರಂಗಪ್ಪ ಎಂಬುವವರು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿ ಆಗಿದ್ದರು. ನಾನು ಚಿತ್ರಮಂದಿರ ಪರವಾನಗಿ ಪಡೆಯಲು ಹೋಗಿದ್ದೆ. ರಜೆ ಘೋಷಣೆ ಆಗಬಹುದು ಎಂದು ಒಂದೇ ದಿನದಲ್ಲಿ ಕೆಲಸ ಮಾಡಿಕೊಟ್ಟಿದ್ದರು. ಹೀಗೆ ಜನರಿಗೆ ಅನುಕೂಲವಾಗುವ ಹಾಗೆ ತ್ವರಿತವಾಗಿ ಕೆಲಸ ಮಾಡುವ ಎಲ್ಲ ಸಾಧ್ಯತೆಗಳು ಸರ್ಕಾರಿ ನೌಕರರಿಗೆ ಇದೆ. ಅದನ್ನು ನೀವು ಸರಿಯಾಗಿ ಬಳಸಿಕೊಳ್ಳಬೇಕು’ ಎಂದರು.

‘ಶಾಸಕಾಂಗ ತೀರ್ಮಾನ ಮಾಡಿದ್ದನ್ನು, ಜಾರಿಗೆ ತರುವವರೇ ನೀವು ಅಂದರೆ (ಸರ್ಕಾರಿ ನೌಕರರು) ಕಾರ್ಯಾಂಗ. ನೀವು, ನಾವು ತಪ್ಪು ಮಾಡಿದರೆ ನಮ್ಮನ್ನು ತಿದ್ದುವುದು ನ್ಯಾಯಾಂಗ. ನಾವು ತಪ್ಪು ಮಾಡಿದರೆ ಎಚ್ಚರಿಸುವ ಕೆಲಸವನ್ನು ಮಾಧ್ಯಮಗಳು ಮಾಡುತ್ತವೆ. ನಮ್ಮ ತಪ್ಪಿನ ಬಗ್ಗೆ ಬರೆದಾಗ, ಕೋಪಿಸಿಕೊಳ್ಳಬಾರದು. ಬದಲಿಗೆ ತಪ್ಪು ತಿದ್ದಿಕೊಳ್ಳಬೇಕು’ ಎಂದರು.

‘ಸಂವಿಧಾನವನ್ನು ಪಾಲಿಸಿ’: ‘ಸಂವಿಧಾನದ ಆಶಯವನ್ನು ಈಡೇರಿಸುವುದೇ ಪ್ರಜಾಪ್ರಭುತ್ವದ ನಾಲ್ಕು ಅಂಗಗಳಾದ ಕಾರ್ಯಾಂಗ, ಶಾಸಕಾಂಗ, ನ್ಯಾಯಾಂಗ ಮತ್ತು ಮಾಧ್ಯಮಗಳ ಕೆಲಸ. ಸಂವಿಧಾನದ ಆಶಯದಂತೆ ಜಾತ್ಯತೀತ ಸಮಾಜ ನಿರ್ಮಿಸಿ, ಜಾತಿ ಅಸಮಾನತೆಯನ್ನು ಅಳಿಸಬೇಕು.ಬುದ್ಧ, ಬಸವ, ಗಾಂಧಿ ಹೇಳಿದ್ದನ್ನೇ ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಅಳವಡಿಸಿದ್ದಾರೆ. ಎಲ್ಲರೂ ಸಂವಿಧಾನ ಪಾಲಿಸಿ, ಕರ್ತವ್ಯ ನಿರ್ವಹಿಸಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.



ವಿವಿಧ ಸರ್ಕಾರಿ ಹುದ್ದೆಗಳಲ್ಲಿ ಉತ್ತಮವಾಗಿ ಕರ್ತವ್ಯ ನಿರ್ವಹಿಸಿದವರಿಗೆ ‘ಸರ್ಕಾರಿ ನೌಕರರ ದಿನಾಚರಣೆ’ಯಲ್ಲಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ‘ಸರ್ವೋತ್ತಮ ಸೇವಾ ಪ್ರಶಸ್ತಿ’ ಪ್ರದಾನ ಮಾಡಿ ಗೌರವಿಸಿದರು. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ, ಕರ್ನಾಟಕ ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಎಸ್.ಕಾಶಪ್ಪನವರ್ ಮತ್ತು ಅಧಿಕಾರಿಗಳು ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಮೋದಿ ಜೊತೆ ಮಾತುಕತೆ

ನವದೆಹಲಿ (ಪಿಟಿಐ): ಭಾರತ ಮತ್ತು ಅಮೆರಿಕದ ನಡುವೆ ದ್ವಿಪಕ್ಷೀಯ ವ್ಯಾಪಾರ ಒಪ್ಪಂದವನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಆಗಿರುವ ಪ್ರಗತಿಯ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ಇಬ್ಬರೂ ನಾಯಕರು ನವದೆಹಲಿಯಲ್ಲಿರುವ ಪ್ರಧಾನಿ ನಿವಾಸದಲ್ಲಿ ಸೋಮವಾರ ಸಂಜೆ ಮಾತುಕತೆ ನಡೆಸಿದರು. ಈ ಸಂದರ್ಭದಲ್ಲಿ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚೆ ನಡೆಯಿತು.

ಮಾತುಕತೆಯ ನಂತರ ಮೋದಿ ಅವರು ವ್ಯಾನ್ಸ್ ಮತ್ತು ಅವರ ಪತ್ನಿಗೆ ಉಷಾ ಅವರಿಗೆ ಔತಣಕೂಟ ಆಯೋಜಿಸಿದ್ದರು. ಅಮೆರಿಕದ ಅಧಿಕಾರಿಗಳ ನಿಯೋಗ ಕೂಡ ಔತಣ-ಕೂಟದಲ್ಲಿ ಭಾಗಿಯಾಗಿತ್ತು.

ದ್ವಿಪಕ್ಷೀಯ ಸಹಕಾರಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಆಗಿರುವ ಪ್ರಗತಿಯನ್ನು ಮೋದಿ ಮತ್ತು ವ್ಯಾನ್ಸ್ ಅವರು ಪರಿಶೀಲಿಸಿದರು ಎಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿದೆ.



ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರ ಭೇಟಿ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ವ್ಯಾನ್ಸ್ ಅವರ ಮಕ್ಕಳಿಗೆ ಆಟವಾಡಲು ನವಿಲು ಗರಿ ನೀಡಿದರು

'ಇಂಧನ, ರಕ್ಷಣೆ, ಮಹತ್ವದ ತಂತ್ರಜ್ಞಾನ ಹಾಗೂ ಇತರ ಕೆಲವು ಕ್ಷೇತ್ರಗಳಲ್ಲಿ ಸಹಕಾರವನ್ನು ಹೆಚ್ಚಿಸುವ ದಿಸೆಯಲ್ಲಿ ಪ್ರಯತ್ನಗಳು ಮುಂದು-ವರಿದಿರುವುದನ್ನು ಕೂಡ ಅವರು ಗಮನಿಸಿದರು' ಎಂದು ಅದು ಹೇಳಿದೆ.

ಎರಡೂ ದೇಶಗಳ ಪಾಲಿಗೆ ಮಹತ್ವದ್ದಾಗಿರುವ ಕೆಲವು ಜಾಗತಿಕ ಮತ್ತು ಪ್ರಾದೇಶಿಕ ವಿದ್ಯಮಾನಗಳ ಬಗ್ಗೆ ಇಬ್ಬರೂ ನಾಯಕರು ಅಭಿಪ್ರಾಯ ವಿನಿಮಯ ಮಾಡಿಕೊಂಡರು.

ಮಾತುಕತೆಯ ವೇಳೆ ಮೋದಿ ಅವರು, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ತಮ್ಮ ಶುಭಾಶಯ ತಿಳಿಸುವಂತೆ ಹೇಳಿದರು. ಟ್ರಂಪ್ ಅವರ ಭಾರತ ಭೇಟಿಯನ್ನು ಎದುರುನೋಡು-ತ್ತಿರುವುದಾಗಿ ತಿಳಿಸಿದರು.

ಅಕ್ಷರಧಾಮ ದೇಗುಲಕ್ಕೆ ವ್ಯಾನ್ಸ್ ಭೇಟಿ

ಭಾರತ ಪ್ರವಾಸದಲ್ಲಿರುವ ಅಮೆರಿಕದ ಉಪಾಧ್ಯಕ್ಷ • ಸಾಂಪ್ರದಾಯಿಕ ಉಡುಪು ಧರಿಸಿದ್ದ ಮಕ್ಕಳು

ನವದೆಹಲಿ (ಪಿಟಿಐ): ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್, ಪತ್ನಿ ಉಷಾ ವ್ಯಾನ್ಸ್ ಮತ್ತು ದಂಪತಿಯ ಮೂವರು ಮಕ್ಕಳು ಸ್ವಾಮಿ ನಾರಾಯಣ ಅಕ್ಷರಧಾಮ ದೇವಸ್ಥಾನಕ್ಕೆ ಸೋಮವಾರ ಭೇಟಿ ನೀಡುವ ಮೂಲಕ ಭಾರತ ಪ್ರವಾಸ ಆರಂಭಿಸಿದರು.

ಉಷಾ ಅವರು ಭಾರತ ಮೂಲದವರು. ವ್ಯಾನ್ಸ್ ದಂಪತಿ ಅಕ್ಷರಧಾಮ ದೇವಸ್ಥಾನದಲ್ಲಿ ಅಂದಾಜು ಒಂದು ತಾಸು ಇದ್ದರು.

'ಈ ಸುಂದರ ಸ್ಥಳದಲ್ಲಿ ನನ್ನನ್ನು ಮತ್ತು ನನ್ನ ಕುಟುಂಬವನ್ನು ಸ್ವಾಗತಿಸುವಾಗ ತೋರಿದ ಆತಿಥ್ಯ, ಸ್ನೇಹಕ್ಕೆ ನಿಮಗೆಲ್ಲ ಧನ್ಯವಾದ. ಅಚ್ಚುಕಟ್ಟಾಗಿ ಹಾಗೂ ಕಾಳಜಿಯೊಂದಿಗೆ ಸುಂದರವಾದ ದೇವಸ್ಥಾನವನ್ನು ನೀವು ನಿರ್ಮಿಸಿರುವುದು ಭಾರತಕ್ಕೆ ಒಂದು ದೊಡ್ಡ ಹೆಮ್ಮೆ. ವಿಶೇಷವಾಗಿ ನಮ್ಮ ಮಕ್ಕಳು ಇದನ್ನು ಇಷ್ಟಪಟ್ಟರು. ದೇವರು ಹರಸಲಿ' ಎಂದು ವ್ಯಾನ್ಸ್ ಅವರು ದೇವಸ್ಥಾನದ ಅತಿಥಿಗಳ ಪುಸ್ತಕದಲ್ಲಿ ಬರೆದಿದ್ದಾರೆ.

'ಅವರಿಗೆ ಸಾಂಪ್ರದಾಯಿಕ ಸ್ವಾಗತ ನೀಡಲಾಯಿತು. ನಂತರ ಅವರು ದೇವರ ದರ್ಶನ ಪಡೆದರು. ಮರದ ಆನೆಯ ಕೆತ್ತನೆ, ದೆಹಲಿ ಅಕ್ಷರಧಾಮ ದೇವಸ್ಥಾನದ ಪ್ರತಿಕೃತಿ ಮತ್ತು ಮಕ್ಕಳ ಪುಸ್ತಕಗಳನ್ನು ಕುಟುಂಬಕ್ಕೆ ಉಡುಗೊರೆಯಾಗಿ ನೀಡಲಾಯಿತು' ಎಂದು ದೇವಸ್ಥಾನದ ಅರ್ಚಕರೊಬ್ಬರು ತಿಳಿಸಿದರು.

ದೇವಸ್ಥಾನದ ಮೇಲುಪಾಯ ಆಗಿರುವ 'ಗಜೇಂದ್ರ ಪೀಠ'ದ ಸೂಕ್ಷ್ಮ ಕೆತ್ತನೆಗಳು ವ್ಯಾನ್ಸ್ ಅವರ ಮನಸ್ಸನ್ನು ವಿಶೇಷವಾಗಿ ಸೆಳೆದವು ಎಂದು ದೇವಸ್ಥಾನದ ಸ್ವಯಂಸೇವಕಿ ಮೀರಾ ಎಸ್. ಹೇಳಿದರು. 'ಅವರಿಗೆ ದೇವಸ್ಥಾನದ ಇಡೀ ಸಂಕೀರ್ಣವನ್ನು ತೋರಿಸಲಾಯಿತು. ಇದು ಅವರ ಮೇಲೆ ಗಾಢವಾದ ಪರಿಣಾಮ ಬೀರಿತು. ತಮಗೆ ಇಲ್ಲಿ ಶಾಂತಿಯ ಅನುಭವ ಆಯಿತು ಎಂದು ಅವರು ಹೇಳಿದರು' ಎಂದು ಕೂಡ ಮೀರಾ ತಿಳಿಸಿದರು.

ಸೋಮವಾರ ಬೆಳಿಗ್ಗೆ ದೆಹಲಿಯ ಪಾಲಂ ವಾಯುನೆಲೆ ತಲುಪಿದ ವ್ಯಾನ್ಸ್ ಕುಟುಂಬವನ್ನು ಕೇಂದ್ರ ಸಚಿವ ಅಶ್ವಿನಿ ವೈಷ್ಣವ್ ಸ್ವಾಗತಿಸಿದರು. ಅವರಿಗೆ ಶಿಷ್ಟಾಚಾರದ ಪ್ರಕಾರ ಸ್ವಾಗತ ಕೋರಲಾಯಿತು.

ವ್ಯಾನ್ಸ್ ದಂಪತಿಯು ಭಾರತ ಪ್ರವಾಸದ ವೇಳೆ ಜೈಪುರ ಮತ್ತು ಆಗ್ರಾಕ್ಕೆ ಕೂಡ ಭೇಟಿ ನೀಡಲಿದ್ದಾರೆ. 'ಅವರ ಭೇಟಿಯು ಭಾರತ ಮತ್ತು ಅಮೆರಿಕ ನಡುವಿನ ಸಮಗ್ರ ಜಾಗತಿಕ ಕಾರ್ಯತಂತ್ರ ಪಾಲುದಾ-ರಿಕೆಯನ್ನು ಇನ್ನಷ್ಟು ಆಳವಾಗಿಸುವ ನಿರೀಕ್ಷೆ ಇದೆ' ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಕರಕುಶಲ ಉತ್ಪನ್ನ ಖರೀದಿ

ಜೆ.ಡಿ. ವ್ಯಾನ್ಸ್, ಪತ್ನಿ ಉಷಾ ಮತ್ತು ದಂಪತಿಯ ಮಕ್ಕಳು ಇಲ್ಲಿನ ಕೇಂದ್ರ ಗುಡಿಕೈಗಾರಿಕಾ ವ್ಯಾಪಾರ ಕೇಂದ್ರಕ್ಕೆ ಸೋಮವಾರ ಭೇಟಿ ನೀಡಿ, ಕೆಲವು ಕರಕುಶಲ ಉತ್ಪನ್ನಗಳನ್ನು ಖರೀದಿಸಿದರು.

'ವ್ಯಾನ್ಸ್ ಅವರು ಇಲ್ಲಿಗೆ ಭೇಟಿ ನೀಡಿ ಬಹಳ ಖುಷಿಪಟ್ಟರು... ಅವರು ಕೆಲವು ಉತ್ಪನ್ನಗಳನ್ನು ಖರೀದಿಸಿದರು' ಎಂದು ವ್ಯಾಪಾರ ಕೇಂದ್ರದ ಪ್ರಧಾನ ವ್ಯವಸ್ಥಾಪಕ ಮೀರಾ ಸೊಮಾನಿ ತಿಳಿಸಿದರು.

ಮರದ ಕೆಲವು ಉತ್ಪನ್ನಗಳು, ಕೈಮಗ್ಗದ ಕೆಲವು ಉತ್ಪನ್ನಗಳು ಮತ್ತು ಹಿತ್ತಾಳೆಯ ಕೆಲವು ಉತ್ಪನ್ನಗಳನ್ನು ವ್ಯಾನ್ಸ್ ಖರೀದಿಸಿದರು ಎಂದು ವ್ಯಾಪಾರ ಕೇಂದ್ರದ ಸಿಬ್ಬಂದಿ ಹೇಳಿದ್ದಾರೆ.

ಸಾಂಪ್ರದಾಯಿಕ ಉಡುಪು: ವ್ಯಾನ್ಸ್ ದಂಪತಿಯ ಮಕ್ಕಳಾದ ಇವಾನ್, ವಿವೇಕ್ ಮತ್ತು ಮಿರಾಬೆಲ್ ಅವರು ಭಾರತಕ್ಕೆ ಬಂದಿಳಿದಾಗ, ಭಾರತದ ಸಾಂಪ್ರದಾಯಿಕ ಉಡುಪು ಧರಿಸಿದ್ದರು, ಆಕರ್ಷಣೆಯ ಕೇಂದ್ರವಾಗಿದ್ದರು.

ಅವರು ದೆಹಲಿಯಲ್ಲಿ ಬಂದಿಳಿದ ಕೆಲವೇ ಹೊತ್ತಿನಲ್ಲಿ ಅವರ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಳಕೆದಾರರು ವ್ಯಾಪಕವಾಗಿ ಹಂಚಿಕೊಂಡರು.

ಎಂಟು ವರ್ಷ ವಯಸ್ಸಿನ ಇವಾನ್ ಬಿಳಿ ಬಣ್ಣದ ಕುರ್ತಾ, ಐದು ವರ್ಷ ವಯಸ್ಸಿನ ವಿವೇಕ್ ಹಳದಿ ಬಣ್ಣದ ಕುರ್ತಾ ಧರಿಸಿದ್ದರು. ಮೂರು ವರ್ಷ ವಯಸ್ಸಿನ ಮಿರಾಬೆಲ್ ಅನಾರ್ಕಲಿ ಸೂಟ್ ಧರಿಸಿ, ಅದರ ಮೇಲೆ ಜಾಕೆಟ್ ಹಾಕಿಕೊಂಡಿದ್ದರು.

ಮಹಾರಾಷ್ಟ್ರ ಚುನಾವಣಾ ವ್ಯವಸ್ಥೆಯಲ್ಲಿ ತಪ್ಪುಗಳು ನಡೆದಿವೆ • ಅಮೆರಿಕದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ವಾಗ್ದಾಳಿ

'ಚುನಾವಣಾ ಆಯೋಗದ ರಾಜಿ ಸ್ಪಷ್ಟವಾಗಿದೆ'

ಬಾಸ್ಟನ್ (ಪಿಟಿಐ): ಅಮೆರಿಕ ಪ್ರವಾಸದಲ್ಲಿರುವ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯನ್ನು ಉಲ್ಲೇಖಿಸಿ, 'ಚುನಾವಣಾ ಆಯೋಗವು ರಾಜಿ ಮಾಡಿಕೊಂಡಿದೆ ಮತ್ತು ವ್ಯವಸ್ಥೆಯಲ್ಲಿ ಕೆಲವು ತಪ್ಪುಗಳಿವೆ' ಎಂದು ಆರೋಪಿಸಿದ್ದಾರೆ.

ಭಾನುವಾರ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ರಾಹುಲ್ ಅವರ ಹೇಳಿಕೆಯನ್ನು ಬಿಜೆಪಿ ತೀವ್ರವಾಗಿ ಖಂಡಿಸಿದ್ದರೆ, ಕಾಂಗ್ರೆಸ್ ಸಮರ್ಥಿಸಿ-ಕೊಂಡಿದೆ.

ರಾಹುಲ್ ಹೇಳಿದ್ದೇನು?: 'ಮಹಾರಾಷ್ಟ್ರ ಚುನಾವಣೆ ನಡೆದ ದಿನ ಚುನಾವಣಾ ಆಯೋಗವು ಸಂಜೆ 5.30 ಗಂಟೆಗೆ ನಮಗೆ ಮತದಾನದ ಅಂಕಿ ಅಂಶಗಳ ಮಾಹಿತಿ ಒದಗಿಸಿತ್ತು. ಅಂದು ಸಂಜೆ 5.30ರಿಂದ 7.30ರ ಅವಧಿಯಲ್ಲಿ 65 ಲಕ್ಷ ಮತದಾರರು ಮತಚಲಾಯಿಸಿದ್ದಾರೆ. ಇದು ಭೌತಿಕವಾಗಿ ಅಸಾಧ್ಯ. ಮತದಾರರೊಬ್ಬರು ಮತ ಚಲಾಯಿಸಲು ಅಂದಾಜು 3 ನಿಮಿಷ ತೆಗೆದುಕೊಳ್ಳುತ್ತಾರೆ. ಇದನ್ನು ಆಧರಿಸಿ ಲೆಕ್ಕ ಹಾಕಿದರೆ ಮತದಾನ ಪ್ರಕ್ರಿಯೆ ಮರು ದಿನ ನಸುಕಿನ 2 ಗಂಟೆಯವರೆಗೂ ನಡೆಯಬೇಕಿತ್ತು' ಅವರು ಹೇಳಿದ್ದಾರೆ.

'ಈ ಕುರಿತು ವಿಡಿಯೊ ಚಿತ್ರೀಕರಣ ಒದಗಿಸುವಂತೆ ನಾವು ಮಾಡಿದ್ದ ಮನವಿಯನ್ನು ತಿರಸ್ಕರಿಸಿದ್ದೇ ಅಲ್ಲದೆ, ಕಾನೂನನ್ನೇ ಬದಲಾಯಿಸಿಬಿಟ್ಟರು. ಇದರಿಂದಾಗಿ ನಾವೀಗ ವಿಡಿಯೊ ಚಿತ್ರೀಕರಣ ಕೇಳುವಂತಿಲ್ಲ' ಎಂದು ಅವರು ವಿವರಿಸಿದ್ದಾರೆ.

'ಇದನ್ನೆಲ್ಲ ಗಮನಿಸಿದರೆ, ಚುನಾವಣಾ ವ್ಯವಸ್ಥೆಯಲ್ಲಿ ಲೋಪ-ಗಳಾಗಿರುವುದು ಸ್ಪಷ್ಟವಾಗಿದೆ. ಅಂತೆಯೇ ಚುನಾವಣಾ ಆಯೋಗ ರಾಜಿ ಮಾಡಿಕೊಂಡಿರುವುದು ಅತ್ಯಂತ ಸ್ಪಷ್ಟವಾಗಿದೆ. ಈ ವಿಷಯವನ್ನು ನಾನು ಈಗಾಗಲೇ ಹಲವು ಬಾರಿ ಹೇಳಿದ್ದೇನೆ' ಎಂದು ಅವರು ತಿಳಿಸಿದ್ದಾರೆ.

ರಾಹುಲ್ ಅವರು ಅಮೆರಿಕದಲ್ಲಿ ವ್ಯಾಪಾರ ಮತ್ತು ಸಮುದಾಯದ ಸದಸ್ಯರ ಜತೆಗೆ ಸಂವಾದ ನಡೆಸಿದರು. ಅವರು ಎರಡು ದಿನ ರೋಡ್ ದ್ವೀಪದಲ್ಲಿರುವ ಬ್ರೌನ್ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳು ಮತ್ತು ಬೋಧಕ ಸಿಬ್ಬಂದಿ ಜತೆಗೂ ಸಂವಾದ ನಡೆಸಲಿದ್ದಾರೆ.

'ರಾಹುಲ್ ಹತಾಶರಾಗಿದ್ದಾರೆ'

ನವದೆಹಲಿ (ಪಿಟಿಐ): ಚುನಾವಣಾ ಆಯೋಗದ ಕುರಿತು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ನೀಡಿದ ಹೇಳಿಕೆಯನ್ನು ಸೋಮವಾರ ತೀವ್ರವಾಗಿ ಖಂಡಿಸಿರುವ ಬಿಜೆಪಿ, ಅವರನ್ನು 'ದೇಶದ್ರೋಹಿ' ಎಂದು ಜರಿದಿದೆ. ಅಲ್ಲದೆ ನ್ಯಾಷನಲ್ ಹೆರಾಲ್ಡ್ ಪ್ರಕರಣದಿಂದ ಹತಾಶೆಗೊಂಡಿರುವ ಅವರು, ಚುನಾವಣಾ ಆಯೋಗದ ಬಗ್ಗೆ ಇಲ್ಲ ಸಲ್ಲದ ಹೇಳಿಕೆ ನೀಡುತ್ತಿದ್ದಾರೆ ಎಂದು ದೂರಿದೆ.

'ನ್ಯಾಷನಲ್ ಹೆರಾಲ್ಡ್ ಪ್ರಕರಣದಿಂದಾಗಿ ಜಾರಿ ನಿರ್ದೇಶನಾಲಯದ ಮೇಲಿರುವ ನಿಮ್ಮ ಸಿಟ್ಟನ್ನು ಚುನಾವಣಾ ಆಯೋಗದ ಕಡೆಗೆ ತಿರುಗಿಸಿದರೆ ಯಾವುದೇ ಪ್ರಯೋಜನ ಆಗುವುದಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರಾ ವಾಗ್ದಾಳಿ ನಡೆಸಿದ್ದಾರೆ.

'ಇ.ಡಿ ನಿಮ್ಮನ್ನು ಹಾಗೇಲ್ಲ ಬಿಡುವುದಿಲ್ಲ. ಏಕೆಂದರೆ ಅದು ವಾಸ್ತವಾಂಶ ಆಧರಿಸಿ ಕೆಲಸ ಮಾಡುತ್ತದೆ. ಈ ಪ್ರಕರಣದಲ್ಲಿ ರಾಹುಲ್ ಗಾಂಧಿ ಮತ್ತು ಅವರ ತಾಯಿ ಸೋನಿಯಾ ಗಾಂಧಿ ಜೈಲು ಸೇರುತ್ತಾರೆ' ಎಂದು ಅವರು ಹೇಳಿದ್ದಾರೆ.

'ವಿದೇಶದಲ್ಲಿ ದೇಶದ ಟೀಕೆ ಸರಿಯಲ್ಲ'

ನಾಗ್ಪುರ/ಭೋಪಾಲ್ (ಪಿಟಿಐ): 'ವಿದೇಶದಲ್ಲಿ ಭಾರತವನ್ನು ಟೀಕಿಸುವುದು ಅಥವಾ ದೇಶದ ರಾಜಕೀಯದ ಬಗ್ಗೆ ಮಾತನಾಡುವುದು ಸರಿಯಲ್ಲ' ಎಂದು ಆರ್‌ಪಿಐ (ಎ) ಮುಖ್ಯಸ್ಥ ಆಗಿರುವ ಕೇಂದ್ರ ಸಚಿವ ರಾಮದಾಸ್ ಅಠಾವಳೆ ಪ್ರತಿಕ್ರಿಯಿಸಿದ್ದಾರೆ.

'ಕಾಂಗ್ರೆಸ್ ಪಕ್ಷವು 2024ರ ಲೋಕಸಭಾ ಚುನಾವಣೆಯಲ್ಲಿ 99 ಸ್ಥಾನಗಳನ್ನು ಜಯಿಸಿದಾಗ ಅಥವಾ ಕರ್ನಾಟಕದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದಾಗ ಕಾಂಗ್ರೆಸ್ ಅನ್ನು ಎನ್‌ಡಿಎ ಪ್ರಶ್ನಿಸಲಿಲ್ಲ. ಆದರೆ, ನಾವು ಹೆಚ್ಚಿನ ಕ್ಷೇತ್ರಗಳಲ್ಲಿ ಜಯಿಸಿದಾಗ ಮಾತ್ರ ನೀವು ಈ ರೀತಿಯ ಅನುಮಾನಗಳನ್ನು ವ್ಯಕ್ತಪಡಿಸುತ್ತೀರಿ' ಎಂದು ಅವರು ಹೇಳಿದ್ದಾರೆ.

'ರಾಹುಲ್ ಅನ್ನು ನಿಯಂತ್ರಿಸಿ': 'ರಾಹುಲ್ ಗಾಂಧಿ ಅವರು ವಿದೇಶಿ ನೆಲದಲ್ಲಿ ಭಾರತವನ್ನು ಅವಮಾನಿಸುವುದನ್ನು ಮುಂದುವರಿಸಿದ್ದಾರೆ. ವಿರೋಧ ಪಕ್ಷವು ತನ್ನ ನಾಯಕನನ್ನು ನಿಯಂತ್ರಿಸಬೇಕು' ಎಂದು ಮಧ್ಯ ಪ್ರದೇಶದ ಮುಖ್ಯಮಂತ್ರಿ ಮೋಹನ್ ಯಾದವ್ ದೂರಿದ್ದಾರೆ.

'ಯಾವುದೇ ದೇಶದ ನಾಯಕರು ವಿದೇಶಿ ನೆಲಗಳಲ್ಲಿ ತಮ್ಮ ದೇಶವನ್ನು ಅವಮಾನಿಸುವುದಿಲ್ಲ. ಆದರೆ ಇದು ಕಾಂಗ್ರೆಸ್‌ನ ಸ್ವಭಾವವಾಗಿದೆ' ಎಂದು ಅವರು ಟೀಕಿಸಿದರು.



ಬಾಸ್ಟನ್‌ಗೆ ಬಂದ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಭಾರತೀಯ ಮೂಲದವರು ಭಾನುವಾರ ಸ್ವಾಗತಿಸಿದರು– ಪಿಟಿಐ ಚಿತ್ರ

'ಪ್ರಧಾನಿಯಿಂದಲೇ ಆರಂಭ'

ಭೋಪಾಲ್ (ಪಿಟಿಐ): ರಾಹುಲ್ ಗಾಂಧಿ ಹೇಳಿಕೆಯನ್ನು ಸಮರ್ಥಿಸಿಕೊಂಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಮತ್ತು ಸಿರ್ಸಾ ಸಂಸದೆ ಕುಮಾರಿ ಸೆಲ್ಜಾ, 'ವಿದೇಶಿ ನೆಲದಲ್ಲಿ ವಿರೋಧ ಪಕ್ಷಗಳನ್ನು ಟೀಕಿಸುವ ಪ್ರವೃತ್ತಿಯನ್ನು ಮೊದಲು ಆರಂಭಿಸಿದ್ದು, ಪ್ರಧಾನಿ ನರೇಂದ್ರ ಮೋದಿ' ಎಂದು ಆರೋಪಿಸಿದ್ದಾರೆ.

'ಇದು ಬಿಜೆಪಿಯ ಹಳೆಯ ಅಭ್ಯಾಸ. ಭಾರತದ ಆಂತರಿಕ ರಾಜಕೀಯ ವಿಷಯಗಳ ಬಗ್ಗೆ ವಿದೇಶದಲ್ಲಿ ಮೊದಲು ಮಾತನಾಡಿದ್ದೇ ಗೌರವಾನ್ವಿತ ಪ್ರಧಾನಿಯವರು. ವಿದೇಶಗಳಲ್ಲಿ ಅವರು ಆಗಾಗ್ಗೆ ವಿರೋಧ ಪಕ್ಷಗಳನ್ನು ಅವಮಾನಿಸಿದ್ದಾರೆ' ಎಂದು ಅವರು ದೂರಿದ್ದಾರೆ.

ರಾಹುಲ್ ಅವರ ಹೇಳಿಕೆಯನ್ನು ಟೀಕಿಸಿದ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, 'ಉಲ್ಟಾ ಚೋರ್ ಕೊತ್ವಾಲ್ ಕೋ ಡಾಂಟೆ' (ಕಳ್ಳನೇ ಪೊಲೀಸರ ಬಗ್ಗೆ ಬೈದಂತೆ) ಎಂಬಂತಾಗಿದೆ ಎಂದಿದ್ದಾರೆ.

ದ್ವೇಷದ ರಾಜಕೀಯಕ್ಕೆ ಧಾರ್ಮಿಕ ಗುರುತು ಬಳಕೆ: ಖುರೇಷಿ ತಿರುಗೇಟು

ನವದೆಹಲಿ (ಪಿಟಿಐ): 'ಯಾವುದೇ ಒಬ್ಬ ವ್ಯಕ್ತಿಯನ್ನು ಅವರ ಕೊಡುಗೆ ಮತ್ತು ಪ್ರತಿಭೆಯಿಂದ ಗುರುತಿಸಬೇಕೇ ಹೊರತು ಧಾರ್ಮಿಕ ಗುರುತಿನಿಂದ ಅಲ್ಲ' ಎಂದು ಪ್ರತಿಪಾದಿಸಿರುವ ಮಾಜಿ ಮುಖ್ಯ ಚುನಾವಣಾ ಆಯುಕ್ತ ಎಸ್.ವೈ.ಖುರೇಷಿ, 'ಭಾರತದ ಕಲ್ಪನೆಯಲ್ಲಿ ನಾನು ನಂಬಿಕೆ ಹೊಂದಿದ್ದೇನೆ' ಎಂದು ಹೇಳಿದ್ದಾರೆ.



ಎಸ್.ವೈ.ಖುರೇಷಿ

'ಖುರೇಷಿ ಅವರು ಚುನಾವಣಾ ಆಯುಕ್ತರಾಗಿರಲಿಲ್ಲ, ಬದಲಿಗೆ ಮುಸ್ಲಿಂ ಆಯುಕ್ತರಾಗಿದ್ದರು' ಎಂದು ಶನಿವಾರ ವಾಗ್ದಾಳಿ ನಡೆಸಿದ್ದ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರಿಗೆ ಖುರೇಷಿ ತಿರುಗೇಟು ನೀಡಿದ್ದಾರೆ.

'ಕೆಲವರು ತಮ್ಮ ದ್ವೇಷಪೂರಿತ ರಾಜಕೀಯವನ್ನು ಮುನ್ನಡೆಸಲು ಧಾರ್ಮಿಕ ಗುರುತುಗಳನ್ನು ಪ್ರಮುಖವಾಗಿ ಬಳಸುತ್ತಾರೆ' ಎಂದು ಅವರು ಕುಟುಕಿದ್ದಾರೆ.

'ಭಾರತವು ಯಾವಾಗಲೂ ತನ್ನ ಸಾಂವಿಧಾನಿಕ ಸಂಸ್ಥೆಗಳು ಮತ್ತು ತತ್ವಗಳ ಪರ ಇದ್ದು, ಅದಕ್ಕಾಗಿ ಹೋರಾಡುತ್ತದೆ' ಎಂದು ಅವರು ತಿಳಿಸಿದ್ದಾರೆ.

'ಹಂದಿಯ ಜತೆಗೆ ಎಂದಿಗೂ ಕುಸ್ತಿ ಆಡಬಾರದು. ಅದರಿಂದ ನೀವು ಕೊಳಕಾಗುತ್ತೀರಿ ಮತ್ತು ಅದು ಹಂದಿಗೂ ಇಷ್ಟವಾಗುತ್ತದೆ' ಎಂದು ಲೇಖಕ ಜಾರ್ಜ್ ಬರ್ನಾರ್ಡ್ ಶಾ ಅವರು ಹಿಂದೊಮ್ಮೆ ಹೇಳಿದ್ದಾರೆ. ಅದನ್ನು ನಾನು ಅರಿತಿದ್ದೇನೆ' ಎಂದು ಖುರೇಷಿ ಅವರು ಯಾರನ್ನೂ ಉಲ್ಲೇಖಿಸದೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

ನಿಶಿಕಾಂತ್ ದುಬೆ ಹೇಳಿಕೆಯನ್ನು ಖಂಡಿಸಿರುವ ಹಲವು ರಾಜಕೀಯ ನಾಯಕರು, ಖುರೇಷಿ ಅವರಿಗೆ ಬೆಂಬಲ ಸೂಚಿಸಿದ್ದಾರೆ.

ಅತ್ಯಾಚಾರ, ಕೊಲೆ ಅಪರಾಧಿಗೆ ಗಲ್ಲು

ಒಂದನೇ ಪುಟದಿಂದ...

ತನಿಖಾಧಿಕಾರಿ ಭಾನು ಚವ್ಹಾಣ ನೇತೃತ್ವದಲ್ಲಿ ನಿಂಬರ್ಗಾ ಠಾಣೆ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಯಮನಪ್ಪ ಬಮ್ಮಣಗಿ ಅವರು ಅಪರಾಧಿಗೆ ಪೋಕ್ಸೊ ಕಾಯ್ದೆಯಡಿ ಗಲ್ಲು ಶಿಕ್ಷೆ ಹಾಗೂ ₹1 ಲಕ್ಷ ದಂಡ ವಿಧಿಸಿದರು. ಕಾನೂನು ಪ್ರಾಧಿಕಾರದಿಂದ ₹4 ಲಕ್ಷ ಪರಿಹಾರವನ್ನು ಮೃತ ಬಾಲಕಿಯ ತಾಯಿಗೆ ನೀಡಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ. ಪೋಕ್ಸೊ ಪ್ರಕರಣದಲ್ಲಿ ಜಿಲ್ಲೆಯಲ್ಲಿ ಅಪರಾಧಿಗೆ ಗಲ್ಲು ಶಿಕ್ಷೆಯಾಗಿದ್ದು ಇದೇ ಮೊದಲ ಪ್ರಕರಣ ಎನ್ನಲಾಗಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದಿಸಿದರು.

ಜಾರ್ಖಂಡ್‌ನಲ್ಲಿ ಎಂಟು ನಕ್ಸಲರ ಹತ್ಯೆ

ರಾಂಚಿ/ನವದೆಹಲಿ (ಪಿಟಿಐ): ಜಾರ್ಖಂಡ್‌ನ ಬೊಕಾರೊ ಜಿಲ್ಲೆಯಲ್ಲಿ ಸಿಆರ್‌ಪಿಎಫ್‌ನ ಕೊಬ್ರಾ ಕಮಾಂಡೊಗಳು ಮತ್ತು ಪೊಲೀಸರು ಸೋಮವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಎಂಟು ನಕ್ಸಲರು ಹತರಾಗಿದ್ದಾರೆ.

ಕಾರ್ಯಾಚರಣೆ ಸ್ಥಳದಲ್ಲಿ ಎಕೆ ಸರಣಿಯ ರೈಫಲ್, ಮೂರು ಐಎನ್‌ಎಸ್‌ಎಎಸ್ ರೈಫಲ್‌ಗಳು, ಸೆಲ್ಫ್ ಲೋಡಿಂಗ್ ರೈಫಲ್, ಎಂಟು ನಾಡ ಬಂದೂಕುಗಳು ಮತ್ತು ಪಿಸ್ತೂಲ್ ವಶಕ್ಕೆ ಪಡೆಯಲಾಗಿದೆ. ಎನ್‌ಕೌಂಟರ್‌ನಲ್ಲಿ ಹತ್ಯೆಯಾದ 8 ನಕ್ಸಲರ ವಿರುದ್ಧ ವಿವಿಧ ಹಿಂಸಾಚಾರ ಪ್ರಕರಣಗಳು ದಾಖಲಾಗಿದ್ದವು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರ ಸಂಘಟನೆಯ ಕೇಂದ್ರೀಯ ಸಮಿತಿಯ ಸದಸ್ಯನಾದ ಪ್ರಯಾಗ್ ಮಾಂಝಿ ಅಲಿಯಾಸ್ ವಿವೇಕ್, ವಿಶೇಷ ಪ್ರದೇಶ ಸಮಿತಿ ಸದಸ್ಯ ಅರವಿಂದ್ ಯಾದವ್ ಅಲಿಯಾಸ್ ಅವಿನಾಶ್, ವಲಯ ಸಮಿತಿ ಸದಸ್ಯ ಸಹೆಬ್ರಾಮ್ ಮಾಂಝಿ ಅಲಿಯಾಸ್ ರಾಹುಲ್ ಮಾಂಝಿ, ಮಹೇಶ್ ಮಾಂಝಿ ಅಲಿಯಾ ಮೋಟಾ, ತಾಲು, ರಂಜು ಮಾಂಝಿ, ಗಂಗಾರಾಮ್ ಹಾಗೂ ಮಹೇಶ್ ಹತ್ಯೆಯಾದವರು. ಇದರಲ್ಲಿ ವಿವೇಕ್ ಬಗ್ಗೆ ಸುಳಿವು ನೀಡಿದವರಿಗೆ ₹1 ಕೋಟಿ, ಅರವಿಂದ್ ಬಗ್ಗೆ ಸುಳಿವು ನೀಡಿದವರಿಗೆ ₹25 ಲಕ್ಷ ಬಹುಮಾನ ಘೋಷಿಸಲಾಗಿತ್ತು.

'ನಕ್ಸಲ್ ವಾದ ತೊಡೆದುಹಾಕುವ ನಿಟ್ಟಿನಲ್ಲಿ ನಮ್ಮ ಭದ್ರತಾ ಪಡೆಗಳು ಮತ್ತೊಂದು ಯಶಸ್ಸು ಸಾಧಿಸಿವೆ' ಎಂದು ಗೃಹ ಸಚಿವ ಅಮಿತ್ ಶಾ ಹೇಳಿದರು.

'ತಾರತಮ್ಯ'ಕ್ಕೆ ಜೈಲು, ದಂಡ

ಒಂದನೇ ಪುಟದಿಂದ...

'ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ಯಾರೊಬ್ಬರೂ ಜಾತಿ ಆಧಾರದಲ್ಲಿ ತಾರತಮ್ಯ ಎದುರಿಸಬಾರದು. ಇದನ್ನು ಖಾತ್ರಿಪಡಿಸಲು 'ರೋಹಿತ್ ವೇಮುಲ ಕಾಯ್ದೆ' ಹೆಸರಿನ ಕಾನೂನು ಅನ್ನು ಕರ್ನಾಟಕದಲ್ಲೂ ರೂಪಿಸಿ, ಜಾರಿಗೊಳಿಸಬೇಕು' ಎಂದು ಕಾಂಗ್ರೆಸ್ ನಾಯಕ ಹಾಗೂ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಇತ್ತೀಚೆಗೆ ಪತ್ರ ಬರೆದು ಒತ್ತಾಯಿಸಿದ್ದರು.


ಸರ್ಕಾರ ಸಿದ್ಧಪಡಿಸಿರುವ 'ಕರ್ನಾಟಕ ರೋಹಿತ್ ವೇಮುಲ (ಹೊರಗಿಡುವಿಕೆ ಅಥವಾ ಅನ್ಯಾಯದಿಂದ ರಕ್ಷಣೆ) (ಶಿಕ್ಷಣ ಹಕ್ಕು ಮತ್ತು ಘನತೆ) ಮಸೂದೆ–2025' ಕಾಯ್ದೆಯಾಗಿ ಜಾರಿಗೆ ಬಂದ ನಂತರ, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವರ್ಗಗಳು, ಜಾತಿಗಳು, ಮತಗಳು, ಲಿಂಗ, ದೇಶ ಎಂಬ ತಾರತಮ್ಯ ಇಲ್ಲದೆ ಮುಕ್ತ ವಾತಾವರಣ ಇರಲಿದೆ. ಈ ಸಂಸ್ಥೆಗಳಲ್ಲಿನ ಪ್ರವೇಶವು ಜಾತಿ, ವರ್ಗ, ಮತ, ಲಿಂಗ ಅಥವಾ ದೇಶ ಎಂಬ ಬೇಧ ಇಲ್ಲದೆ ಎಲ್ಲರಿಗೂ ಮುಕ್ತವಾಗಿರುತ್ತದೆ. ಅರ್ಹತಾ ಪರೀಕ್ಷೆ-ಗಳಲ್ಲಿನ ಅಂಕಗಳ ಆಧಾರದಲ್ಲಿ ಎಲ್ಲಾ ಪ್ರವೇಶಾತಿ ನೀಡಲಾಗುವುದು ಎಂಬ ಉಲ್ಲೇಖ ಕರಡು ಮಸೂದೆಯಲ್ಲಿದೆ.

ಉನ್ನತ ಕಲಿಕಾ ಸಂಸ್ಥೆಗಳಲ್ಲಿ ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಧಾರ್ಮಿಕ ಅಲ್ಪ-ಸಂಖ್ಯಾತರಿಗೆ ಸೇರಿದ ವ್ಯಕ್ತಿಗಳನ್ನು ತಾರತಮ್ಯದಿಂದ ಕಾಣುವುದಕ್ಕೆ ಅವಕಾಶ ಇರುವುದಿಲ್ಲ. ಈ ನಿಯಮವನ್ನು ಉಲ್ಲಂಘಿಸಿದ ವ್ಯಕ್ತಿಗಳಿಗೆ ಒಂದು ವರ್ಷ ಜೈಲು ಶಿಕ್ಷೆ ಮತ್ತು ₹ 10 ಸಾವಿರ ದಂಡ ವಿಧಿಸಲು ಅವಕಾಶ ಕಲ್ಪಿಸುವ ಪ್ರಸ್ತಾವವಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ ನಡೆದರೆ ಸಂತ್ರಸ್ತ, ಸಂತ್ರಸ್ತನ ಪೋಷಕರು, ಸಹೋದರ, ಸಹೋದರಿ ಅಥವಾ ಆತನ ರಕ್ತಸಂಬಂಧಿ, ಮದುವೆ, ದತ್ತು ಅಥವಾ ಯಾವುದಾದರೂ ರೀತಿಯಲ್ಲಿ ಸಂಬಂಧ ಹೊಂದಿರುವ ಸಹೋದ್ಯೋಗಿ ದೂರು ನೀಡಲು ಅವಕಾಶ ದೊರಕಿಸಲು ಉದ್ದೇಶಿಸಲಾಗಿದೆ.

ಕರಡು ಮಸೂದೆಯಲ್ಲಿ ಏನಿದೆ?

- ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ತಾರತಮ್ಯ ಅಪರಾಧ
- ಸಂತ್ರಸ್ತರು, ಪೋಷಕರು, ರಕ್ತ ಸಂಬಂಧಿಗಳು ದೂರು ನೀಡಲು ಅವಕಾಶ
- ನಿಯಮ ಉಲ್ಲಂಘಿಸಿದರೆ ಒಂದು ವರ್ಷ ಜೈಲು, ₹10 ಸಾವಿರ ದಂಡ
- ಸಂತ್ರಸ್ತರಿಗೆ ಗರಿಷ್ಠ ₹1 ಲಕ್ಷವರೆಗೆ ಪರಿಹಾರ ನೀಡುವಂತೆ ಆರೋಪಿಗೆ ಕೋರ್ಟ್ ಆದೇಶಿಸಬಹುದು
- ಅಪರಾಧ ಮತ್ತೆ ಎಸಗಿ ಶಿಕ್ಷೆಗೊಳಗಾದರೆ ಕನಿಷ್ಠ 3 ವರ್ಷ ಜೈಲು, ₹1 ಲಕ್ಷ ದಂಡ
- ಈ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸುವ ಸಂಸ್ಥೆಗೆ ರಾಜ್ಯ ಸರ್ಕಾರದಿಂದ ಆರ್ಥಿಕ ನೆರವು, ಅನುದಾನ ಇಲ್ಲ



ರಾಜ್ಯದಲ್ಲಿ ರೋಹಿತ್ ವೇಮುಲ ಕಾಯ್ದೆ ಜಾರಿ ಅತ್ಯಂತ ಅವಶ್ಯಕ. ಈ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಚಿಂತನೆ ನಡೆಸುತ್ತಿದ್ದಾರೆ
ಎಚ್.ಕೆ. ಪಾಟೀಲ, ಕಾನೂನು ಸಚಿವ

ಅಲ್ಲದೆ, ಸಂತ್ರಸ್ತನಿಗೆ ಆರೋಪಿಯು ಸೂಕ್ತ ಪರಿಹಾರ ನೀಡುವಂತೆ ನ್ಯಾಯಾಲಯ ಅನುಮತಿಸಲು ಕೂಡಾ ಅವಕಾಶ ಇರಲಿದೆ. ಆ ಮೊತ್ತವು ಗರಿಷ್ಠ ₹1 ಲಕ್ಷದವರೆಗೆ ಮತ್ತು ಅದಕ್ಕೆ ಹೆಚ್ಚುವರಿಯಾಗಿ ಬಡ್ಡಿಯೂ ಇರಲಿದೆ. ಈ ಹಿಂದೆ ಅಪರಾಧ ಎಸಗಿದ ಕಾರಣಕ್ಕೆ ಶಿಕ್ಷೆಗೊಳಗಾದವರು ಮತ್ತೆ ಈ ಕಾಯ್ದೆಯಡಿ ಶಿಕ್ಷೆಗೆ ಒಳಗಾದರೆ, ಅಂಥವರಿಗೆ ಕನಿಷ್ಠ ಮೂರು ವರ್ಷಗಳ ಜೈಲು ಶಿಕ್ಷೆ ವಿಧಿಸಲು ಮತ್ತು ₹1 ಲಕ್ಷ ದಂಡ ವಿಧಿಸಬೇಕೆಂಬ ಪ್ರಸ್ತಾವವೂ ಮಸೂದೆಯಲ್ಲಿದೆ.

ಈ ಕಾಯ್ದೆಯಡಿ ಎಸಗುವ ಪ್ರತಿಯೊಂದು ಅಪರಾಧವು ಸಂಜ್ಞೇಯ ಮತ್ತು ಜಾಮೀನು ರಹಿತ ಎಂದು ಪರಿಗಣಿಸಲಾಗುವುದು. ಕಾಯ್ದೆಯ ನಿಯಮಗಳನ್ನು ಯಾವುದಾದರೂ ಸಂಸ್ಥೆ ಉಲ್ಲಂಘಿಸಿದರೆ, ಆ ಸಂಸ್ಥೆಯ ಹೊಣೆ ವಹಿಸಿಕೊಂಡಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಶಿಕ್ಷೆ ಮತ್ತು ದಂಡ ಪಾವತಿಸಲು ಬಾಧ್ಯಸ್ಥರಾಗಿರುತ್ತಾರೆ. ಯಾವುದೇ ಉನ್ನತ ಸಂಸ್ಥೆಯು ಈ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸಿದರೆ, ಸಂಸ್ಥೆಯ ವ್ಯವಹಾರಗಳ ಉಸ್ತುವಾರಿ ವಹಿಸಿರುವ ವ್ಯಕ್ತಿ ಅಥವಾ ವ್ಯಕ್ತಿಗಳು ಶಿಕ್ಷೆಗೆ ಗುರಿಯಾಗಲಿದ್ದಾರೆ. ಅಲ್ಲದೆ, ಈ ಕಾಯ್ದೆಯ ನಿಬಂಧನೆಗಳನ್ನು ಉಲ್ಲಂಘಿಸುವ ಸಂಸ್ಥೆಗೆ ರಾಜ್ಯ ಸರ್ಕಾರವು ಯಾವುದೇ ಆರ್ಥಿಕ ನೆರವು ಅಥವಾ ಅನುದಾನ ನೀಡಬಾರದು ಎಂದೂ ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

ಉದ್ದೇಶಿತ ಕಾಯ್ದೆಯಡಿ ಅಪರಾಧ ನಡೆದಿದ್ದರೆ, ಆ ಅಪರಾಧವನ್ನು ಎಸಗುವ ಪ್ರತಿಯೊಬ್ಬ ವ್ಯಕ್ತಿ ಮತ್ತು ಕೃತ್ಯ ಎಸಗಲು ಇನ್ನೊಬ್ಬರಿಗೆ ಸಹಾಯ ಮಾಡುವ ಅಥವಾ ಪ್ರಚೋದಿಸುವ ವ್ಯಕ್ತಿ ಕೂಡಾ ಅಪರಾಧದಲ್ಲಿ ಭಾಗವ-ಹಿಸಿದ್ದಾರೆಂದು ಪರಿಗಣಿಸಲಾಗುತ್ತದೆ. ಅಲ್ಲದೆ, 'ತಪ್ಪಿತಸ್ಥರು' ಎಂದು ಅವರೆ-ಲ್ಲರನ್ನೂ ಪರಿಗಣಿಸಲಾಗುತ್ತದೆ ಎಂದು ಮಸೂದೆಯಲ್ಲಿದೆ.

ಈ ಕಾಯ್ದೆಯ ಉದ್ದೇಶಗಳನ್ನು ಕಾರ್ಯಗತಗೊಳಿಸಲು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು ಎಂಬ ಅಂಶವೂ ಮಸೂದೆಯಲ್ಲಿದೆ.

ಅಪಘಾತ: ಗಾಯಾಳುಗಳನ್ನು ಆಸ್ಪತ್ರೆಗೆ ಸೇರಿಸಿದ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಸೊರಬ (ಶಿವಮೊಗ್ಗ ಜಿಲ್ಲೆ): ತಾಲ್ಲೂಕಿನ ಕುಪ್ಪಗಡ್ಡೆ ಗ್ರಾಮದಲ್ಲಿ ಸೋಮವಾರ ಕಾರು ಮತ್ತು ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಗಾಯ-ಗೊಂಡವರನ್ನು ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಅವರು ಉಪಚರಿಸಿ ತಮ್ಮ ವಾಹನದಲ್ಲಿ ಆಸ್ಪತ್ರೆಗೆ ಸಾಗಿಸಿದರು.

ಸಚಿವ ಮಧು ಬಂಗಾರಪ್ಪ ಅವರು ಹೊಸ-ನಗರದಲ್ಲಿ ನಿಗದಿಯಾಗಿದ್ದ ಜನಸ್ಪಂದನ ಸಭೆಗೆ ತೆರಳುವಾಗ ಮಾರ್ಗ ಮಧ್ಯೆ ಕಾರು ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿತ್ತು. ತಕ್ಷಣ ತಮ್ಮ ವಾಹನ ನಿಲ್ಲಿಸಿ ಗಮನಿಸಿದ ಸಚಿವರು, ಗಾಯಾಳುಗಳ ಸ್ಥಿತಿ ವಿಚಾರಿಸಿ, ಉಪಚರಿಸಿ ಆಸ್ಪತ್ರೆಗೆ ತೆರಳಲು ಆಂಬುಲೆನ್ಸ್ ಬರುವುದು ತಡವಾಗಬಹುದು ಎಂದು ತಮ್ಮ ವಾಹನವನ್ನೇ ಕಳಿಸಿದರಲ್ಲದೆ, ಸೂಕ್ತ ಚಿಕಿತ್ಸೆ ನೀಡುವಂತೆ ಸೊರಬ ತಾಲ್ಲೂಕು ಆಸ್ಪತ್ರೆ ವೈದ್ಯರಿಗೆ ಅಲ್ಲಿಂದಲೇ ಕರೆ ಮಾಡಿ ಸೂಚಿಸಿದರು.



ಮಧು ಬಂಗಾರಪ್ಪ

ತಾಲ್ಲೂಕಿನ ಗೆಂಡ್ಲ ಹೊಸೂರು ಗ್ರಾಮದ ಮೆಹಬೂಬ್ ಸಾಬ್ ಹಾಗೂ ಪ್ರಜ್ವಲ್ ಅವರು ಬೈಕ್‌ನಲ್ಲಿ ಹೋಗುತ್ತಿದ್ದಾಗ ಹಿಂಬದಿಯಿಂದ ಬಂದ ಕಾರು ಡಿಕ್ಕಿ ಹೊಡೆದಿತ್ತು.

ಗ್ರಾಮಸ್ಥರ ಬಳಿ ಮಾಹಿತಿ ಪಡೆದು, ಅಪಘಾತದ ನಂತರ ನಿಲ್ಲದೇ ಕಾರು ಸಮೇತ ತೆರಳಿದ ಚಾಲಕನ ಮಾಹಿತಿ ಪಡೆಯಲು ಪೊಲೀಸರಿಗೆ ಸೂಚನೆ ನೀಡಿದರು. ಆಪ್ತ ಸಹಾಯಕರೊಬ್ಬರನ್ನು ವಾಹನದಲ್ಲಿ ಕಳುಹಿಸಿ ಗಾಯಾಳುಗಳ ಆರೋಗ್ಯದ ಮಾಹಿತಿ ನೀಡುವಂತೆಯೂ ಹೇಳಿದರು.

ಪೊಲೀಸರು ಡಿಕ್ಕಿ ಹೊಡೆದಿದ್ದ ಕಾರನ್ನು ಮೈಸೂರಿನಲ್ಲಿ ಸಂಜೆ ಪತ್ತೆ ಮಾಡಿ ವಶಕ್ಕೆ ಪಡೆದಿದ್ದಾರೆ. ಗಾಯಾಳುಗಳ ಅಪಾಯದಿಂದ ಪಾರಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ.

ಓಂ ಪ್ರಕಾಶ್ ಪತ್ನಿ ಬಂಧನ

ಒಂದನೇ ಪುಟದಿಂದ...

ಪ್ರಕರಣದ ತನಿಖೆಯನ್ನು ಸಿಸಿಬಿಗೆ ವರ್ಗಾವಣೆ ಮಾಡಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶ ಹೊರಡಿಸಿದ್ದಾರೆ.

'ಮನೆಯಲ್ಲಿದ್ದ ಮೂರು ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಮೊಬೈಲ್‌ಗಳನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ರವಾನಿಸಲಾಗಿದೆ. ಮೊಬೈಲ್ ಹಾಗೂ ಚಾಕುವಿನ ಮೇಲೆ ಬಿದ್ದಿದ್ದ ಬೆರಳಚ್ಚು ಮಾದರಿಯನ್ನು ತಜ್ಞರು ಸಂಗ್ರಹಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಮಡಿವಾಳ ಎಸಿಪಿ ವಾಸುದೇವ್ ಅವರನ್ನು ತನಿಖಾಧಿಕಾರಿಯಾಗಿ ನೇಮಿಸಲಾಗಿತ್ತು. ಇಬ್ಬರನ್ನೂ ವಿಚಾರಣೆಗೆ ಒಳಪಡಿಸಿದಾಗ, ಆತ್ಮರಕ್ಷಣೆಗಾಗಿ ಕೊಲೆ ಮಾಡಿರುವುದಾಗಿ ಪಲ್ಲವಿ ಹೇಳಿಕೆ ನೀಡಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಓಂ ಪ್ರಕಾಶ್ ಅವರ ಮೇಲೆ ಖಾರದಪುಡಿ ಎರಚಿ, ಬಳಿಕ ಅಡುಗೆ ಎಣ್ಣೆಯನ್ನೂ ಸುರಿಯಲಾಗಿದೆ. ಕೈ-ಕಾಲು ಕಟ್ಟಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಲಾಗಿದೆ. ದೇಹದಲ್ಲಿ 10 ಕಡೆ ಇರಿದ ಗುರುತುಗಳು ಮರಣೋತ್ತರ ಪರೀಕ್ಷೆಯಲ್ಲಿ ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

ಎಫ್‌ಐಆರ್‌ನಲ್ಲಿ ಏನಿದೆ?: 'ತಂದೆ ಓಂ ಪ್ರಕಾಶ್ ಅವರಿಗೆ ತಾಯಿ ಪಲ್ಲವಿ ಒಂದು ವಾರದಿಂದ ಕೊಲೆ ಬೆದರಿಕೆ ಹಾಕುತ್ತಿದ್ದರು. ಇದರಿಂದ ಹೆದರಿದ ತಂದೆ, ಅವರ ಸಹೋದರಿ ಸರಿತಾ ಕುಮಾರಿ ಅವರ ಮನೆಯಲ್ಲಿ ವಾಸವಿದ್ದರು. ಎರಡು ದಿನಗಳ ಹಿಂದೆ ನನ್ನ ತಂಗಿ ಕೃತಿ ಹೋಗಿ ಮರಳಿ ಮನೆಗೆ ಬರುವಂತೆ ಪೀಡಿಸಿ ಕರೆದುಕೊಂಡು ಬಂದಿದ್ದರು' ಎಂಬ ದೂರು ಆಧರಿಸಿ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಭಾನುವಾರ ಸಂಜೆ (ಏಪ್ರಿಲ್ 20) ದೊಮ್ಮಲೂರಿನ ಕರ್ನಾಟಕ ಗಾಲ್ಫ್ ಅಸೋಸಿಯೇಷನ್‌ನಲ್ಲಿ ಇದ್ದಾಗ ಪಕ್ಕದ ಮನೆಯವರು ಕರೆ ಮಾಡಿ ನಿಮ್ಮ ತಂದೆಯವರ ದೇಹ ಕೆಳಗಡೆ ಬಿದ್ದಿದೆ ಎಂದು ಹೇಳಿದ್ದರು. ಮನೆಗೆ ಬಂದು ನೋಡಿದಾಗ ತಂದೆಯ ತಲೆ ಹಾಗೂ ಮೈತುಂಬ ಗಾಯಗಳಾಗಿದ್ದವು. ದೇಹದ ಪಕ್ಕದಲ್ಲೇ ಅವರಿಗೆ ಹೊಡೆದಿರುವ ಬಾಟಲ್‌ಗಳು ಹಾಗೂ ಚಾಕು ಇದ್ದವು. ತಾಯಿ ಹಾಗೂ ತಂಗಿ ಖಿನ್ನತೆಯಿಂದ ಬಳಲುತ್ತಿದ್ದು, ಪ್ರತಿನಿತ್ಯ ತಂದೆಯ ಜತೆಗೆ ಗಲಾಟೆ ಮಾಡುತ್ತಿದ್ದರು. ತಂದೆಯವರನ್ನು ಅವರೇ (ತಾಯಿ ಹಾಗೂ ತಂಗಿ) ಕೊಲೆ ಮಾಡಿರುವ ಶಂಕೆ ಇದೆ' ಎಂದು ದೂರಿನಲ್ಲಿ ವಿವರಿಸಲಾಗಿದೆ.

ಮೀನು ಊಟ ಮಾಡುವಾಗಲೇ ಹತ್ಯೆ: 'ಭಾನುವಾರ ಮಧ್ಯಾಹ್ನ ಓಂ ಪ್ರಕಾಶ್ ಅವರು ಊಟ ಮಾಡುತ್ತಿದ್ದರು. ಹೋಟೆಲ್‌ನಿಂದ ಮೀನು ಫ್ರೈ ತರಿಸಿಕೊಂಡಿದ್ದರು. ಅದೇ ವೇಳೆ ಗಲಾಟೆ ವಿಕೋಪಕ್ಕೆ ತಿರುಗಿ ಹತ್ಯೆ ಮಾಡಲಾಗಿದೆ. ಚಾಕು ಹಾಗೂ ಸ್ಕ್ರೂಡ್ರೈವರ್‌ನಿಂದ ಇರಿತಕ್ಕೆ ಒಳಗಾದ ಓಂ ಪ್ರಕಾಶ್ ಅವರು 15 ನಿಮಿಷ ರಕ್ತದ ಮಡುವಿನಲ್ಲಿ ಬಿದ್ದು, ಒದ್ದಾಡುತ್ತಿದ್ದರು. ಪಲ್ಲವಿ ಅವರು ಪತಿ ಮೃತಪಟ್ಟಿರುವುದನ್ನು ಖಚಿತ ಪಡಿಸಿಕೊಂಡು ಮೂರನೇ ಮಹಡಿಗೆ ತೆರಳಿ ಬಾಗಿಲು ಹಾಕಿಕೊಂಡಿದ್ದರು. ನಂತರ, ಐಪಿಎಸ್ ಅಧಿಕಾರಿಯ ಪತ್ನಿ, ಪೊಲೀಸ್ ಸಹಾಯವಾಣಿಗೆ ಕರೆ ಮಾಡಿ ಮಾಹಿತಿ ನೀಡಿದ್ದರು' ಎಂದು ಮೂಲಗಳು ಹೇಳಿವೆ.

'ಜೀವ ಉಳಿಸಿಕೊಳ್ಳಲು ಹೋರಾಟ': 'ಪದೇ ಪದೇ ಗನ್ ತೋರಿಸಿ ನನಗೆ ಹಾಗೂ ಪುತ್ರಿಗೆ ಬೆದರಿಕೆ ಹಾಕುತ್ತಿದ್ದರು. ಶೂಟ್ ಮಾಡುವುದಾಗಿ ಹೇಳುತ್ತಿದ್ದರು. ಒಂದು ವಾರದಿಂದ ಈಚೆಗೆ ಮನೆಯಲ್ಲಿ ಜಗಳ ವಿಕೋಪಕ್ಕೆ ತಿರುಗಿತ್ತು. ಭಾನುವಾರ ಬೆಳಿಗ್ಗೆಯಿಂದಲೂ ಬೇರೆ ಬೇರೆ ವಿಚಾರಕ್ಕೆ ವಾಗ್ವಾದ ನಡೆದಿತ್ತು. ನಮ್ಮನ್ನೇ ಕೊಲೆ ಮಾಡಲು ಓಂ ಪ್ರಕಾಶ್ ಯತ್ನಿಸಿದ್ದರು. ನಮ್ಮ ಜೀವ ಉಳಿಸಿಕೊಳ್ಳಲು ನಾವು ಹೋರಾಟ ಮಾಡಿದೆವು' ಎಂಬುದಾಗಿ ಪಲ್ಲವಿ ತನಿಖಾಧಿಕಾರಿಗಳ ಎದುರು ಹೇಳಿಕೆ ನೀಡಿದ್ದಾರೆ ಎಂದು ಗೊತ್ತಾಗಿದೆ.

'ಪಲ್ಲವಿ ಅವರು ಹಲವು ದಿನಗಳಿಂದ ಸಂಚು ರೂಪಿಸಿ ಕೊಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ನಾಗೋಡ ಗ್ರಾಮದಲ್ಲಿ ಓಂ ಪ್ರಕಾಶ್ ಅವರಿಗೆ ಸೇರಿರುವ ಫಾರ್ಮ್ ಹೌಸ್

ಕಾಳಿ ನದಿ ಅಂಚಿನಲ್ಲಿ ಜಮೀನು ಖರೀದಿ

ಕಾರವಾರ: ಓಂ ಪ್ರಕಾಶ್ ಅವರು 1996–98ರಲ್ಲಿ ಉತ್ತರ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದಾಗ ಜೊಯಿಡಾ ತಾಲ್ಲೂಕಿನಲ್ಲಿ ದಟ್ಟ ಕಾಡಿನ ನಡುವೆ, ಕಾಳಿ ನದಿಯ ಅಂಚಿನಲ್ಲಿ ಹತ್ತಾರು ಎಕರೆ ಜಮೀನು ಖರೀದಿಸಿದ್ದರು. ಈ ಜಾಗದಲ್ಲಿ ಬಹುಪಾಲು ಆಸ್ತಿ ಅವರ ಪುತ್ರ ಕಾರ್ತಿಕೇಶ್ ಹೆಸರಿನಲ್ಲಿದೆ.

ಜೊಯಿಡಾದ ಬಾಡಗುಂದ ಗ್ರಾಮದ ಸರ್ವೆ ನಂಬರ್ 10ರಲ್ಲಿ ಸುಮಾರು 5 ಎಕರೆ ಜಮೀನು ಹೊಂದಿದ್ದು, ಸದ್ಯ ಈ ಜಾಗವನ್ನು ಖಾಸಗಿ ರೆಸಾರ್ಟ್‌ವೊಂದಕ್ಕೆ ರಿವರ್ ರ‍್ಯಾಫ್ಟಿಂಗ್ ಚಟುವಟಿಕೆ ನಡೆಸಲು ಗುತ್ತಿಗೆಗೆ ನೀಡಲಾಗಿದೆ. ನಾಗೋಡಾ ಗ್ರಾಮದಲ್ಲಿ 2.5 ಎಕರೆ ಜಾಗವಿದ್ದು, ಅಲ್ಲಿ ಫಾರ್ಮ್ ಹೌಸ್ ಇದೆ. ಅದರ ಪಕ್ಕದಲ್ಲೇ ಶ್ರೀಗಂಧ, ಬಾಳೆ, ವಿವಿಧ ಹಣ್ಣಿನ ಗಿಡಗಳ ತೋಟ ನಿರ್ಮಿಸಲಾಗಿದೆ. ಇವೆರಡೂ ಜಮೀನು ಅವರ ಪುತ್ರನ ಹೆಸರಿನಲ್ಲಿವೆ.

'ನಾಗೋಡಾದಲ್ಲಿ ಕಟ್ಟಿಸಿದ್ದ ಫಾರ್ಮ್ ಹೌಸ್‌ಗೆ ಓಂ ಪ್ರಕಾಶ್ ಅವರು ಆಗಾಗ ಭೇಟಿ ನೀಡುತ್ತಿದ್ದರು. ಆದರೆ, ಸ್ಥಳೀಯರೊಂದಿಗೆ ಯಾವುದೇ ಸಂಪರ್ಕ ಇಟ್ಟು-ಕೊಂಡಿರಲಿಲ್ಲ. ಅವರು ಜಮೀನು ಖರೀದಿಸಿದ್ದ ವೇಳೆ ಇಲ್ಲಿ ಕಡಿಮೆ ದರ ಇತ್ತು. ಈಗ ಆ ಜಮೀನುಗಳು ಕೋಟ್ಯಂತರ ರೂಪಾಯಿ ಬೆಲೆ ಬಾಳುತ್ತವೆ' ಎಂದು ಪ್ರವಾಸೋದ್ಯಮಿಯೊಬ್ಬರು ತಿಳಿಸಿದರು.

'ಓಂ ಪ್ರಕಾಶ್ ಅವರಿಗೆ ಪರಿಸರ ಕಾಳಜಿ ಹೆಚ್ಚಿತ್ತು. ಈ ಉದ್ದೇಶಕ್ಕಾಗಿಯೇ ಅವರು ಜೊಯಿಡಾದಲ್ಲಿ ಜಾಗ ಖರೀದಿಸಿದ್ದರು. ಅಲ್ಲಿನ ಪರಿಸರವನ್ನು ಅವರು ಹೆಚ್ಚು ಇಷ್ಟಪಡುತ್ತಿದ್ದರು' ಎಂದು ನಿವೃತ್ತ ಪೊಲೀಸ್ ಅಧಿಕಾರಿ, ಓಂ ಪ್ರಕಾಶ್ ಅವರ ಒಡನಾಡಿ ಎನ್.ಟಿ.ಪ್ರಮೋದ ರಾವ್ ಪ್ರತಿಕ್ರಿಯಿಸಿದರು.

ವಾಟ್ಸ್‌ಆ್ಯಪ್‌ನಲ್ಲಿ ಪಲ್ಲವಿ ಹಾಕಿದ್ದ ಬರಹ

ಐಪಿಎಸ್ ಅಧಿಕಾರಿಗಳು, ಅವರ ಪತ್ನಿಯರು ಹಾಗೂ ಸಂಬಂಧಿಕರಿದ್ದ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಪಲ್ಲವಿ ಅವರು ಕೆಲವು ದಿನಗಳ ಹಿಂದೆ ಪತಿ ಓಂ ಪ್ರಕಾಶ್ ಅವರ ಕುರಿತು ಬರಹವೊಂದನ್ನು ಹಾಕಿದ್ದರು. ಅದರ ವಿವರ ಇಲ್ಲಿದೆ.

'ಈ ಗ್ರೂಪ್‌ನಲ್ಲಿರುವ ಅಧಿಕಾರಿಗಳು ಹಾಗೂ ಇತರರ ಗಮನಕ್ಕೆ. ನೀವು ತುರ್ತು ಗಮನ ಕೈಗೊಳ್ಳಬೇಕು. ನೀವು ಮಾನವೀಯತೆ ಉಳ್ಳವರಾಗಿದ್ದರೆ ಈ ಸಂದೇಶವನ್ನು ಆದಷ್ಟು ಜನರಿಗೆ ತಲುಪಿಸಿ. ಇದು ಕೌಟುಂಬಿಕ ವಿಚಾರವೇ ಆಗಿರಬಹುದು. ಆದರೆ, ಸತ್ಯ ಏನೆಂದರೆ ನನ್ನ ಗಂಡನ ನಡೆಯ ಬಗ್ಗೆ ಹೇಳಲೇಬೇಕು. ನನ್ನ ಪತಿ ಡಿಜಿ ಆಗಿದ್ದಾಗ ಪ್ರತಿ 15 ದಿನಕ್ಕೊಮ್ಮೆ ಒಬ್ಬ ಪೊಲೀಸ್ ಸಿಬ್ಬಂದಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರು. ಮಾನಸಿಕ ಕಾಯಿಲೆಯಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ಉಲ್ಲೇಖಿಸಲಾಗುತ್ತಿತ್ತು. ಓಂ ಪ್ರಕಾಶ್ ಬಳಿ ರಿವಾಲ್ವರ್ ಇದೆ. ಅದನ್ನು ತಕ್ಷಣವೇ ಜಪ್ತಿ ಮಾಡಬೇಕು. ಈ ಸಂದೇಶ ಅಳಿಸಿ ಹೋಗುವ ಮುನ್ನ ಅಥವಾ ನನ್ನ ಮೊಬೈಲ್ ಹ್ಯಾಕ್ ಮಾಡುವ ಮೊದಲು ಸೇವ್ ಮಾಡಿಕೊಳ್ಳಿ.

'ಪ್ರತ್ಯೇಕವಾಗಿ ಬದುಕುವಂತೆ ಹಲವು ಬಾರಿ ಮನವಿ ಮಾಡಿದ್ದೆ. ಬೇರೆ ಸ್ಥಳಕ್ಕೆ ಹೋದಾಗ ನನಗೆ ಕೊಡುವ ಆಹಾರ, ನೀರಿನಲ್ಲಿ ವಿಷ ಬೆರೆಸಲಾಗಿತ್ತು. ವಿಷ ಬೆರೆಸಲು ಕೆಲಸದವರನ್ನೂ ನೇಮಿಸಿಕೊಂಡಿದ್ದಾರೆ. ನನ್ನ ಮಗಳು ಅಸ್ವಸ್ಥಗೊಂ-ಡಿದ್ದಾಳೆ. ಹೊರಗಿನಿಂದ ತರಿಸಿದ ಆಹಾರ ಪದಾರ್ಥದಲ್ಲೂ ವಿಷ ಬೆರೆಸುತ್ತಿದ್ದರು. ಅವನ ಸಾಮ್ರಾಜ್ಯ ದೊಡ್ಡದಿದೆ. ಆತ ಪಿಎಫ್‌ಐ ಸದಸ್ಯನೂ ಹೌದು. ಮಗಳಿಗೆ ಆರೋಗ್ಯ ಸರಿಯಿಲ್ಲ. ನನ್ನ ಮಗಳು ಧ್ವನಿ ಎತ್ತಲು ಆರಂಭಿಸಿದಾಗ ಈ ರೀತಿಯ ಕಿರುಕುಳ ಆರಂಭವಾಗಿದೆ. ಕನಿಷ್ಠ ಅಜಿತ್ ಡೊಭಾಲ್ ಗಮನಕ್ಕೆ ತನ್ನಿ. ಈತನಿಗೆ ಶಸ್ತ್ರಾಸ್ತ್ರ, ಹಣ ಎಲ್ಲಿಂದ ಬಂತು ಎಂಬುದು ಎಲ್ಲರಿಗೂ ಗೊತ್ತಾಗಲಿ. ಇದು ರನ್ಯಾ ರಾವ್ ಪ್ರಕರಣಕ್ಕಿಂತಲೂ ಗಂಭೀರವಾದದ್ದು.

'ಸಂಶಯ ಬಾರದಂತೆ ಚುಚ್ಚುಮದ್ದು ನೀಡಲಾಗಿದೆ. ವಿಷಪ್ರಾಶನದಿಂದ ಮೂತ್ರಪಿಂಡಕ್ಕೆ ಹಾನಿಯಾಗಿದೆ. ಮನೆಯಲ್ಲೇ ತುಪ್ಪ ಹಾಗೂ ನಿಂಬೆಹಣ್ಣು ಸೇವಿಸಿ ವಿಷ ಹೊರಹಾಕುವ ಕೆಲಸ ಮಾಡುತ್ತಿದ್ದೇನೆ. ಬಹಳ ವರ್ಷದಿಂದ ಮಸ್ತಾನ್ ಎಂಬ ವ್ಯಕ್ತಿ ನನ್ನ ಮೇಲೆ ಪ್ರಯೋಗ ಮಾಡುತ್ತಿದ್ದ. ಸಾಧ್ಯವಾದರೆ ಅಶೋಕನಗರ ವಸತಿಗೃಹದಲ್ಲಿ ಡಿಜಿ ಅವರು ನನಗೆ ಮನೆ ಕೊಡಿಸಲಿ. ಅಲ್ಲಿ ನಾನು ಸುರಕ್ಷಿತವಾಗಿ ಇರಬಹುದು.

'ಕಾನ್‌ಸ್ಟೆಬಲ್‌ಗಳು ಸಹ ಸುಲಭವಾಗಿ ಲಂಚದ ಬಲೆಗೆ ಬೀಳುತ್ತಾರೆ. ನಾನು ವಾಯುವಿಹಾರ ನಡೆಸುತ್ತಿದ್ದ ವೇಳೆ ವ್ಯಕ್ತಿಯೊಬ್ಬ ಪೊಟ್ಟಣವೊಂದನ್ನು ನನ್ನ ಮೇಲೆ ಎಸೆದಿದ್ದ. ದೇಹದಲ್ಲಿ ಉರಿ ಕಾಣಿಸಿಕೊಳ್ಳುವ ತನಕ ಗೊತ್ತೇ ಆಗಿರಲಿಲ್ಲ'.




ಸುಭಾಷಿತ

ಹಣ್ಣು ಬಿಟ್ಟಿರುವ ಮರಗಳು ಬಗ್ಗುತ್ತವೆ. ಹಾಗೆಯೇ ತಿಳಿವಳಿಕೆಯುಳ್ಳ ಜನರೂ ಬಾಗುತ್ತಾರೆ.

–ವ್ಯಾಸ ಮಹರ್ಷಿ

ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯ ನಿವಾರಣೆ ಮನಃಸ್ಥಿತಿಯ ಬದಲಾವಣೆಯೇ ಮುಖ್ಯ

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಸಲಹೆಯಂತೆ ರೋಹಿತ್ ವೇಮುಲ ಮಸೂದೆ ರೂಪಿಸಿ ಜಾರಿಗೆ ತರಲು ಬದ್ಧ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ದಲಿತರು ಮತ್ತು ಶೋಷಣೆಗೆ ಒಳಗಾದ ಸಮುದಾಯಗಳ ವಿದ್ಯಾರ್ಥಿಗಳು ಶಿಕ್ಷಣ ಸಂಸ್ಥೆಗಳಲ್ಲಿ ಕಿರುಕುಳ ಮತ್ತು ತಾರತಮ್ಯಕ್ಕೆ ಒಳಗಾಗುವುದನ್ನು ತಡೆಯುವುದು ಇದರ ಉದ್ದೇಶ. ಸಾಮಾಜಿಕ ನ್ಯಾಯಕ್ಕೆ ಸಂಬಂಧಿಸಿ ಕಾಯ್ದೆಗಳನ್ನು ರೂಪಿಸುವುದರಲ್ಲಿ ಕರ್ನಾಟಕ ಸದಾ ಮುಂಚೂಣಿಯಲ್ಲಿ ಇದೆ. ರೋಹಿತ್ ವೇಮುಲ ಕಾಯ್ದೆಯ ಮೂಲಕವೂ ರಾಜ್ಯವು ಮಾದರಿ ಹಾಕಿಕೊಡಬಹುದು. ಇದೊಂದು ಸ್ವಾಗತಾರ್ಹ ಹೆಜ್ಜೆ. ಹೈದರಾಬಾದ್ ವಿಶ್ವವಿದ್ಯಾಲಯದಲ್ಲಿ ಪಿಎಚ್.ಡಿ ಅಧ್ಯಯನ ಮಾಡುತ್ತಿದ್ದ 26 ವರ್ಷ ವಯಸ್ಸಿನ ರೋಹಿತ್ ವೇಮುಲ ಎಂಬ ಶೋಷಿತ ಸಮುದಾಯದ ವಿದ್ಯಾರ್ಥಿ 2016ರಲ್ಲಿ ಆತ್ಮಹತ್ಯೆ ಮಾಡಿಕೊಂಡರು. ವಿಶ್ವವಿದ್ಯಾಲಯದಲ್ಲಿ ತಾರತಮ್ಯ ಆಗುತ್ತಿದೆ ಎಂಬುದು ಅವರ ಆತ್ಮಹತ್ಯೆಗೆ ಕಾರಣವಾಗಿತ್ತು. ಇದು ಇಂತಹ ಏಕೈಕ ನಿದರ್ಶನವೇನೂ ಅಲ್ಲ. ಐಐಟಿ, ಐಐಎಂ, ವೈದ್ಯಕೀಯ ಕಾಲೇಜುಗಳಂತಹ ಶಿಕ್ಷಣ ಸಂಸ್ಥೆಗಳಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವವರಲ್ಲಿ ಹೆಚ್ಚಿನವರು ದಲಿತ ಮತ್ತು ಶೋಷಣೆಗೆ ಒಳಗಾದ ಇತರ ಸಮುದಾಯದವರು ಎಂದು ಸರ್ಕಾರವು ಸಂಸತ್ತಿಗೆ ಈ ಹಿಂದೆ ಹೇಳಿತ್ತು. ಕೇಂದ್ರೀಯ ವಿಶ್ವವಿದ್ಯಾಲಯಗಳು ಮತ್ತು ಸರ್ಕಾರದ ಇತರ ಉನ್ನತ ಶಿಕ್ಷಣ ಸಂಸ್ಥೆಗಳಿಂದ 2023ಕ್ಕಿಂತ ಹಿಂದಿನ ಐದು ವರ್ಷಗಳಲ್ಲಿ 19 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಮಧ್ಯದಲ್ಲಿಯೇ ಬಿಟ್ಟುಹೋಗಿದ್ದಾರೆ. ಸಮಸ್ಯೆ ಎಷ್ಟು ಗಂಭೀರವಿದೆ ಎಂಬುದನ್ನು ಇದು ತೋರಿಸುತ್ತದೆ.



ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯದ ಮೇಲೆ ನಿಗಾ ಇರಿಸುವುದಕ್ಕೆ ಪ್ರತ್ಯೇಕವಾದ ವ್ಯವಸ್ಥೆಯನ್ನು ರೂಪಿಸಬೇಕಿದೆ

ದಲಿತರು ಮತ್ತು ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸಂವಿಧಾನದ ರಕ್ಷಣೆ ಇದೆ. ಹಾಗಿದ್ದರೂ ಶಿಕ್ಷಣ ಸಂಸ್ಥೆಗಳಲ್ಲಿ ಜಾತಿ ಆಧಾರದ ತಾರತಮ್ಯವು ಆಳವಾಗಿ ಬೇರುಬಿಟ್ಟಿದೆ. ನಮ್ಮ ಸಂವಿಧಾನ ಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರು ಕೂಡ ಶಿಕ್ಷಣ ಸಂಸ್ಥೆಗಳಲ್ಲಿ ಅವಮಾನ ಮತ್ತು ತಾರತಮ್ಯಕ್ಕೆ ಒಳಗಾಗಿದ್ದರು. ಈಗ, ಒಂದು ಶತಮಾನದ ಬಳಿಕವೂ ಹೆಚ್ಚಿನ ಸುಧಾರಣೆ ಆಗಿಲ್ಲ. ದಲಿತ ವಿದ್ಯಾರ್ಥಿಗಳು ಎದುರಿಸುತ್ತಿರುವ ಅವಮಾನ ಮತ್ತು ತಾರತಮ್ಯವನ್ನು ಪ್ರೊ. ಸುಖದೇವ್ ತೋರಟ್ (2007) ಮತ್ತು ಮುಂಗೇಕರ್ (2012) ಸಮಿತಿಗಳ ವರದಿಗಳಲ್ಲಿ ದಾಖಲಿಸಲಾಗಿದೆ. ಅವರನ್ನು ಜಾತಿಯ ಹೆಸರು ಹಿಡಿದು ಕರೆಯಲಾಗುತ್ತದೆ. ಶೈಕ್ಷಣಿಕವಾಗಿ ಮೂಲೆಗುಂಪು ಮಾಡಲಾಗುತ್ತದೆ. ಫೆಲೋಶಿಪ್‌ನಂತಹ ಸೌಲಭ್ಯಗಳು ದೊರೆಯದಂತೆ ಮಾಡಲಾಗುತ್ತದೆ. ತಮ್ಮ ಹಕ್ಕುಗಳಿಗಾಗಿ ಅವರು ಹೋರಾಡಬೇಕಾಗುತ್ತದೆ. ಹಾಸ್ಟೆಲ್‌ಗಳಲ್ಲಿ ಜಾತಿಯ ಆಧಾರದಲ್ಲಿ ಅವರನ್ನು ಪ್ರತ್ಯೇಕಿಸಲಾಗುತ್ತದೆ. ಇದು ಶಿಕ್ಷಣ ಸಂಸ್ಥೆಗಳಲ್ಲಿ ಇರುವ ಆಧುನಿಕ ಯುಗದ ಅಸ್ಪೃಶ್ಯತೆಯಾಗಿದೆ. ಇಂತಹ ತಾರತಮ್ಯದಿಂದ ರಕ್ಷಿಸುವುದಕ್ಕಾಗಿ ಯುಜಿಸಿ 'ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಸಮಾನತೆಗೆ ಉತ್ತೇಜನ' ಎಂಬ ಮಾರ್ಗಸೂಚಿಯನ್ನು ರೂಪಿಸಿದೆ. ಆದರೆ, ಇದು ಜಾರಿಯಾಗಿದ್ದು ಬಹಳ ಕಡಿಮೆ. ಮಾರ್ಗಸೂಚಿಯಲ್ಲಿ ಸೂಚಿಸಿರುವ ತಾರತಮ್ಯ ತಡೆ ಅಧಿಕಾರಿಗಳಿಗೆ ವಾಸ್ತವದಲ್ಲಿ ಯಾವ ಅಧಿಕಾರವೂ ಇಲ್ಲ. ಮೀಸಲಾತಿ ಅಡಿಯಲ್ಲಿ ಸೇರ್ಪಡೆಯಾಗುವ ವಿದ್ಯಾರ್ಥಿಗಳನ್ನು ಕಳಂಕಿತರಂತೆ ನೋಡಲಾಗುತ್ತದೆ. ಅವರನ್ನು 'ಕೋಟಾ ವಿದ್ಯಾರ್ಥಿ'ಗಳು ಎಂದು ಅಣಕ ಮಾಡಲಾಗುತ್ತದೆ. ವಿದ್ಯಾರ್ಥಿವೇತನ ಬಿಡುಗಡೆ ಮಾಡುವುದರಲ್ಲಿ ವಿಳಂಬ ಧೋರಣೆ ಅನುಸರಿಸಲಾಗುತ್ತದೆ. ಐಐಟಿ– ಬಾಂಬೆಯ ಪರಿಶಿಷ್ಟ ಜಾತಿ–ಪಂಗಡಗಳ ಘಟಕವು 2022ರಲ್ಲಿ ಸಮೀಕ್ಷೆಯೊಂದನ್ನು ಮಾಡಿತ್ತು. ಈ ಸಮುದಾಯಗಳ ಶೇ 20ರಷ್ಟು ವಿದ್ಯಾರ್ಥಿಗಳು ಆತ್ಮಹತ್ಯೆ ಕುರಿತು ಯೋಚನೆ ಮಾಡಿದ್ದರು ಎಂಬುದನ್ನು ಸಮೀಕ್ಷೆಯು ಹೇಳಿದೆ.

ರೋಹಿತ್ ವೇಮುಲ ಕಾಯ್ದೆಯು ಅಗತ್ಯವಾಗಿ ಬೇಕಾಗಿರುವ ಕ್ರಮ. ಆದರೆ, ಅದಷ್ಟೇ ಸಾಲದು. ನಿಜವಾದ ಸುಧಾರಣೆಯು ಪ್ರಾಥಮಿಕ ಶಾಲೆ, ಪ್ರೌಢಶಾಲೆಗಳಿಂದಲೇ ಆರಂಭಗೊಳ್ಳಬೇಕು. ಅಲ್ಲಿ ದಲಿತ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಸಿಗುವುದಿಲ್ಲ. ಉನ್ನತ ಶಿಕ್ಷಣಕ್ಕೆ ಬಂದಾಗ ಅವರ ಆತ್ಮವಿಶ್ವಾಸ ಕುಂದುವಂತೆ ಇದು ಮಾಡುತ್ತದೆ. ಶಿಕ್ಷಣ ಸಂಸ್ಥೆಗಳಲ್ಲಿ ತಾರತಮ್ಯದ ಮೇಲೆ ನಿಗಾ ಇರಿಸುವುದಕ್ಕೆ ಪ್ರತ್ಯೇಕವಾದ ವ್ಯವಸ್ಥೆಯನ್ನು ರೂಪಿಸಬೇಕಿದೆ. ಸಮಾಜದ ಮನಃಸ್ಥಿತಿಯಲ್ಲಿ ಆಮೂಲಾಗ್ರವಾದ ಬದಲಾವಣೆ ಆಗಬೇಕಿದೆ. ಶಿಕ್ಷಣ ಸಂಸ್ಥೆಗಳು ಸಮಾನತೆಯ ದೇಗುಲಗಳಾಗಬೇಕೇ ವಿನಾ ದಮನ ಕೇಂದ್ರಗಳಲ್ಲ. ಶತಮಾನಗಳಿಂದ ಇರುವ ಜಾತಿ ಆಧಾರಿತ ತಾರತಮ್ಯವನ್ನು ಒಂದು ಕಾಯ್ದೆ ರೂಪಿಸುವ ಮೂಲಕ ಸರಿಪಡಿಸಲು ಸಾಧ್ಯವಿಲ್ಲ. ಎಲ್ಲ ಸೌಲಭ್ಯಗಳನ್ನು ಪಡೆದುಕೊಂಡು ಬಂದಿರುವ ಪ್ರಬಲ ಜಾತಿಗಳ ಜನ ತಾರತಮ್ಯದಲ್ಲಿ ತಮ್ಮ ಪಾತ್ರ ಏನು ಎಂಬುದನ್ನು ಮನಗಾಣಬೇಕು. ತಾರತಮ್ಯವನ್ನು ನಿರ್ಮೂಲನೆ ಮಾಡಲು ಶ್ರಮಿಸಬೇಕು. ಕರ್ನಾಟಕವು ಈಗ ಈ ಕಾಯ್ದೆ ರೂಪಿಸುವ ಕುರಿತು ಯೋಚಿಸುತ್ತಿದೆ. ಆದರೆ, ಒಂದು ವಿಚಾರ ನೆನಪಿನಲ್ಲಿ ಇರಿಸಬೇಕು: ಬದಲಾವಣೆಗೆ ಕಾನೂನು ಮುನ್ನುಡಿ ಮಾತ್ರ. ಸಾಮೂಹಿಕ ಸಾಕ್ಷಿಪ್ರಜ್ಞೆ, ಸಹಾನುಭೂತಿ ಇದ್ದಾಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ. ಮನಃಸ್ಥಿತಿಯ ಬದಲಾವಣೆಯೇ ಇಲ್ಲಿ ಎಲ್ಲಕ್ಕಿಂತ ಮುಖ್ಯವಾದುದು.

ದಿನದ ಟ್ವೀಟ್

ಇಂತಹ ಅಸೂಕ್ಷ್ಮ ನಡವಳಿಕೆ ತರವೇ?




ಅಂತಹ ದುರಂತವನ್ನು ಮದುವೆಯಲ್ಲಿ ಒಂದು ಹಾಸ್ಯದ ಸನ್ನಿವೇಶದಂತೆ ಬಳಸಿಕೊಂಡದ್ದು ಅಸೂಕ್ಷ್ಮವಾದ ನಡವಳಿಕೆ ಮಾತ್ರವಲ್ಲ ಅಮಾನವೀಯ ಸಹ. ಆ ಸಂತ್ರಸ್ತ ಕುಟುಂಬದವರು, ಅದರಲ್ಲೂ ಪುಟ್ಟ ಮಗಳು ಅನುಭವಿಸಿದ ಆಘಾತ, ಜೀವನದುದ್ದಕ್ಕೂ ಒಂದು ಭಯಾನಕ ನೆನಪಾಗಿ ಅವರನ್ನು ಕಾಡುತ್ತದೆ. ಅತ್ಯಂತ ಆಘಾತಕಾರಿಯಾದ ಮತ್ತು ನೋವಿನಿಂದ ಕೂಡಿದ ವಿಷಯವನ್ನು ಜನ ಹೀಗೆ ಅಣಕಿಸುವುದನ್ನು ನೋಡಲು ದುಃಖವಾಗುತ್ತದೆ.

(ಮೀರಟ್‌ನಲ್ಲಿ ಮಹಿಳೆಯೊಬ್ಬಳು ಪ್ರಿಯಕರನೊಂದಿಗೆ ಸೇರಿ ಪತಿಯನ್ನು ಕೊಂದು, ಶವವನ್ನು ಡ್ರಮ್‌ನಲ್ಲಿ ತುಂಬಿಸಿಟ್ಟಿದ್ದ ಪ್ರಕರಣವನ್ನು ಆಧರಿಸಿ, ವಿವಾಹದ ಸಂದರ್ಭದಲ್ಲಿ ಯುವ ಜೋಡಿಗೆ ಡ್ರಮ್ ಅನ್ನು ಕೊಡುಗೆಯಾಗಿ ನೀಡಿ ತಮಾಷೆ ಮಾಡಿದ ಸ್ನೇಹಿತರ ನಡೆಗೆ ಪ್ರತಿಕ್ರಿಯೆ)

ಪಂಕಜ್ ಪಂತ್

ಕಿಡಿನುಡಿ



ಲಕ್ಷಾಂತರ ಶಿಕ್ಷಕರಿಂದ ಜಾತಿ ಜನಗಣತಿ ಮಾಡಿಸಲಾಗಿದೆ. ಮೋಸ ಮಾಡಿ ಎಂದು ಎಲ್ಲರಿಗೂ ಮುಖ್ಯಮಂತ್ರಿ ಹೇಳಲಾಗುತ್ತದೆಯೇ? ಆಧಾರವಿಲ್ಲದೆ ಅವರ ಮೇಲೆ ಗೂಬೆ ಕೂರಿಸುವುದು ತಪ್ಪು.

ಯತೀಂದ್ರ ಸಿದ್ದರಾಮಯ್ಯ, ವಿಧಾನಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಶನಿವಾರ, 22-4-2000

● **ಪಂಪ್‌ಸೆಟ್ ಸಕ್ರಮ: ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂ ನಷ್ಟ**

ಬೆಂಗಳೂರು, ಏ. 21– ಕೃಷ್ಣಾ ಮೇಲ್ದಂಡೆ ಯೋಜನೆಯ ಅಡಿಯಲ್ಲಿ ಮುಳುಗಡೆಯಾಗಲಿರುವ ಭೂಮಿಗೆ ಹೆಚ್ಚು ಪರಿಹಾರ ಪಡೆಯುವ ದುರುದ್ದೇಶದಿಂದ ಒಣ ಭೂಮಿಯನ್ನು ನೀರಾವರಿ ಭೂಮಿ ಎಂದು ಪರಿಗಣಿಸುವ ದಾಖಲೆಗಳನ್ನು ಸೃಷ್ಟಿಸಿ, ಸರ್ಕಾರದಿಂದ ಕೋಟ್ಯಂತರ ರೂ ಹೆಚ್ಚು ಪರಿಹಾರ ಪಡೆಯಲು ಅರ್ಹವಾದ ಪ್ರಕರಣಗಳು ಬೆಳಕಿಗೆ ಬಂದಿವೆ.

'ಈ ಪ್ರಕರಣದಲ್ಲಿ ವಿದ್ಯುತ್ ಮಂಡಳಿ ಮತ್ತು ಭೂ ಸ್ವಾಧೀನ ಇಲಾಖೆ ಶಾಮೀಲಾಗಿವೆ' ಎಂದು ಕೃಷ್ಣಾ ಯೋಜನೆಯ ಪುನರ್ವಸತಿ ಆಯುಕ್ತರು ವಿದ್ಯುತ್ ಮಂಡಳಿಗೆ ಬರೆದಿರುವ ಪತ್ರದಲ್ಲಿ ಆರೋಪಿಸಿದ್ದಾರೆ.

● **ಸಾಹಸಿ ಯುವಕರಿಗೆ ಸನ್ಮಾನ**

ಬೆಂಗಳೂರು, ಏ. 21– ಬೆಳ್ಳಂದೂರು ಎಂದ ತಕ್ಷಣ ನೆನಪಿಗೆ ಬರುವುದು ಅಲ್ಲಿಯ ಕಂಪ್ಯೂಟರೀಕರಣಗೊಂಡ ಗ್ರಾಮ ಪಂಚಾಯಿತಿ. ಇಂಥ ಊರಲ್ಲಿ ಇಂದು ವಿಶೇಷ ಕಾರ್ಯಕ್ರಮ ನಡೆಯಿತು. ಸಾಹಸಿಗಳನ್ನು ಸನ್ಮಾನಿಸುವ ಕಾರ್ಯಕ್ರಮ.

ಇತ್ತೀಚೆಗೆ ವ್ಯಾನಿನಲ್ಲಿ ಕುಳಿತಿದ್ದ ಚಾಲಕ ಮಹೇಶನನ್ನು ಸುಲಿಗೆ ಮಾಡಲು ಯತ್ನಿಸಿದ್ದ ಇಬ್ಬರು ದುಷ್ಕರ್ಮಿಗಳನ್ನು ಹಿಡಿಯುವಲ್ಲಿ ಯಶಸ್ವಿಯಾದ ಬೆಳ್ಳಂದೂರಿನ ಆರು ಮಂದಿ ಯುವಕರಿಗೆ ಸಾಹಸ ಪ್ರಶಸ್ತಿ ನೀಡುವ ಸಮಾರಂಭ. ನಗರ ಪೊಲೀಸ್ ಕಮಿಷನರ್ ಟಿ. ಮಡಿಯಾಲ್ ಪ್ರಶಸ್ತಿಗಳನ್ನು ವಿತರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 22-4-1975

● **'ರೈತ, ಗ್ರಾಹಕರ ಹಿತ ಬಲಿ ಕೊಟ್ಟು ಸಕ್ಕರೆ ಉದ್ಯಮದಿಂದ ಹಣ ಗಳಿಕೆ'**

ನವದೆಹಲಿ, ಏ. 21– ಸಂಸತ್ತಿನ ಸಾರ್ವಜನಿಕ ಲೆಕ್ಕ ಸಮಿತಿಯು ಸರ್ಕಾರ ಮತ್ತು ಸಕ್ಕರೆ ಉದ್ಯಮವನ್ನು ತರಾಟೆಗೆ ತೆಗೆದುಕೊಂಡಿದೆ.

ರಿಬೇಟ್ ಯೋಜನೆಯನ್ನು ಜಾರಿಗೆ ತರುವಲ್ಲಿ ಸರ್ಕಾರವು ಅಧಿಕಾರ ವ್ಯಾಪ್ತಿಯನ್ನು ಮೀರಿದ್ದರೆ, ಸಕ್ಕರೆ ಉದ್ಯಮವು ಬೊಕ್ಕಸದ ಜತೆಗೆ ಬೆಳೆಗಾರರು, ಕಾರ್ಮಿಕರು ಮತ್ತು ಬಳಕೆದಾರರ ವೆಚ್ಚದಲ್ಲಿ ಮಾರುಕಟ್ಟೆ ಬೆಲೆಗಳಲ್ಲಿ ಕೃತಕ ಏರುಪೇರು ತರಲು ಹವಣಿಸಿದೆ ಎಂದು ಹೇಳಿದೆ.

ಸಮಿತಿಯ 155ನೇ ವರದಿಯನ್ನು ಸಮಿತಿ ಅಧ್ಯಕ್ಷ ಜ್ಯೋತಿರ್ಮಯ ಬಸು ಅವರು ಇಂದು ಲೋಕಸಭೆಯ ಮುಂದಿಟ್ಟರು.

ಸಕ್ಕರೆ ಉದ್ಯಮದ ರಾಷ್ಟ್ರೀಕರಣ ಪ್ರಶ್ನೆಯ ಬಗ್ಗೆ ಸರ್ಕಾರ ಕೂಡಲೇ ನಿರ್ಧಾರ ಕೈಗೊಳ್ಳಬೇಕೆಂದು ಲೆಕ್ಕ ಸಮಿತಿ ಒತ್ತಾಯ ಮಾಡಿದೆ. 'ಕೆಲವರ ಹಿತಾಸಕ್ತಿಗಳಿಗಾಗಿ ಕಬ್ಬು ಬೆಳೆಗಾರ, ಕಾರ್ಮಿಕ ಮತ್ತು ಬಳಕೆದಾರರ ಹಿತವನ್ನು ಬಲಿ ಕೊಡಲಾಗಿದೆ' ಎಂದು ವರದಿ ಹೇಳಿದೆ.

1967ರಲ್ಲಿ ಜಾರಿಗೆ ತಂದ ಲೆವಿ ಮತ್ತು ಮುಕ್ತ ಮಾರಾಟ ಸಕ್ಕರೆ ಪದ್ಧತಿಯಿಂದ ಸಕ್ಕರೆ ಉದ್ಯಮವು ಅಪಾರ ಶ್ರೀಮಂತವಾಗಿ ಹೋಗಿದೆ. ಇದರಿಂದ ಬಳಕೆದಾರರನ್ನು ಶೋಷಿಸಲು ಅವಕಾಶ ಸಿಕ್ಕಂತಾಗಿದೆ ಎಂದು ಸಮಿತಿ ಆಪಾದಿಸಿದೆ.

ಅರಣ್ಯ ಪ್ರದೇಶ, ಜೀವವೈವಿಧ್ಯ ನೆಲೆಗಳ ಸಂರಕ್ಷಣೆಗೆ ಅರಣ್ಯ ಇಲಾಖೆ ಬದ್ಧವಾಗಲಿ

ಪರಿಭಾವಿತ ಅರಣ್ಯಕ್ಕೆ ಸಿಗಲಿ ಮಾನ್ಯತೆ



ವಿಶ್ಲೇಷಣೆ

ಅಖಿಲೇಶ್ ಚಿಪ್ಪಳಿ

ಸುಪ್ರೀಂ ಕೋರ್ಟ್‌ನಲ್ಲಿ 30 ವರ್ಷಗಳ ಹಿಂದೆ ದಾಖಲಿಸಿದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದು ಭಾರತದ ಅರಣ್ಯದ ವ್ಯಾಖ್ಯೆಯನ್ನೇ ಬದಲಿಸಿತು. ಕೇರಳದ ನಿಲಂಬೂರು ರಾಜವಂಶಸ್ಥರಾದ ಟಿ.ಎನ್. ಗೋದವರ್ಮನ್ ತಿರುಮುಲ್ಪಾಡ್ ಎಂಬುವರು ತಮ್ಮ ವಂಶಕ್ಕೆ ಸೇರಿದ ಅರಣ್ಯ ಭೂಮಿಯನ್ನು ಸಾರ್ವಜನಿಕ ಹಿತದೃಷ್ಟಿಯಿಂದ ರಕ್ಷಣೆ ಮಾಡಲು ಸುಪ್ರೀಂ ಕೋರ್ಟ್ ಮೊರೆ ಹೋದರು.

ಅರಣ್ಯ ಸಂರಕ್ಷಣೆಗಾಗಿ ಹೂಡಲಾದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ನ್ಯಾಯಮೂರ್ತಿ ಜೆ.ಎಸ್.ವರ್ಮಾ ನೇತೃತ್ವದ ತ್ರಿಸದಸ್ಯ ಪೀಠವು 1996ರ ಡಿಸೆಂಬರ್‌ನಲ್ಲಿ ಐತಿಹಾಸಿಕ ತೀರ್ಪು ನೀಡಿತು. ಅರಣ್ಯ ಇಲಾಖೆಯ ಅಥವಾ ಇತರ ಸರ್ಕಾರಿ ದಾಖಲೆಗಳಲ್ಲಿ ಅರಣ್ಯ ಎಂದು ನಮೂದಾಗದೇ ಇದ್ದು, ಸಸ್ಯವರ್ಗ, ಮರಗಳ ಸಾಂದ್ರತೆ ಮತ್ತು ಪಾರಿಸರಿಕ ಗುಣಲಕ್ಷಣಗಳನ್ನು ಹೊಂದಿರುವ, ಅಂದರೆ ಶಬ್ದಕೋಶದಲ್ಲಿ 'ಅರಣ್ಯ'ವನ್ನು ಹೇಗೆ ವ್ಯಾಖ್ಯಾನಿಸಲಾಗಿದೆಯೋ ಅದನ್ನು ಆಧರಿಸಿ, ಅಂತಹ ಪ್ರದೇಶವನ್ನು ಕೂಡ ಅರಣ್ಯ ಎಂದು ಪರಿಗಣಿಸಬೇಕು ಎಂಬುದು ತೀರ್ಪಿನ ಸಾರಾಂಶ. ಭಾರತದ ಎಲ್ಲ ರಾಜ್ಯಗಳೂ ಪರಿಭಾವಿತ ಅರಣ್ಯವನ್ನು ಗುರುತಿಸಬೇಕು ಎಂದು ಅದು ಸೂಚಿಸಿತು. ಹೀಗೆ ಡೀಮ್ಡ್ ಫಾರೆಸ್ಟ್ ಅಥವಾ ಪರಿಭಾವಿತ ಅರಣ್ಯ ಪ್ರದೇಶ ಎಂಬ ಹೊಸ ವಿಧಾನ ಹುಟ್ಟಿಕೊಂಡಿತು. ದೇಶದಾದ್ಯಂತ ಲಕ್ಷಾಂತರ ಹೆಕ್ಟೇರ್ ಅರಣ್ಯ ಪ್ರದೇಶವನ್ನು ಪರಿಭಾವಿತ ಅರಣ್ಯ ಎಂದು ಪರಿಗಣಿಸಲಾಯಿತು.

ಸುಪ್ರೀಂ ಕೋರ್ಟ್ ಆದೇಶವನ್ನು ಪಾಲಿಸಲು ಕರ್ನಾಟಕ ಸರ್ಕಾರವು 1997ರಲ್ಲಿ ತಜ್ಞರ ಸಮಿತಿಯೊಂದನ್ನು ರಚಿಸಿತು. ಆ ಸಮಿತಿಯು ತರಾತುರಿಯಲ್ಲಿ 9,94,881 ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯ ಎಂದು ಗುರುತಿಸಿ, ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿತು. ಆ ಪ್ರದೇಶದಲ್ಲಿ ಅದಾಗಲೇ ಘೋಷಿತಗೊಂಡ ಮೀಸಲು ಅರಣ್ಯ, ರಾಜ್ಯ ಮೀಸಲು ಅರಣ್ಯ, ಜಿಲ್ಲಾ ಮೀಸಲು ಅರಣ್ಯದ ಜೊತೆಯಲ್ಲಿ ಕೆಲವು ಕೃಷಿ ಜಮೀನುಗಳನ್ನೂ ಸೇರಿಸಲಾಗಿದೆ ಎಂಬ ಕೂಗು ಎದ್ದಿತು. ಸರ್ಕಾರದ ಈ ನಡೆಯು ಭೂಮಾಲೀಕರು ಮತ್ತು ರಾಜಕಾರಣಿಗಳಿಂದ ತೀವ್ರ ವಿರೋಧವನ್ನು ಎದುರಿಸಿತು. ಸರ್ಕಾರ ಇಕ್ಕಟ್ಟಿಗೆ ಸಿಲುಕಿಕೊಂಡಿತು.

ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಯನ್ನು ಗುರುತಿಸುವಲ್ಲಿ ಉಂಟಾದ ತೀವ್ರ ಗೊಂದಲವನ್ನು ಸರಿಪಡಿಸಲು ರಾಜ್ಯ ಸರ್ಕಾರವು ಎರಡೂವರೆ ದಶಕಗಳಿಂದಲೂ ಸೋಲುತ್ತಲೇ ಇದೆ. ಗಣಿ, ಅಭಿವೃದ್ಧಿಯ ಹೆಸರಿನಲ್ಲಿ ನಡೆಯುವ ಮಾಫಿಯಾಗಳ ಒತ್ತಡಕ್ಕೆ ಮಣಿಯುತ್ತಿರುವ ಸರ್ಕಾರಕ್ಕೆ ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗಲಿಲ್ಲ. ಆದರೂ 2020-21ರಲ್ಲಿ ಸರ್ಕಾರ ಮತ್ತೊಂದು ಪ್ರಮಾಣಪತ್ರವನ್ನು ಸಲ್ಲಿಸಿ, ಪರಿಭಾವಿತ ಅರಣ್ಯ ಪ್ರದೇಶವನ್ನು ಕಂದಾಯ ಇಲಾಖೆಗೆ ವರ್ಗಾಯಿಸುವ ಉದ್ದೇಶ ಹೊಂದಿರುವುದಾಗಿ ತಿಳಿಸಿತು. ಆದರೆ ಕೇಂದ್ರ ಸರ್ಕಾರದ ಪೂರ್ವಾನುಮತಿ ಇಲ್ಲದೆ ಇಂತಹ ಯಾವುದೇ ಕ್ರಮಕ್ಕೆ ಅವಕಾಶವಿಲ್ಲ ಎಂದು 2021ರಲ್ಲಿ ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿತು.

2022ರಲ್ಲಿ ರಾಜ್ಯ ಸರ್ಕಾರವು ಸುಮಾರು 6.64 ಲಕ್ಷ ಹೆಕ್ಟೇರ್ ಪ್ರದೇಶವನ್ನು ಪರಿಭಾವಿತ ಅರಣ್ಯ ವ್ಯಾಪ್ತಿಯಿಂದ ಹೊರಗಿಡುವ ಪ್ರಯತ್ನವಾಗಿ ಮತ್ತೊಂದು ಪ್ರಮಾಣಪತ್ರವನ್ನು ಸಲ್ಲಿಸಿತು. ಆ ಮೂಲಕ, ಪರಿಭಾವಿತ ಅರಣ್ಯ ಪ್ರದೇಶವನ್ನು ವಾಣಿಜ್ಯ ಮತ್ತು ಇತರ ಉಪಯೋಗಗಳಿಗೆ ಬಳಸುವ ಉದ್ದೇಶವನ್ನು ಹೊಂದಿತ್ತು. ಸರ್ಕಾರದ ಈ ಕ್ರಮವನ್ನು ಪರಿಸರವಾದಿಗಳು ತೀವ್ರವಾಗಿ ವಿರೋಧಿಸಿದರು. ಇದು ದೊಡ್ಡ ಪ್ರಮಾಣದ ಒತ್ತುವರಿಯನ್ನು ಕಾನೂನುಬದ್ಧಗೊಳಿಸುವ ನಡೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

ತಜ್ಞರ ಸಮಿತಿ ಸಲ್ಲಿಸಿದ್ದ ಪರಿಭಾವಿತ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಖಾಸಗಿ ಪಟ್ಟಾ, ಅಸ್ತಿತ್ವದಲ್ಲಿ ಇಲ್ಲದ ಸರ್ವೆ ನಂಬರ್, ಮೀಸಲು ಅರಣ್ಯ ಪ್ರದೇಶ, ಕೆರೆ ತೀರ, ಶಾಲಾ ನೆಡುತೋಪು, ಪರಿಭಾವಿತ ಮಾನದಂಡಕ್ಕೆ ಅನುಗುಣವಾಗಿಲ್ಲದ ಪ್ರದೇಶಗಳು ಸೇರಿದ್ದವು. ಇವುಗಳನ್ನು ಮರುಪರಿಶೀಲನೆ ಮಾಡಿ, ತಜ್ಞರ ಸಮಿತಿಯು ಮೂಲದಲ್ಲಿ ಸಲ್ಲಿಸಿದ್ದ 9,94,881 ಹೆಕ್ಟೇರ್ ಪ್ರದೇಶವನ್ನು 2,21,554 ಹೆಕ್ಟೇರ್ ವ್ಯಾಪ್ತಿಗೆ ಇಳಿಸಿತು. ಜೊತೆಗೆ ಪುನರ್‌ರಚಿಸಲಾದ ತಜ್ಞರ ಸಮಿತಿಯು ನೀಡಿದ ಶಿಫಾರಸಿನಂತೆ, ಪರಿಭಾವಿತ ಮಾನದಂಡಗಳಿಗೆ ಅನುಗುಣವಾಗಿರುವ ಹಾಗೂ ಈ ಮೊದಲು ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸೇರದೇ ಬಿಟ್ಟುಹೋಗಿದ್ದ 1,08,632 ಹೆಕ್ಟೇರ್ ಪ್ರದೇಶವನ್ನು ಸೇರಿಸಿ, ಒಟ್ಟು 3,30,186 ಹೆಕ್ಟೇರ್ ವ್ಯಾಪ್ತಿಯನ್ನು ಪರಿಭಾವಿತ ಅರಣ್ಯ ಎಂದು ಪರಿಗಣಿಸಲು ರಾಜ್ಯ ಸರ್ಕಾರವು 2022ರಲ್ಲಿ ಅಧಿಸೂಚನೆ ಹೊರಡಿಸಿತು.

ಅರಣ್ಯ ಸಂರಕ್ಷಣಾ ಕಾಯ್ದೆಗೆ 2023ರಲ್ಲಿ ತಿದ್ದುಪಡಿ ತಂದ ಕೇಂದ್ರ ಸರ್ಕಾರವು ಅದಕ್ಕೆ 'ವನ್ ಸಂರಕ್ಷಣ್ ಏವಂ ಸಂವರ್ಧನ್ ಅಧಿನಿಯಮ್' ಎಂದು ನಾಮಕರಣ ಮಾಡಿತು. ಈ ಕಾಯ್ದೆಯು ಅರಣ್ಯ ಸಂರಕ್ಷಣೆಗೆ ವಿರುದ್ಧವಾಗಿದೆ ಮತ್ತು ಗೋದವರ್ಮನ್ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಉಲ್ಲಂಘಿಸಿದಂತೆ ಆಗುತ್ತದೆ ಎಂದು ನಿವೃತ್ತ ಐಎಫ್‌ಎಸ್ ಅಧಿಕಾರಿಗಳು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನೆ ಮಾಡಿದರು. ಮೊಕದ್ದಮೆಯನ್ನು ಕೈಗೆತ್ತಿಕೊಂಡ ಸುಪ್ರೀಂ ಕೋರ್ಟ್ ವಾದ, ಪ್ರತಿವಾದಗಳನ್ನು ಆಲಿಸಿ, ಗೋದವರ್ಮನ್ ವಿಷಯದಲ್ಲಿ ನೀಡಿದ ತೀರ್ಪಿಗೆ ವಿರುದ್ಧವಾಗಿ ಯಾವುದೇ ತರಹದ ಉಲ್ಲಂಘನೆಯನ್ನು ಮಾಡಬಾರದು ಎಂದು ಇದೇ ವರ್ಷದ ಫೆಬ್ರುವರಿ 3ರಂದು ಕೇಂದ್ರ ಸರ್ಕಾರಕ್ಕೆ ಆದೇಶ ನೀಡಿತು.


ಪರಿಭಾವಿತ ಅರಣ್ಯ ಪ್ರದೇಶವನ್ನು ಗುರುತಿಸುವ ಕಾರ್ಯಕ್ಕೆ ಅನೇಕ ರಾಜ್ಯಗಳು ಮುಂದಾಗದಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಸುಪ್ರೀಂ ಕೋರ್ಟ್, ಈ ಆದೇಶದ ದಿನಾಂಕದಿಂದ ಒಂದು ತಿಂಗಳ ಒಳಗಾಗಿ ಎಲ್ಲಾ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳು ಜಿಲ್ಲಾವಾರು ಸಮಿತಿಗಳನ್ನು ರಚಿಸಬೇಕು ಮತ್ತು ಈ ಸಮಿತಿಗಳು ಮುಂದಿನ ಆರು ತಿಂಗಳ ಒಳಗೆ ಪರಿಭಾವಿತ ಅರಣ್ಯ ಪ್ರದೇಶವನ್ನು ಕರಾರುವಾಕ್ಕಾಗಿ ಗುರುತಿಸಿ, ಕೇಂದ್ರ ಸರ್ಕಾರಕ್ಕೆ ವರದಿ ಸಲ್ಲಿಸಬೇಕು, ರಾಜ್ಯಗಳು ಸಲ್ಲಿಸಿದ ವಿವರಗಳನ್ನು ಕ್ರೋಡೀಕರಿಸಿ ಅದನ್ನು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಬೇಕು ಎಂದು ಹೇಳಿದೆ. ಯಾವುದೇ ರಾಜ್ಯ ಆರು ತಿಂಗಳ ನಿಗದಿತ ಮಿತಿಯಲ್ಲಿ ಪರಿಭಾವಿತ ಅರಣ್ಯ ಪ್ರದೇಶದ ವ್ಯಾಪ್ತಿಗೆ ಸಂಬಂಧಿಸಿದ ವಿವರವನ್ನು ಸಲ್ಲಿಸಲು ವಿಫಲವಾದಲ್ಲಿ ಆಯಾ ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳನ್ನು ವೈಯಕ್ತಿಕ ನೆಲೆಯಲ್ಲಿ ಹೊಣೆ ಮಾಡಲಾಗುವುದು ಎಂದು ಹೇಳಿದೆ.

ಪರಿಭಾವಿತ ಅರಣ್ಯ ಪ್ರದೇಶವನ್ನು ಗುರುತಿಸಿ ಸಂರಕ್ಷಿಸುವ ಹೊಣೆ ಅರಣ್ಯ ಇಲಾಖೆಗೆ ಸೇರುತ್ತದೆ. ಆದರೆ, ಈಗಾಗಲೇ ಶಾಸನಬದ್ಧವಾಗಿ ಸಂರಕ್ಷಣೆಗೆ ಒಳಪಟ್ಟ ಅಭಯಾರಣ್ಯ, ರಾಜ್ಯ ಮೀಸಲು ಅರಣ್ಯ, ಜಿಲ್ಲಾ ಮೀಸಲು ಅರಣ್ಯವನ್ನೇ ಸಂರಕ್ಷಣೆ ಮಾಡಲಾರದ ಸ್ಥಿತಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಇದೆ. ಶಿವಮೊಗ್ಗ ಜಿಲ್ಲೆಯ ಸಾಗರ ಅರಣ್ಯ ವಿಭಾಗಕ್ಕೆ ಒಳಪಡುವ ನಾಲ್ಕು ತಾಲ್ಲೂಕುಗಳಲ್ಲಿ 4,500 ಹೆಕ್ಟೇರ್ ಅರಣ್ಯ ಪ್ರದೇಶವು ಅಕ್ರಮವಾಗಿ ಮಂಜೂರಾಗಿದೆ. 26,500 ಮಂದಿ ತಲಾ ಮೂರು ಎಕರೆಗಿಂತ ಕಡಿಮೆ ಜಾಗವನ್ನು ಒತ್ತುವರಿ ಮಾಡಿಕೊಂಡಿದ್ದು, ಇದರ ಒಟ್ಟು ವಿಸ್ತೀರ್ಣ 31,000 ಎಕರೆ ಮತ್ತು ಸುಮಾರು 2,500 ಜನ ಮೂರು ಎಕರೆಗಿಂತ ಹೆಚ್ಚು ಒತ್ತುವರಿ ಮಾಡಿಕೊಂಡಿದ್ದು, 13,000 ಎಕರೆ ಅರಣ್ಯ ಪ್ರದೇಶವನ್ನು ಕಬಳಿಸಿದ್ದಾರೆ ಎಂದು ಇಲಾಖೆಯ ಅಂಕಿ ಅಂಶಗಳು ಹೇಳುತ್ತಿವೆ. ಆದರೆ ರಾಜ್ಯ ಸರ್ಕಾರ ಮತ್ತೆ ಇಲ್ಲಿ ಎಡವಿದೆ. ಮೂರು ಎಕರೆಗಿಂತ ಕಡಿಮೆ ಒತ್ತುವರಿ ಮಾಡಿಕೊಂಡವರನ್ನು ಒಕ್ಕಲೆಬ್ಬಿಸಬಾರದು ಎಂದು ತನ್ನ ಅಧಿಕಾರ ವ್ಯಾಪ್ತಿಯನ್ನು ಮೀರಿ ಸುತ್ತೋಲೆ ಹೊರಡಿಸಿದೆ. ಸುತ್ತೋಲೆಗೆ ಬೆದರಿದ ಅರಣ್ಯ ಭವನದ ಅಧಿಕಾರಿಗಳು ಅರಣ್ಯ ಒತ್ತುವರಿಯನ್ನು ತೆರವುಗೊಳಿಸದಂತೆ ಇಲಾಖೆಯ ಕೆಳಹಂತದ ಸಿಬ್ಬಂದಿಗೆ ಆದೇಶ ನೀಡಿದ್ದಾರೆ.

ಪರಿಭಾವಿತ ಅರಣ್ಯ ಪ್ರದೇಶವನ್ನು ಗುರುತಿಸಿ, ಸಂರಕ್ಷಿಸುವಲ್ಲಿ ಅರಣ್ಯ ಇಲಾಖೆ ಎಡವದಿರಲಿ. ಸಾರ್ವಜನಿಕರು ಈ ಕೆಲಸದಲ್ಲಿ ಅರಣ್ಯ ಇಲಾಖೆಯ ಜತೆ ಕೈಜೋಡಿಸಲಿ.



ಚುರುಮುರಿ



ನಾಗರಿಕ ಸಂ-ಹಿತ

● ಡಿ.ಎಸ್.ಲಿಂಗರಾಜು

'ಸಾ ನನಗೊಂದು ದೌಟು ಬಂದದೆ. ಜನಸಾಮಾನ್ಯರನ್ನ ಮಾತ್ರ ನಾಗರಿಕರು ಅನ್ನೋದು ಯಾಕೆ? ರಾಜಕಾರಣಿಗಳಿಗೆ ನಾಗರಿಕರು ಅಂತ ಯಾಕನ್ನಲ್ಲ' ನನ್ನ ಪ್ರಶ್ನೆಗೆ ತುರೇಮಣೆ ಒಂದು ನಿಮಿಷವೂ ಯೋಚನೆ ಮಾಡದೆ ಉತ್ತರ ಕೊಟ್ಟರು.

'ನಾಗರಿಕರದ್ದು ಕಷ್ಟದ ಬದುಕಿನ ಕತೆ ಕಲಾ. ಅದಕ್ಕೇ ಅದುನ್ನ ನಾಗರಿಕತೆ ಅಂತೀವಿ. ಕಾಯ್ದೆ-ಕಾನೂನು, ನೀತಿ-ನೇಮಗಳ ಸಿಲಬಸ್ಸನ್ನ ಭಯ-ಭಕ್ತಿಯಿಂದ ಅನುಸರಿಸೋರೇ ನಾಗರಿಕರು' ಕಥೆಗೆ ಮುನ್ನುಡಿ ಬರೆದರು.

'ಅಂದ್ರೆ ರಾಜಕಾರಣಿಗಳಿಗೆ ಕಥೆ ಇರಲ್ಲವಾ?'

'ರಾಜಕಾರಣಿಗಳಿಗೆ ಹಳೇದು ಹೊಸದು ಅಂತ ಎರಡು ಸಿಲಬಸ್ ಇರತವೆ. ಹಳೇ ಸಿಲಬಸಿನಲ್ಲಿದ್ದ ರಾಜಕಾರಣಿಗಳು ಓದಿಕ್ಯಂಡುದ್ದು ರಾಜ್ಯಶಾಸ್ತ್ರ. ಕಾಯ್ದೆ-ಕಾನೂನಿಗೆ ಗೌರವ ಕೊಡತಿದ್ರು, ಸಾರ್ವಜನಿಕರ ದುಡ್ಡಿಗೆ ಆಸೆ ಬೀಳ್ತಿರಲಿಲ್ಲ. ಆಗೆಲ್ಲಾ ಬಸ್ಸತ್ತಿ ಅಸೆಂಬ್ಲಿಗೆ ಹೋಗೋರು' ತುರೇಮಣೆ ಆವತ್ತಿನ ವೈಭವ ವರ್ಣಿಸಿದರು.

'ಈಗ ಯಂಗದೆ?'

'ಈಗಿನೋರಿಗೆ ರಾಜಕಾರಣ ಒಂದು ಬಿಜಿನೆಸ್ಸಾಗದೆ. ಅಸೆಂಬ್ಲೀಗೆ ಹೋಗಿ ಜನಕ್ಕೆ ಒಳ್ಳೇದಾಗೋ ಕೆಲಸ ಮಾಡದು ಅಂದ್ರೆ ಆಗಕುಲ್ಲ. ಇವರ ಸಿಲಬಸ್ಸಲ್ಲಿ ಕಿಕ್‌ಬ್ಯಾಕ್, ಹಫ್ತಾ, ಕಮೀಷನ್, ಮರಳು-ಅದಿರು ಮಾಫಿಯಾ, ಅಕ್ರಮಗಳೇ ತುಂಬಿರತವೆ. ಇಂತೇ ಕೆಲಸಕ್ಕೆ ಕೋಟಿ ರುಪಾಯಿ ಸರ್ಕಾರಿ ಕಾರೇ ಬೇಕು ಅಂತ ಜುಲುಮೆ ಮಾಡಿ ಈಸುಗತ್ತರೆ' ಅಂತ ವಿವರಿಸಿದರು.

'ಎಲ್ಲಾ ಸ್ಕೂಲು, ಆಸ್ಪತ್ರೆ, ಸರ್ಕಾರಿ ಕಂತ್ರಾಟು ಕಬ್ಜಾ ಮಾಡಿಕ್ಯಂದಿರತವೆ ಕನೋ. ಇವರಿಂದ್ಲೇ ದುನಿಯಾ ದುಬಾರಿ ಆಗ್ಯದೆ. ಇವರೆಲ್ಲ ತಮ್ಮ ಕಳ್ಳಾಟಕ್ಕೆ ಭ್ರಷ್ಟ ಅಧಿಕಾರಿಗಳ ಸಾಥ್ ತಕ್ಕಂದಿರತರೆ' ಯಂಟಪ್ಪಣ್ಣ ದೂರಿತು.

'ದಿನಕ್ಕೊಂದು ವಿವಾದ ತೆಗೆದು ಟೈಮು ಕಳೀತರೆ. ಸಂಪತ್ತೆಲ್ಲಾ ಇವರೇ ಮಡೀಕಂದು ಸಾಮಾಜಿಕ ನ್ಯಾಯ ಹೇಳ್ತರೆ, ಸಾರ್ವಜನಿಕ ಶಕ್ತಿ ಪ್ರದರ್ಶನ ಮಾಡ್ತರೆ. ಜನಸಾಮಾನ್ಯರು ಮಾಡದಿರೋ ಕೆಲಸಕ್ಕೆ ಕೈ ಹಾಕೋರನ್ನ ಹ್ಯಂಗೆ ನಾಗರಿಕರು ಅನ್ನಕಾದದೋ?'

ತುರೇಮಣೆ ಪ್ರಶ್ನೆಗೆ ಯಾರಿಗೂ ಉತ್ತರ ಗೊತ್ತಿಲ್ಲದೆ ಮುಸಿಮುಸಿ ನಕ್ಕು ಸುಮ್ಮಗಾದೆವು.

ಸಂಗತ

ಭೂಮಿಗೆ ಮರುಬಳಕೆಯ ಲಸಿಕೆ

ಮನುಷ್ಯನ ಚಟುವಟಿಕೆಗಳಿಗೂ ಪ್ರಕೃತಿಗೂ ಸಾಮರಸ್ಯ ಇಲ್ಲದಿದ್ದರೆ ಮನುಷ್ಯಕುಲಕ್ಕೇ ಆಪತ್ತು ಎಂಬುದನ್ನು ನೆನಪಿಡಬೇಕು

● ಬಿ.ಎಸ್.ಭಗವಾನ್

1970ರಿಂದಲೂ ಪ್ರತಿವರ್ಷ ಏಪ್ರಿಲ್ 22ರಂದು 'ವಿಶ್ವ ಭೂಮಿ ದಿನ' ಆಚರಿಸಲಾಗುತ್ತಿದೆ. ಇರುವುದೊಂದೇ ಭೂಮಿ, ಇಂತಹ ಪ್ರಶಸ್ತ ಆವಾಸ ಇನ್ನೊಂದಿಲ್ಲ, ಭೂಮಿಯನ್ನು ಜೋಪಾನವಾಗಿ ಇಟ್ಟುಕೊಳ್ಳೋಣ ಎಂದು ಸಾರುವ ಈ ಬಹು ಮಹತ್ವದ ದಿನ ಒಂದು ನೆನಪಿನೋಲೆ.

'ನಮ್ಮ ಸಾಮರ್ಥ್ಯ, ನಮ್ಮ ಭೂಮಿ' ಎನ್ನುವ ಧ್ಯೇಯವಾಕ್ಯದೊಂದಿಗೆ ಈ ಬಾರಿಯ ಜಾಗತಿಕ ಸಡಗರ ರಂಗೇರುತ್ತದೆ. ಅಂದು ಹಲವರು ಒಟ್ಟಾಗಿ ಗಾಳಿ, ಸಾಗರ, ಮಣ್ಣು, ಪರಿಸರ ವ್ಯವಸ್ಥೆ, ವನ್ಯಜೀವನ ಮತ್ತು ಮನುಷ್ಯರ ಆರೋಗ್ಯದ ಕುರಿತು ಜಾಗೃತಿ ಮೂಡಿಸುತ್ತಾರೆ. ಇಲ್ಲಿ ನಮ್ಮ ಶಕ್ತಿ ಎಂದರೆ, ನಾವು ಇಂಧನವಾಗಿ ಬಳಸುವ ವಾಯು, ಕಲ್ಲಿದ್ದಲು, ಕಟ್ಟಿಗೆ, ಪೆಟ್ರೋಲು, ಅನಿಲ. ನಮ್ಮ ಭೂಮಿ ಎಂದರೆ ಭೂಮಿಯನ್ನು ಕಾಪಾಡಲು ನಮಗಿರಬೇಕಾದ ಬದ್ಧತೆ. ಜೀವವೈವಿಧ್ಯವುಳ್ಳ ಏಕೈಕ ಗ್ರಹವಾದ ಭೂಮಿ ನಮ್ಮ ಮನೆ. ಉಸಿರಾಟಕ್ಕೆ ಸ್ವಚ್ಛ ಗಾಳಿ, ಕುಡಿಯಲು ಶುದ್ಧ ನೀರು ಒದಗಿಸುವುದಷ್ಟೇ ಸಾಕು ಭೂ ಗ್ರಹದ ಜೀವಿಗಳ ಸಿರಿವಂತಿಕೆಗೆ.

ಭೂಮಿಯ ಗಾತ್ರ ಮತ್ತು ಸೂರ್ಯನಿಂದ ಅಂತರ ವಿಶಿಷ್ಟವಾಗಿದ್ದು ಅದನ್ನು ವಾಸಯೋಗ್ಯವಾಗಿಸಿದೆ. ತಾಳಿಕೆಯ ಸೌಂದರ್ಯ, ಹಚ್ಚಹಸಿರು ಹುಲ್ಲುಗಾವಲು, ಗಿರಿಕಂದರ, ಕಡಲು, ನದಿ, ಸರೋವರ... ಏನೆಲ್ಲ ಅಚ್ಚರಿಗಳು ಭುವಿಯನ್ನು ಜೀವಂತವಾಗಿ ಇರಿಸಿವೆ. ಹಸಿರು ಭೂಮಿ ಮತ್ತು ಅದರ ಸಂಪನ್ಮೂಲಗಳನ್ನು ಮುಂದಿನ ಪೀಳಿಗೆಗಳಿಗೆ ಸಂರಕ್ಷಿಸುವುದು ವಿಶ್ವಪ್ರಜೆಗಳೆಲ್ಲರ ಹೊಣೆ. 'ವಿಶ್ವ ಭೂಮಿ ದಿನ'ದ ಸಂಭ್ರಮ ಒಂದು ದಿನದ್ದಾಗದೆ ಅದು ವರ್ಷದ ಎಲ್ಲ ದಿನಗಳದ್ದಾಗಬೇಕಿದೆ. ಏಕೆಂದರೆ ನಮ್ಮ ಗ್ರಹವನ್ನು ಸಂರಕ್ಷಿಸಿದರೆ ನಮ್ಮನ್ನು ನಾವೇ ಸಂರಕ್ಷಿಸಿಕೊಂಡಂತೆ. ಸ್ವಚ್ಛ, ಆರೋಗ್ಯಯುತ ಮತ್ತು ಸಮಾನ ಭವಿಷ್ಯ ನಮ್ಮದಾಗಲು ನಾವು ದೃಢವಾಗಿ ಕಾರ್ಯೋನ್ಮುಖರಾಗೋಣ. ಸುಸ್ಥಿರತೆಯು ಭೂಮಿಯ ಪ್ರವರ್ಧಮಾನದ ಕೀಲಿಕೈ.

'ಮರುಬಳಕೆ, ನವೀಕರಣ, ತಿರಸ್ಕಾರ' ನಮ್ಮ ಇಂದಿನ ಜರೂರು ನಿಬಂಧನೆಯಾಗಬೇಕು. ಹಳೆಯದೇ ಸೌಟು ಬಳಸಿದೆ, ಮೊಂಡಾಗಿದ್ದ ಈಳಿಗೆ ಮಣೆಗೆ ಸಾಣೆ ಹಿಡಿಸಿ ಉಪಯೋಗಿಸಿದೆ, ಪ್ಲಾಸ್ಟಿಕ್ ಚೀಲ ಒಲ್ಲೆನೆಂದೆ- ಇಷ್ಟು ಸಾಕಲ್ಲ ಈ ಮಂತ್ರ ಉದಾಹರಿಸಲು. ನವೀಕರಿಸಬಹುದಾದ ಶಕ್ತಿ ಸಂಪನ್ಮೂಲಗಳೆಂದರೆ ಪರಮಾಣು ಮತ್ತು ಪಳೆಯುಳಿಕೆ ಇಂಧನಗಳಿಗೆ ಹೊರತಾದವು. ಅವು ಸರಬರಾಜು ಹಾಗೂ ಬೇಡಿಕೆಗಳಿಗೆ ಒಳಪಟ್ಟ ಇಂಧನ ಮೂಲಗಳು. ಅವು ನಿರಂತರವಾಗಿ ಮತ್ತು ಸ್ವಾಭಾವಿಕವಾಗಿ ನವೀಕೃತಗೊಳ್ಳುವ ಮೂಲಗಳಿಂದ ಒದಗಿಬರುವ ಕಾರಣ ಆ ಹೆಸರು.

ಮಾನವನ ಇತಿಹಾಸದಾದ್ಯಂತ ಒಂದಲ್ಲೊಂದು ಬಗೆಯಲ್ಲಿ ಮರುಬಳಕೆ ಪರಿಕಲ್ಪನೆ ಕಾರ್ಯರೂಪದಲ್ಲಿದೆ. ರೋಮನ್ನರು ಹೊಸ ಕಟ್ಟಡಗಳಿಗೆ ಹಳೆಯದರ ಸಾಮಗ್ರಿಗಳನ್ನು ಬಳಸುತ್ತಿದ್ದರು. ಕ್ರಿ.ಶ. 1031ರಲ್ಲಾಗಲೇ ಜಪಾನ್ ದೇಶವು ಕಾಗದವನ್ನು ಪುನರ್ ಉಪಯೋಗಿಸುತ್ತಿತ್ತು. ಸೌದೆ, ಇದ್ದಿಲಿನ ಒಲೆಯ ದಿನಗಳಲ್ಲಿ ಮನೆ ಮನೆಗಳಲ್ಲಿ ನಾನು ಕಂಡ ಅಂಶವೊಂದು ಕಣ್ಣಿಗೆ ಕಟ್ಟಿದಂತಿದೆ. ಸೌದೆ ಒಂದು ವೇಳೆ ಪೂರ್ತಿ ಉರಿಯುವ ಮುನ್ನವೇ ಅಡುಗೆಯಾಯಿತು ಅನ್ನಿ. ಕೊಳ್ಳಿಗೆ ನೀರು ಸಿಂಪಡಿಸಿ ಒಣಗಿಸಿ ಮುಂದಿನ ಅಡುಗೆಗೆ ಸಿದ್ಧವಾಗಿ ಇಟ್ಟುಕೊಳ್ಳುತ್ತಿದ್ದರು. ಅದನ್ನು ತುಂಡಾಗಿಸಿ ಇದ್ದಿಲು ಒಲೆಗೂ ಉರಿಸಬಹುದಿತ್ತು. ಶಕ್ತಿಯ ಬಳಕೆ ಕಡಿಮೆಯಾದಷ್ಟೂ ಕೊಳ್ಳುಬಾಕತನಕ್ಕೆ ಕಡಿವಾಣ ಬೀಳುತ್ತದೆ.

ಹಳೆಯ ಪಾತ್ರೆ ಪಡಗ, ಮರದ ಪೀಠೋಪಕರಣಗಳನ್ನು ಹೊಸ ವಿನ್ಯಾಸಗಳಿಗೆ ಹಪಹಪಿಸದೆ ಹಾಗೆಯೇ ಉಪಯೋಗಿಸಬೇಕು. ಅವನ್ನು ತಯಾರಿಸಲು ಅದೆಷ್ಟು ಇಂಧನ ವ್ಯಯವಾಗಿದೆ, ಎಷ್ಟು ಮರಮಟ್ಟು ಕತ್ತರಿಸಲಾಗಿದೆ ಎಂಬುದನ್ನು ಪರ್ಯಾಲೋಚಿಸಬೇಕು. ಮರುಬಳಕೆ ನಮ್ಮ ಪರಂಪರೆಯಲ್ಲೇ ಇದೆ ಎನ್ನಲು ಇದೊಂದು ಸರಳ ನಿದರ್ಶನವಷ್ಟೆ.



ಮಾನವನ ನಾಗರಿಕತೆಗೂ ಒಂದು ಮಿತಿ ಇದೆ. ಐಷಾರಾಮಿತನದ ಮೇಲುಗೈನಿಂದ ವ್ಯತಿರಿಕ್ತ ಆಗು-ಹೋಗುಗಳಾಗುತ್ತಿವೆ. ನೀರ್ಗಲ್ಲು ಕರಗಿ ಹಿಮಪ್ರವಾಹ, ತಾಪಮಾನವೇರಿ ಕಾಳ್ಗಿಚ್ಚು, ಹವಾಮಾನ ವೈಪರೀತ್ಯ, ಪದೇ ಪದೇ ಚಂಡಮಾರುತ, ಬರ, ಮಾಲಿನ್ಯ, ಆಮ್ಲಜನಕದ ಅಭಾವ... ಒಂದೇ? ಎರಡೇ? ಸೌರ, ಪವನ ಹಾಗೂ ಜಲ ಶಕ್ತಿಯನ್ನು ಹೆಚ್ಚು ಅವಲಂಬಿಸುವುದು ನಮ್ಮ ಬದುಕಿನ ಶೈಲಿಯಾಗಬೇಕು. ಪರಿಯಾವರಣದ ರಕ್ಷಣೆಗೆ ಪೂರಕವಾದ ಅಭ್ಯಾಸಗಳು ಅಗತ್ಯ. ಅದುವೇ ಪ್ರಕೃತಿಯೊಂದಿಗೆ ನಮ್ಮ ವರ್ತನೆಯ ತುರ್ತು ಮೂಲಭೂತ ಪಲ್ಲಟ. ಮನುಷ್ಯನ ಚಟುವಟಿಕೆಗಳಿಗೂ ಪ್ರಕೃತಿಗೂ ಸಾಮರಸ್ಯ ಇಲ್ಲದಿದ್ದರೆ ಅದಕ್ಕೆ ಆತ ಮಾತ್ರ ಅಲ್ಲ, ಸಸ್ಯಗಳೂ ಪ್ರಾಣಿಗಳೂ ಸೊರಗುತ್ತವೆ. ಅವುಗಳ ನೆಮ್ಮದಿ ಕೆಟ್ಟರೆ ಮತ್ತೆ ಮನುಷ್ಯಕುಲಕ್ಕೇ ಆಪತ್ತು. ಏಕೆಂದರೆ ಧರೆಯಲ್ಲಿ ಸಕಲ ಜೀವಿಗಳೂ ಪರಸ್ಪರ ನೆಚ್ಚಿಕೊಂಡಿವೆ. ಮರಗಳು ಭೂಮಿಯು ಆಗಸದ ಮೇಲೆ ಬರೆಯುವ ಪದ್ಯಗಳು ಎನ್ನುತ್ತಾರೆ.

ಆಯಾ ಸ್ಥಳೀಯ ಆಡಳಿತಕ್ಕೆ ನವೀಕರಿಸಬಹುದಾದ ಶಕ್ತಿ ಮೂಲಗಳನ್ನು ಉತ್ತೇಜಿಸಲು ಒತ್ತಾಯ, ಪ್ಲಾಸ್ಟಿಕ್ ಉತ್ಪಾದನೆಯ ವಿರುದ್ಧ ಕ್ರಮ, ಪ್ರತಿ ಶಾಲೆಯಲ್ಲೂ ಹವಾಮಾನ ಶಿಕ್ಷಣಕ್ಕೆ ವ್ಯವಸ್ಥೆ- ಹೀಗೆ ಆನ್‌ಲೈನ್ ಮೂಲಕವೇ ಯಾವುದೇ ಸಂಘಟನೆ 'ವಿಶ್ವ ಭೂಮಿ ದಿನ'ದಲ್ಲಿ ತೊಡಗಬಹುದು. 'ನಮಗೆ ಭೂಮಿ ಸೇರಿದ್ದಲ್ಲ, ನಾವು ಭೂಮಿಗೆ ಸೇರಿದವರು. ನಾವು ಭೂಮಿಯ ಸವಾರರೂ ಅಲ್ಲ, ಸರದಾರರೂ ಅಲ್ಲ. ಅದರ ಮೇಲ್ವಿಚಾರಕರು' ಎನ್ನುವುದನ್ನು ನೆನಪಿಡೋಣ. ಮೊದಲಿಗೆ, ನಾವು ಇತರರಲ್ಲಿ ಬಯಸುವ ಸುಧಾರಣೆಗೆ ಉದಾಹರಣೆಯಾಗಬೇಕಿದೆ.

ವಾಚಕರ ವಾಣಿ

ಬೈಲಾ ತಿದ್ದುಪಡಿ ಅಗತ್ಯವೇ?

ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷರು ಪರಮಾಧಿಕಾರ ಪಡೆಯುವ ಸಲುವಾಗಿ ಬೈಲಾ ತಿದ್ದುಪಡಿ ಮಾಡಲು ಹೊರಟಿದ್ದಾರೆ ಎನ್ನಲಾದ ಸುದ್ದಿಯನ್ನು (ಪ್ರ.ವಾ., ಏ. 19) ಓದಿ ಆಶ್ಚರ್ಯವಾಯಿತು. ಕಸಾಪ ಅಧ್ಯಕ್ಷಗಿರಿಯು ಅಧಿಕಾರ ಅನುಭವಿಸಲು ಇದೆಯೋ ಅಥವಾ ಎಲ್ಲರೊಳಗೆ ಒಂದಾಗಿ ಕನ್ನಡದ ಸೇವೆ ಮಾಡಲು ಇದೆಯೋ? ಈ ಬಗ್ಗೆ ಸಮಸ್ತ ಕನ್ನಡಿಗರೂ ಚಿಂತಿಸಬೇಕಾಗಿದೆ.

ಜಿ.ನಾರಾಯಣ ಅವರು ಅಧ್ಯಕ್ಷರಾಗಿದ್ದ ಕಾಲದಿಂದಲೂ ಪರಿಷತ್ತಿನ ಚಟುವಟಿಕೆಗಳನ್ನು ಗಮನಿಸುತ್ತಾ ಬಂದಿದ್ದೇನೆ. ಸಾಹಿತ್ಯ ಲೋಕದ ಅನೇಕ ದಿಗ್ಗಜರು ಪರಿಷತ್ತಿನ ಚುಕ್ಕಾಣಿ ಹಿಡಿದು ಮುನ್ನಡೆಸಿದ್ದಾರೆ. ಪುಸ್ತಕ ಪ್ರಕಟಣೆಗೆ, ಸಂಶೋಧನೆಗೆ ಹೆಚ್ಚಿನ ಒತ್ತು ಕೊಟ್ಟು ಬೆಳೆಸಿದ್ದಾರೆ. ವಿಶ್ವವಿದ್ಯಾಲಯದಂತಹ ಸರ್ಕಾರಿ ಮತ್ತು ಸರ್ಕಾರೇತರ ಸಂಘ– ಸಂಸ್ಥೆಗಳ ಜೊತೆಯಲ್ಲಿ ಸೇರಿಕೊಂಡು ಕತೆ, ಕಾವ್ಯ, ಸಂಗೀತ ಕಮ್ಮಟಗಳನ್ನು ಏರ್ಪಡಿಸಿ, ನುರಿತ ಮಾಸ್ತರ್‌ನಂತಿದ್ದು ಕೆಲಸ ಮಾಡಿದ ಅನೇಕ ಅಧ್ಯಕ್ಷರನ್ನು ಪರಿಷತ್ತು ಕಂಡಿದೆ. ಕನ್ನಡಿಗರ ಸರಸ್ವತಿ ದೇಗುಲದಂತಿರುವ ಪರಿಷತ್ತಿನಲ್ಲಿ ಸರ್ವಾಧಿಕಾರಿ ಧೋರಣೆಗೆ ಅವಕಾಶವೇ ಇರಲಿಲ್ಲ. ಜಿಲ್ಲಾ ಘಟಕದ ಅಧ್ಯಕ್ಷರೂ ರಾಜ್ಯ ಘಟಕದ ಅಧ್ಯಕ್ಷರಂತೆ ಚುನಾವಣೆಯಲ್ಲಿ ಗೆದ್ದು ಬಂದವರು. ಅವರನ್ನೆಲ್ಲಾ ಒಟ್ಟಿಗೆ ಸೇರಿಸಿಕೊಂಡು, ಒಬ್ಬ ಹಿರಿಯ ಮಾರ್ಗದರ್ಶಿಯಾಗಿ ಕೆಲಸ ಮಾಡಿಸಬೇಕು. ಅದುಬಿಟ್ಟು, ಚುನಾಯಿತ ಪ್ರತಿನಿಧಿಗಳಿಗೆ ಇರುವ ಅಧಿಕಾರವನ್ನು ಕಿತ್ತುಕೊಂಡು ಸರ್ವಾಧಿಕಾರಿಯಾದರೆ, ಅಂತಹ ಅಧಿಕಾರದಿಂದ ಪರಿಷತ್ತಿಗೆ ಏನು ಒಳ್ಳೆಯದನ್ನು ಮಾಡಲು ಸಾಧ್ಯ? ಬೈಲಾ ತಿದ್ದುಪಡಿಯ ಅಗತ್ಯ ಇದೆಯೇ, ಇದ್ದರೆ ಏನೇನು ತಿದ್ದುಪಡಿ ಮಾಡಬೇಕೆಂಬ ಬಗ್ಗೆ ಪರಿಶೀಲಿಸಲು ಸರ್ಕಾರ ಸೂಕ್ತ ಸಮಿತಿಯನ್ನು ರಚಿಸಿ ಆದೇಶ ಹೊರಡಿಸಲಿ. ಅಲ್ಲಿಯವರೆಗೆ ಅಧ್ಯಕ್ಷರ ಅಧಿಕಾರವನ್ನು ಮೊಟಕು ಮಾಡಿ, ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಫಲಿತಾಂಶದಲ್ಲಿ ಹಿನ್ನಡೆ: ಹೊಣೆ ಯಾರು?

ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಮಕ್ಕಳಿಗೆ ಶಿಕ್ಷಣ ನೀಡುವ ದೂರಾಲೋಚನೆಯಿಂದ ಸರ್ಕಾರಿ ಕಾಲೇಜುಗಳ ಸ್ಥಿತಿಗತಿ ಮತ್ತು ಸಾಧಕ– ಬಾಧಕಗಳ ಕುರಿತು ರೇವಣ್ಣ ಎಂ.ಜಿ. ಒಂದಷ್ಟು ಅಂಶಗಳನ್ನು (ಸಂಗತ, ಏ. 21) ಮುಂದಿಟ್ಟಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಮಕ್ಕಳು ಮತ್ತು ಪೋಷಕರು ಖಾಸಗಿ ಶಿಕ್ಷಣ ಸಂಸ್ಥೆಗಳನ್ನು ಆರಿಸಿಕೊಂಡು ಹೋಗುತ್ತಿರುವುದು ಮೇಲ್ನೋಟಕ್ಕೆ ಕಂಡುಬರುವಂತಹ ವಿಚಾರ. ಇದಕ್ಕೆ ನೇರ ಹೊಣೆ ಸರ್ಕಾರಿ ಕಾಲೇಜುಗಳ ಫಲಿತಾಂಶ ಎನ್ನುವುದು ನಿಜ. ಏಕೆಂದರೆ ಸರ್ಕಾರಿ ಕಾಲೇಜುಗಳಲ್ಲಿ ಅನುಭವಿ ಮತ್ತು ಉತ್ತಮ ಗುಣಮಟ್ಟದ ಬೋಧನೆಯನ್ನು ಮಾಡಬಲ್ಲ ಸಾಮರ್ಥ್ಯ ಇರುವ ಉಪನ್ಯಾಸಕರು ಇದ್ದರೂ ಪ್ರತಿಬಾರಿ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಹಿನ್ನಡೆಯಾಗುತ್ತಿದೆ. ಕಾರಣ ವಿದ್ಯಾರ್ಥಿಗಳ ಉದಾಸೀನವೋ ಅಥವಾ ಉಪನ್ಯಾಸಕರದ್ದೋ ಎನ್ನುವಂತಹದ್ದು ಗೊಂದಲದ ವಿಚಾರ.

ಸರ್ಕಾರಿ ಕಾಲೇಜುಗಳಲ್ಲಿ ಈಗ ಬಹುಮಟ್ಟಿಗೆ ಬರೀ ನಾಲ್ಕರಿಂದ ಐದು ಗಂಟೆಗಳ ತರಗತಿಗಳಿಗೆ ವೇಳಾಪಟ್ಟಿ ಸೀಮಿತವಾಗಿದೆ. ಹೀಗೆ ಕಡಿಮೆ ಸಮಯದಲ್ಲಿ ವಿದ್ಯಾರ್ಥಿಗಳಿಗೆ ಕಲಿಸುವ ವಿಚಾರದಲ್ಲಿ ಉಪನ್ಯಾಸಕರು ಎಡವುತ್ತಿರಬಹುದೇ ಎನ್ನುವುದು ಮೊದಲನೆಯ ಅಂಶ. ಎರಡನೆಯದು, ವಿದ್ಯಾರ್ಥಿಗಳಲ್ಲಿ ಕಲಿಕೆಯ ಬಗ್ಗೆ ಉದಾಸೀನ ಮತ್ತು ನಿರ್ಲಕ್ಷ್ಯ ಇರಬಹುದು. ಸರ್ಕಾರಿ ಕಾಲೇಜುಗಳ ಉಪನ್ಯಾಸಕರಿಗೆ ಅಷ್ಟೊಂದು ಸಂಬಳ ಕೊಡುತ್ತಿದ್ದರೂ ಆ ಕಾಲೇಜುಗಳಲ್ಲಿ ನಿರೀಕ್ಷಿತ ಫಲಿತಾಂಶ ಬಾರದಿದ್ದಲ್ಲಿ ಅದಕ್ಕೆ ಕಾರಣವಾದ ಅಂಶಗಳ ಬಗ್ಗೆ ಗಂಭೀರವಾಗಿ ಚರ್ಚಿಸುವಂತಹ ಕೆಲಸಕ್ಕೆ ಶಿಕ್ಷಣ ಇಲಾಖೆ ಮುಂದಾಗುತ್ತಿಲ್ಲ. ನೆಪಮಾತ್ರಕ್ಕೆ ಒಂದು ಸುತ್ತೋಲೆಯನ್ನು ಹೊರಡಿಸಿ ಕೈತೊಳೆದುಕೊಳ್ಳುವಂತಹ ಸ್ಥಿತಿ ಇದೆ.

ಕೆ.ಎನ್.ರಂಗನಾಥ್, ಉಜಿರೆ

ಪ್ರಕೃತಿ ಸೇವೆ: ಕಲಿಕೆ ಕಡ್ಡಾಯವಾಗಲಿ

ವೈಯಕ್ತಿಕ ನೆಲೆಯಲ್ಲಿ ಹಾಗೂ ಸಂಘಟಿತವಾಗಿ ಅಲ್ಲಲ್ಲಿ ಕೆರೆ ಮತ್ತು ಪರಿಸರ ಪೋಷಣೆಗೆ ಕಾಳಜಿ ವಹಿಸಿರುವ ಕೈಗಳನ್ನು ಚಂದ್ರಕಾಂತ ವಡ್ಡು ಅವರು ತಮ್ಮ ಲೇಖನದಲ್ಲಿ (ಪ್ರ.ವಾ., ಏ. 18) ಗುರುತಿಸಿರುವುದು ಸಮಯೋಚಿತ. ಪರಿಸರ ಇರಲಿ, ಜೀವಜಲದ ಬಗೆಗೂ ಎಲ್ಲೆಲ್ಲೂ ನಿರ್ಲಕ್ಷ್ಯ ಧೋರಣೆ ಎದ್ದುಕಾಣುತ್ತದೆ. ಬೆಂಗಳೂರು ಜಲಮಂಡಳಿಯು ಜಯನಗರದಲ್ಲಿ ಸರ್ ಎಂ. ವಿಶ್ವೇಶ್ವರಯ್ಯ ಮಳೆನೀರು ಧ್ಯೇಯೋದ್ಯಾನವನ್ನು (ಥೀಮ್ ಪಾರ್ಕ್) ಚೆನ್ನಾಗಿ ನಿರ್ವಹಿಸುತ್ತಿದೆ. ಆದರೆ, ಅದನ್ನು ನೋಡಲು, ಅದರಿಂದ ಕಲಿಯಲು ಶಾಲೆ, ಕಾಲೇಜು ಮಕ್ಕಳಿಗೆ ಆಸಕ್ತಿಯೇ ಇದ್ದಂತಿಲ್ಲ. ಯಾರೂ ಅತ್ತ ಸುಳಿಯುವುದೇ ಇಲ್ಲ. ಇದನ್ನು ಗಮನಿಸಿದಾಗ ಭಯ, ಆತಂಕ ಉಂಟಾಗುತ್ತದೆ.

ಪರಿಸರ ಸಂಘಟನೆಯ ಬಗೆಗೆ ಉಲ್ಲೇಖಿಸಿರುವ ಲೇಖಕರು, ವ್ಯಕ್ತಿಗಳ ಅಂತರಂಗದ ಬೆಳಕು ಸಂಘಟಿತ ಸ್ವರೂಪದಲ್ಲಿ ಆಗಬೇಕು ಎಂದು ಬಯಸಿದ್ದಾರೆ. ಆಶಯವೇನೊ ಒಳ್ಳೆಯದೆ. ಈಡೇರುವ ಬಗೆ? ಮಾನವೀಯ ಮೌಲ್ಯಗಳು ಮತ್ತು ಪ್ರಕೃತಿ ಸೇವೆ ಎಂಬ ಒಂದು ವಿಷಯವನ್ನು ಕಡ್ಡಾಯಗೊಳಿಸಿ ಶಿಕ್ಷಣದ ಎಲ್ಲ ಹಂತಗಳಲ್ಲಿ ಸೇರಿಸಬೇಕು. ಪರಿಸರದ ಬಗೆಗಿನ ಕಾಳಜಿಯನ್ನು ಎಳವೆಯಿಂದಲೇ ಮಕ್ಕಳಿಗೆ ಉಣಬಡಿಸಬೇಕು. ಆ ಮೂಲಕ ಮೌನಕ್ರಾಂತಿಯೊಂದಕ್ಕೆ ಮುನ್ನುಡಿ ಬರೆಯಬೇಕು. ಇಲ್ಲದಿದ್ದರೆ ಈ ಭೋಗಗ್ರಸ್ತ ಸಮಾಜದಲ್ಲಿ ಕೊನೆಯಲ್ಲಿ ಎಲ್ಲವೂ ಒಣ, ಒಣ...

ಸಿದ್ರಾಮಪ್ಪ ದಿನ್ನಿ, ಬೆಂಗಳೂರು

ಇದ್ಯಾವ ಬಗೆಯ ಚಿಕಿತ್ಸೆ?!

ಉತ್ತರಪ್ರದೇಶದ ಸರ್ಕಾರಿ ಆಸ್ಪತ್ರೆಯೊಂದರಲ್ಲಿ ನೆಗಡಿಗೆ ಚಿಕಿತ್ಸೆ ಪಡೆಯಲು ಬಂದ 4 ವರ್ಷದ ಮಗುವಿಗೆ ವೈದ್ಯರು ಸಿಗರೇಟ್ ಸೇದಿಸಿದ್ದಾರೆ ಎನ್ನಲಾದ ಪ್ರಕರಣ ದೇಶದಾದ್ಯಂತ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ಆ ವೈದ್ಯರನ್ನು ಕೂಡಲೇ ಅಮಾನತು ಮಾಡಿ ವಿಚಾರಣೆ ನಡೆಸಲಾಗಿದೆಯಂತೆ. ಯಾರೋ ಪುಂಡು ಪೋಕರಿಗಳು, ಪಡ್ಡೆ ಹುಡುಗರು ಅಥವಾ ಅಮಾಯಕರು ಈ ರೀತಿ ಮಾಡಿದ್ದರೆ ಹುಚ್ಚಾಟ ಎಂದು ತಳ್ಳಿಹಾಕಬಹುದಿತ್ತೇನೊ. ಆದರೆ ಇಂತಹ ಘನಕಾರ್ಯ ಮಾಡಿದ ವೈದ್ಯರಿಗೆ ಯಾವ ರೀತಿ ಶಿಕ್ಷೆ ನೀಡಬೇಕು?. ನಾಗರಿಕ ಜಗತ್ತಿನಲ್ಲಿ ಇಂತಹ ಕೃತ್ಯಗಳು ನಡೆಯುತ್ತವೆ ಎನ್ನುವುದನ್ನು ಊಹಿಸಲೂ ಅಸಾಧ್ಯ.

ರಮಾನಂದ ಶರ್ಮಾ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಅಮೆರಿಕದಲ್ಲಿ ಶಿಕ್ಷಣ ಭಾರತೀಯರ ಹಿಂದೇಟು

ಭಾರತದ ಉದ್ಯೋಗಾಕಾಂಕ್ಷಿಗಳು ಮತ್ತು ವಿದ್ಯಾರ್ಥಿಗಳ ಪಾಲಿಗೆ ಇದುವರೆಗೆ ಅಮೆರಿಕ ನೆಚ್ಚಿನ ದೇಶವಾಗಿತ್ತು. ಆದರೆ, ಡೊನಾಲ್ಡ್ ಟ್ರಂಪ್ ಅಧ್ಯಕ್ಷರಾದ ನಂತರ ಪರಿಸ್ಥಿತಿ ಬದಲಾಗಿದೆ. ಅಕ್ರಮ ವಾಸದ ಕಾರಣಕ್ಕೆ ನೂರಾರು ಭಾರತೀಯರನ್ನು ಅಮೆರಿಕದಿಂದ ವಾಪಸ್ ಕಳುಹಿಸಿದ ಬೆನ್ನಲ್ಲೇ ವಿದೇಶಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಹಲವು ನಿಯಮಗಳನ್ನು ಬಿಗಿಗೊಳಿಸಲಾಗುತ್ತಿದೆ; ಹೊಸ ಕಾನೂನುಗಳನ್ನು ರೂಪಿಸಲಾಗುತ್ತಿದೆ. ವೀಸಾ ತೊಡಕು, ಹೆಚ್ಚಿದ ವಿದ್ಯಾಭ್ಯಾಸ ವೆಚ್ಚ ಮತ್ತು ಬದಲಾಗುತ್ತಿರುವ ನಿಯಮಗಳಿಂದಾಗಿ ಭಾರತದ ವಿದ್ಯಾರ್ಥಿಗಳು ಅಮೆರಿಕಕ್ಕೆ ಹೋಗುವ ನಿರ್ಧಾರದಿಂದ ಹಿಂದೆ ಸರಿಯುತ್ತಿದ್ದಾರೆ. ಅಮೆರಿಕದಲ್ಲಿರುವ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಗಣನೀಯವಾಗಿ ಇಳಿಕೆಯಾಗುತ್ತಿದೆ



ಎರಡು ವಿಧದ ವೀಸಾ


ಅಮೆರಿಕದಲ್ಲಿ ಪೂರ್ಣಾವಧಿ ವಿದ್ಯಾರ್ಥಿಯಾಗಿ ಶಿಕ್ಷಣ ಪಡೆಯಬೇಕಾದರೆ ಅಭ್ಯರ್ಥಿಗಳು ವಲಸೆಯೇತರ ವಿದ್ಯಾರ್ಥಿ ವೀಸಾ ಹೊಂದಿರಬೇಕು.

ಅಮೆರಿಕ ಸರ್ಕಾರವು ವಿದ್ಯಾರ್ಥಿಗಳಿಗಾಗಿ ಎರಡು ರೀತಿಯ ವೀಸಾಗಳನ್ನು ನೀಡುತ್ತದೆ. 'ಎಫ್–1' ವಿದ್ಯಾರ್ಥಿ ವೀಸಾ ಮತ್ತು 'ಎಂ–1' ವಿದ್ಯಾರ್ಥಿ ವೀಸಾ (ಸಾಮಾನ್ಯವಾಗಿ ಇವುಗಳನ್ನು ಎಫ್ ವೀಸಾ ಮತ್ತು ಎಂ ವೀಸಾ ಎಂದು ಕರೆಯಲಾಗುತ್ತದೆ).

ಎಫ್–1 ವಿದ್ಯಾರ್ಥಿ ವೀಸಾ: ಅಮೆರಿಕದಲ್ಲಿರುವ ಮಾನ್ಯತೆ ಪಡೆದ ಶಾಲಾ- ಕಾಲೇಜುಗಳು ವಿಶ್ವವಿದ್ಯಾಲಯ ಸೇರಿದಂತೆ ವಿವಿಧ ಶಿಕ್ಷಣ ಸಂಸ್ಥೆಗಳು ಅಥವಾ ಭಾಷಾ ತರಬೇತಿ ಕೋರ್ಸ್‌ಗೆ ಸೇರಲು ಬಯಸುವ ವಿದ್ಯಾರ್ಥಿಗಳು ಎಫ್–1 ವೀಸಾ ಪಡೆಯಬೇಕಾಗುತ್ತದೆ. ಈ ವೀಸಾ ಪಡೆಯಲು ವಿದ್ಯಾರ್ಥಿಗಳು ಅಮೆರಿಕದ ಯಾವುದೇ ಶಿಕ್ಷಣ ಸಂಸ್ಥೆ ಅಥವಾ ಕೋರ್ಸ್‌ಗೆ ನೋಂದಣಿ ಮಾಡಿಕೊಳ್ಳಬೇಕಾಗುತ್ತದೆ.

ಎಂ–1 ವಿದ್ಯಾರ್ಥಿ ವೀಸಾ: ಭಾಷಾ ತರಬೇತಿ ಹೊರತಾದ ವೃತ್ತಿಪರ/ ಇತರ ಶೈಕ್ಷಣಿಕಯೇತರ ಕಾರ್ಯಕ್ರಮಗಳಿಗೆ ನೋಂದಣಿ ಮಾಡಲು ವಿದ್ಯಾರ್ಥಿಗಳು ಎಂ–1 ವಿದ್ಯಾರ್ಥಿ ವೀಸಾ ಹೊಂದಿರಬೇಕು.

ಭಾರತದ ವಿದ್ಯಾರ್ಥಿಗಳ ಸಂಖ್ಯೆ ಕುಸಿತ



ಶಿಕ್ಷಣ ವೆಚ್ಚವೂ ದುಬಾರಿ

ಅಮೆರಿಕದಲ್ಲಿ ಶಿಕ್ಷಣ ಪಡೆಯಲು ಭಾರತೀಯ ವಿದ್ಯಾರ್ಥಿಗಳು ಪ್ರತಿ ವರ್ಷ ಲಕ್ಷಾಂತರ ರೂಪಾಯಿ ಖರ್ಚು ಮಾಡಬೇಕು. ಇತ್ತೀಚಿನ ವರ್ಷಗಳಲ್ಲಿ ಅಮೆರಿಕದಲ್ಲಿ ಜೀವನ ನಿರ್ವಹಣರ ವೆಚ್ಚ ಹೆಚ್ಚಾಗಿದ್ದು, ದೇಶದ ವಿದ್ಯಾರ್ಥಿಗಳು ಅಮೆರಿಕದಿಂದ ವಿಮುಖರಾಗಲು ಇದು ಕೂಡ ಒಂದು ಕಾರಣ ಎಂದು ಹೇಳಲಾಗುತ್ತಿದೆ.

ಪ್ರವೇಶ ಪಡೆದಿರುವ ಕಾಲೇಜು, ವಿಶ್ವವಿದ್ಯಾಲಯ ಸರ್ಕಾರಿ ಆಗಿದ್ದರೆ ಶುಲ್ಕ ಸ್ವಲ್ಪ ಕಡಿಮೆ ಇರುತ್ತದೆ. ಖಾಸಗಿ ಕಾಲೇಜು, ವಿಶ್ವವಿದ್ಯಾಲಯ ಆಗಿದ್ದರೆ ಹೆಚ್ಚು ಶುಲ್ಕ ಪಾವತಿಸಬೇಕಾಗುತ್ತದೆ. ಪದವಿ ಕೋರ್ಸ್‌ಗಳಿಗೆ ಕಡಿಮೆ ಶುಲ್ಕವಿದ್ದರೆ, ಸ್ನಾತಕೋತ್ತರ ಪದವಿ ಕೋರ್ಸ್‌ಗಳಿಗೆ ಹೆಚ್ಚು ಶುಲ್ಕ ಇದೆ. ಕೋರ್ಸ್ ಶುಲ್ಕವಲ್ಲದೇ, ವಸತಿ ಸೇರಿದಂತೆ ಇತರ ವೆಚ್ಚಗಳಿಗಾಗಿಯೂ ವಿದ್ಯಾರ್ಥಿಗಳು ಲಕ್ಷಾಂತರ ರೂಪಾಯಿ ವ್ಯಯಿಸಬೇಕಾಗುತ್ತದೆ. ಪ್ರಮುಖ ನಗರ, ಪಟ್ಟಣಗಳಲ್ಲಿನ ಶಿಕ್ಷಣ ಸಂಸ್ಥೆಗಳಿಗೆ ಸೇರ್ಪಡೆಯಾದರೆ, ವಸತಿ, ಆಹಾರ ಸೇರಿದಂತೆ ಇತರ ಉದ್ದೇಶಗಳಿಗೆ ಹೆಚ್ಚು ವೆಚ್ಚ ಬರುತ್ತದೆ.



ವಿದೇಶದಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ನೆರವಾಗುವ ವಿವಿಧ ಕನ್ಸಲ್ಟೆನ್ಸಿ ಸಂಸ್ಥೆಗಳ ಪ್ರಕಾರ, ಅಮೆರಿಕದಲ್ಲಿ ಶಿಕ್ಷಣ ಪಡೆಯಲು ವಿದ್ಯಾರ್ಥಿಯೊಬ್ಬನಿಗೆ ವರ್ಷಕ್ಕೆ ಕನಿಷ್ಠ ₹25 ಲಕ್ಷದಿಂದ (30 ಸಾವಿರ ಡಾಲರ್) ₹70 ಲಕ್ಷದವರೆಗೂ (80 ಸಾವಿರ ಡಾಲರ್) ಖರ್ಚಾಗುತ್ತದೆ.

ಆಧಾರ: ಅಮೆರಿಕನ್ ಇಮಿಗ್ರೇಷನ್ ಲಾಯರ್ಸ್ ಅಸೋಸಿಯೇಷನ್ ವರದಿ, ಡಿಡಬ್ಲ್ಯು ವರದಿ, ಹೋಮ್‌ಲ್ಯಾಂಡ್ ಸೆಕ್ಯೂರಿಟಿ ಇಲಾಖೆ, ಎಸ್‌ಇವಿಐಎಸ್ ದತ್ತಾಂಶಗಳು

• ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಭಾರತದ ದೊಡ್ಡ ಸಂಖ್ಯೆಯ ವಿದ್ಯಾರ್ಥಿಗಳು ಅಮೆರಿಕದಲ್ಲಿ ಉನ್ನತ ವಿದ್ಯಾಭ್ಯಾಸ ಮಾಡಿ ನಂತರ ಅಲ್ಲಿಯೇ ಕೆಲಸ ಮಾಡುವ ಅವಕಾಶ ಪಡೆದು ನೆಲೆ ಕಂಡುಕೊಳ್ಳುವ ಕನಸು ಕಾಣುತ್ತಾರೆ. ಅದಕ್ಕಾಗಿ ಅಪಾರ ಶ್ರಮ ವಹಿಸಿ ಓದುವುದರ ಜತೆಗೆ ಕೋಟ್ಯಂತರ ರೂಪಾಯಿ ಖರ್ಚು ಕೂಡ ಮಾಡುತ್ತಿದ್ದಾರೆ. 2023–24ರಲ್ಲಿ ಅಮೆರಿಕದ ವಿದೇಶಿ ವಿದ್ಯಾರ್ಥಿಗಳಲ್ಲಿ ಭಾರತೀಯರೇ ಮೊದಲ ಸ್ಥಾನದಲ್ಲಿದ್ದರು. ನಂತರದ ಸ್ಥಾನದಲ್ಲಿ ಚೀನಾ ಮತ್ತಿತರ ದೇಶಗಳಿದ್ದವು. ಆದರೆ, ಡೊನಾಲ್ಡ್ ಟ್ರಂಪ್ ಅಧಿಕಾರಕ್ಕೇರಿದ ನಂತರ ಬದಲಾಗುತ್ತಿರುವ ವೀಸಾ ನೀತಿ, ಉದ್ಯೋಗ ಪರಿಸ್ಥಿತಿಗಳು ಮತ್ತು ವಲಸಿಗರ ವಿರುದ್ಧದ ಆಕ್ರಮಣಕಾರಿ ಧೋರಣೆಗಳಿಂದ ಇತ್ತೀಚೆಗೆ ಭಾರತದ ವಿದ್ಯಾರ್ಥಿಗಳು ಅಮೆರಿಕಕ್ಕೆ ಹೋಗುವುದಕ್ಕೆ ಹಿಂದೇಟು ಹಾಕುತ್ತಿದ್ದಾರೆ.

2025ರ ಮಾರ್ಚ್‌ವರೆಗಿನ ದತ್ತಾಂಶವನ್ನು ಪರಿಶೀಲಿಸಿದರೆ ಉನ್ನತ ಅಧ್ಯಯನಕ್ಕೆಂದು ಅಲ್ಲಿಗೆ ಹೋಗುತ್ತಿದ್ದ ದೇಶದ ವಿದ್ಯಾರ್ಥಿಗಳ ಪ್ರಮಾಣದಲ್ಲಿ ಶೇ 28ರಷ್ಟು ಕುಸಿತವಾಗಿದೆ. ಆಗಸ್ಟ್–ಸೆಪ್ಟೆಂಬರ್‌ನಲ್ಲಿ ಅಮೆರಿಕದಲ್ಲಿ ಶೈಕ್ಷಣಿಕ ವರ್ಷ ಆರಂಭವಾಗುತ್ತದೆ. 2024ರ ಜುಲೈ ತಿಂಗಳಲ್ಲಿ ಅಮೆರಿಕದಲ್ಲಿ 3,48,446 ಭಾರತೀಯ ವಿದ್ಯಾರ್ಥಿಗಳು ಇದ್ದರು. ಆಗಸ್ಟ್ ತಿಂಗಳ ಹೊತ್ತಿಗೆ ಇದು 2,55,447ಕ್ಕೆ ಕುಸಿದಿದೆ. 2025ರ ಮಾರ್ಚ್ ಅಂತ್ಯದ ಅಂಕಿ ಅಂಶ ಪ್ರಕಾರ, ಅಲ್ಲಿ 2,55,442 ವಿದ್ಯಾರ್ಥಿಗಳಿದ್ದಾರೆ.

ಒಪಿಟಿ ರದ್ದು ಮಸೂದೆ: ಇತ್ತೀಚೆಗೆ ಅಮೆರಿಕದ ಸಂಸತ್ತಿನಲ್ಲಿ ನ್ಯಾಯಯುತ ಕೌಶಲಗಳ ಅಮೆರಿಕನ್ ಕಾಯ್ದೆ–2025 (ಫೇರ್‌ನೆಸ್ ಫಾರ್ ಹೈ ಸ್ಕಿಲ್ಡ್ ಅಮೆರಿಕನ್ ಆ್ಯಕ್ಟ್) ಮಂಡಿಸಲಾಗಿದೆ. ಅದರಲ್ಲಿ ಆಪ್ಷನಲ್ ಪ್ರಾಕ್ಟಿಕಲ್ ಟ್ರೈನಿಂಗ್ (ಒಪಿಟಿ) ರದ್ದುಪಡಿಸಬೇಕು ಎನ್ನುವುದೂ ಸೇರಿದೆ. ಒಪಿಟಿ ಎಂದರೆ, ಶೈಕ್ಷಣಿಕ ಪದವಿಗೆ ಮುನ್ನ ಅಥವಾ ಶೈಕ್ಷಣಿಕ ಪದವಿಯ ನಂತರ ಕೆಲಸ ಮಾಡುವ ಮೂಲಕ ಗಳಿಸುವ ಅನುಭವ. ವಿದೇಶಿ ವಿದ್ಯಾರ್ಥಿಗಳು ಪದವಿ ಪಡೆದ ನಂತರ ಮೂರು ವರ್ಷ ಅಮೆರಿಕದಲ್ಲಿರಲು ಒಪಿಟಿ ಅವಕಾಶ ನೀಡುತ್ತದೆ. ಭಾರತವೂ ಸೇರಿದಂತೆ ಅಂತರರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಇದೊಂದು ಆಕರ್ಷಣೆಯಾಗಿತ್ತು. ನಂತರ ಬಹುತೇಕರು ಕಾಯಂ ಕೆಲಸ ಗಿಟ್ಟಿಸಿ, ಅಲ್ಲಿಯೇ ನೆಲಸುತ್ತಿದ್ದರು. ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ 2023 ಮತ್ತು 2024ರ ನಡುವೆ ಗಣನೀಯವಾಗಿ ಹೆಚ್ಚಾಗಲು ಒಪಿಟಿಯೇ ಕಾರಣವಾಗಿತ್ತು. ಈ ಒಪಿಟಿಯಿಂದಾಗಿ ಅಮೆರಿಕದ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ ಎನ್ನುವ ಕೂಗೆದ್ದಿತ್ತು. ಈಗ ಟ್ರಂಪ್ ಸರ್ಕಾರವು ಅದನ್ನು ರದ್ದುಪಡಿಸಲು ಮುಂದಾಗಿದೆ.

ವೀಸಾ ರದ್ದು ಕಾರ್ಯಾಚರಣೆ: ಅಮೆರಿಕದ ವಿದೇಶಾಂಗ ಇಲಾಖೆ ಮತ್ತು ವಲಸೆ ಮತ್ತು ಸುಂಕ ಜಾರಿ ಇಲಾಖೆ (ಐಸಿಇ) ವಿದೇಶಿ ವಿದ್ಯಾರ್ಥಿಗಳನ್ನು ಗುರಿಯಾಗಿಸಿ ತೀವ್ರ ಕಾರ್ಯಾಚರಣೆ ಆರಂಭಿಸಿವೆ. ಸಾಮಾಜಿಕ ಜಾಲತಾಣಗಳಲ್ಲಿ ವಿದ್ಯಾರ್ಥಿಗಳ ಪೋಸ್ಟ್‌ಗಳನ್ನು ಎಐ ಟೂಲ್ ಮೂಲಕ ಪರಿಶೀಲಿಸಲಾಗುತ್ತಿದೆ. ಅದರ ಆಧಾರದಲ್ಲಿ ಅಕ್ರಮ ಚಟುವಟಿಕೆಗಳಲ್ಲಿ ತೊಡಗಿದ್ದಾರೆ ಎನ್ನುವ ನೆಪ ಒಡ್ಡಿ ವಿದೇಶಿ ವಿದ್ಯಾರ್ಥಿಗಳ ವೀಸಾಗಳನ್ನು ರದ್ದು ಮಾಡಲಾಗುತ್ತಿದೆ. ಇದೇ ಮಾರ್ಚ್ ನಂತರದಲ್ಲಿ ಈ ರೀತಿ 1,024 ವೀಸಾಗಳನ್ನು ರದ್ದುಪಡಿಸಲಾಗಿದೆ.

> ಒಪಿಟಿ ಆಯ್ಕೆ ಮಾಡಿಕೊಂಡ ಭಾರತದ ಲಕ್ಷ ವಿದ್ಯಾರ್ಥಿಗಳು ಅಮೆರಿಕದಲ್ಲಿದ್ದಾರೆ. ಈ ಕಾರ್ಯಕ್ರಮ ರದ್ದಾದರೆ ಅಷ್ಟೂ ವಿದ್ಯಾರ್ಥಿಗಳು ಸಂಕಷ್ಟಕ್ಕೆ ಸಿಲುಕಲಿದ್ದಾರೆ

ಅಮೆರಿಕದಲ್ಲಿ ಭಾರತದ ವಿದ್ಯಾರ್ಥಿಗಳು

ವರ್ಷ	ವಿದ್ಯಾರ್ಥಿಗಳು
2019-20	2,49,221
2020-21	2,07,460
2021-22	2,32,851
2022-23	2,97,151
2023-24	3,77,620

ವಿದ್ಯಾರ್ಥಿ ವಿನಿಮಯ ಮತ್ತು ಮಾಹಿತಿ ವ್ಯವಸ್ಥೆಯಲ್ಲಿ (ಎಸ್‌ಇವಿಐಎಸ್) ವಿದ್ಯಾರ್ಥಿಗಳ/ಒಪಿಟಿ ಅಡಿ ಉದ್ಯೋಗ ಮಾಡುತ್ತಿರುವವರ ವಲಸೆಯ ಸ್ಥಿತಿಯನ್ನು ತೆಗೆದುಹಾಕುವ ಮೂಲಕವೂ ಕ್ರಮ ಜರುಗಿಸಲಾಗುತ್ತಿದೆ (ಎಸ್‌ಇವಿಐಎಸ್ ಎನ್ನುವುದು ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ಬಗ್ಗೆ ಅಲ್ಲಿನ ಗೃಹ ಇಲಾಖೆ ನಿರ್ವಹಿಸುವ ಮಾಹಿತಿ ವ್ಯವಸ್ಥೆ). ಇದರಿಂದಾಗಿ ಸಾವಿರಾರು ವಿದ್ಯಾರ್ಥಿಗಳು/ಉದ್ಯೋಗಸ್ಥರು ರಾತ್ರೋರಾತ್ರಿ ಅಕ್ರಮ ನಿವಾಸಿಗಳಾಗಿ ಬದಲಾಗುತ್ತಿದ್ದಾರೆ. ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ವಿರುದ್ಧದ ಈ ಕಾರ್ಯಾಚರಣೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಅಮೆರಿಕನ್ ಸಿವಿಲ್ ಲಿಬರ್ಟೀಸ್ ಯೂನಿಯನ್ (ಎಸಿಎಲ್‌ಯು) ಸೇರಿದಂತೆ ಹಲವು ಸಂಘಟನೆಗಳು ಒತ್ತಾಯಿಸಿವೆ. 2025 ಜ.20ರ ನಂತರ ಈ ರೀತಿ 4,736 ಎಸ್‌ಇವಿಐಎಸ್ ದಾಖಲೆಗಳನ್ನು ತೆಗೆದುಹಾಕಲಾಗಿದೆ ಎಂದು ಅಮೆರಿಕದ ವಲಸೆ ವಕೀಲರ ಸಂಘ ತಿಳಿಸಿದೆ.

ಇಂಥ 327 ಪ್ರಕರಣಗಳ ವಿವರಗಳನ್ನು ಕಲೆಹಾಕಿದ್ದ ಸಂಘವು, ಅದರಲ್ಲಿ ಶೇ 50ರಷ್ಟು ವಿದ್ಯಾರ್ಥಿಗಳು ಭಾರತೀಯರು ಎಂದು ಹೇಳಿದೆ. ನಂತರದ ಸ್ಥಾನದಲ್ಲಿ ಚೀನಾ, ದಕ್ಷಿಣ ಕೊರಿಯಾ, ಬಾಂಗ್ಲಾದೇಶ ಮುಂತಾದ ದೇಶಗಳ ವಿದ್ಯಾರ್ಥಿಗಳಿದ್ದಾರೆ. ಅದಕ್ಕೆ ಕಾಲೇಜು/ ವಿಶ್ವವಿದ್ಯಾಲಯಗಳಲ್ಲಿ ಪ್ಯಾಲೆಸ್ಟೀನ್ ಪರ ಘೋಷಣೆ ಕೂಗಿದ್ದು, ರಾಜಕೀಯ ಪ್ರತಿಭಟನೆಗಳಲ್ಲಿ ತೊಡಗಿದ್ದು, ಚಾಲನಾ ನಿಯಮ ಮೀರಿದ್ದು, ಪೊಲೀಸರೊಂದಿಗೆ ಸಂಘರ್ಷದಲ್ಲಿ ತೊಡಗಿದ್ದು ಹೀಗೆ ಹಲವು ರೀತಿಯ ಕಾರಣ ನೀಡಲಾಗಿದೆ. ಆದರೆ, ಈ ಬಗ್ಗೆ ಬಹುತೇಕ ವಿದ್ಯಾರ್ಥಿಗಳಿಗೆ ನೋಟಿಸ್ ಕೂಡ ನೀಡದೇ ಕ್ರಮ ಜರುಗಿಸಲಾಗಿದೆ. ಅನೇಕ ವಿದ್ಯಾರ್ಥಿಗಳು ತಮ್ಮ ವಿರುದ್ಧ ಹೊರಿಸಲಾದ ಆರೋಪಗಳಿಗೂ ತಮಗೂ ಸಂಬಂಧವೇ ಇಲ್ಲ ಎನ್ನುತ್ತಿದ್ದು, ಮನಸೋಇಚ್ಛೆ ಕಾನೂನು ಕ್ರಮ ಜರುಗಿಸಲಾಗುತ್ತಿದೆ ಎನ್ನುತ್ತಿದ್ದಾರೆ. ಕೆಲವು ವಿದ್ಯಾರ್ಥಿಗಳು ಈ ಬಗ್ಗೆ ನ್ಯಾಯಾಲಯದ ಮೆಟ್ಟಿಲು ಹತ್ತಿ ಆರೋಪಮುಕ್ತರಾಗಿದ್ದಾರೆ.

ವೀಸಾ ಪಡೆಯಲು ಹಲವು ರೀತಿಯ ತೊಡಕು; ವರ್ಷದಿಂದ ವರ್ಷಕ್ಕೆ ದುಬಾರಿಯಾಗುತ್ತಿರುವ ಶಿಕ್ಷಣ; ಟ್ರಂಪ್ ಸರ್ಕಾರದ ವಿಚಿತ್ರ ನಿಯಮಗಳಿಂದ ಭಾರತೀಯ ವಿದ್ಯಾರ್ಥಿಗಳಿಗೆ ಅಮೆರಿಕದ ಬಗ್ಗೆ ಇದ್ದ ಮೋಹ ಕಡಿಮೆಯಾಗುತ್ತಿದೆ. ಒಪಿಟಿ ರದ್ದತಿ, ದಿಢೀರ್ ವೀಸಾ ರದ್ದು ಕಾರ್ಯಾಚರಣೆಗಳಿಂದ ಮುಂದಿನ ದಿನಗಳಲ್ಲಿ ಅಮೆರಿಕದಲ್ಲಿನ ಭಾರತೀಯ ವಿದ್ಯಾರ್ಥಿಗಳ ಸಂಖ್ಯೆ ಮತ್ತಷ್ಟು ಕುಸಿಯಲಿದೆ ಎನ್ನಲಾಗುತ್ತಿದೆ.

ರಾಷ್ಟ್ರೀಯ / ರಾಜ್ಯ

ಕರ್ನಾಟಕ ಹೈಕೋರ್ಟ್‌ನ ನಾಲ್ವರು ನ್ಯಾಯಮೂರ್ತಿಗಳ ವರ್ಗಕ್ಕೆ ಶಿಫಾರಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನಾಲ್ವರು ಸೇರಿದಂತೆ ಏಳು ನ್ಯಾಯಮೂರ್ತಿಗಳ ವರ್ಗಾವಣೆಗೆ ಭಾರತದ ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ನೇತೃತ್ವದ ಸುಪ್ರೀಂ ಕೋರ್ಟ್ ಕೊಲಿಜಿಯಂ ಶಿಫಾರಸು ಮಾಡಿದೆ.

ಕರ್ನಾಟಕ ಹೈಕೋರ್ಟ್‌ನಿಂದ ನ್ಯಾಯಮೂರ್ತಿ ಹೇಮಂತ್ ಚಂದನ್‌ಗೌಡರ್ ಅವರನ್ನು ಮದ್ರಾಸ್ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಕೆ. ನಟರಾಜನ್ ಅವರನ್ನು ಕೇರಳಕ್ಕೆ, ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರನ್ನು ಗುಜರಾತ್‌ಗೆ ಮತ್ತು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರನ್ನು ಒಡಿಶಾ ಹೈಕೋರ್ಟ್‌ಗೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ.

ಇದಲ್ಲದೆ, ತೆಲಂಗಾಣ ಹೈಕೋರ್ಟ್‌ನಿಂದ ನ್ಯಾಯಮೂರ್ತಿ ಪೆರುಗು ಶ್ರೀ ಸುಧಾ ಅವರನ್ನು ಕರ್ನಾಟಕಕ್ಕೆ ಮತ್ತು ಕೆ. ಸುರೇಂದರ್ ಅವರನ್ನು ಮದ್ರಾಸ್ ಹೈಕೋರ್ಟ್‌ಗೆ, ಆಂಧ್ರಪ್ರದೇಶ ಹೈಕೋರ್ಟ್‌ನಿಂದ ನ್ಯಾಯಮೂರ್ತಿ ಕುಂಭಜದಲ ಮನ್ಮಥ ರಾವ್ ಅವರನ್ನು ಕರ್ನಾಟಕಕ್ಕೆ ವರ್ಗಾಯಿಸಲು ಶಿಫಾರಸು ಮಾಡಲಾಗಿದೆ. ಹೈಕೋರ್ಟ್‌ಗಳಲ್ಲಿ ಒಳಗೊಳ್ಳುವಿಕೆ, ವೈವಿಧ್ಯ ತುಂಬಲು ಮತ್ತು ನ್ಯಾಯಾಂಗದ ಆಡಳಿತದ ಗುಣಮಟ್ಟ ಹೆಚ್ಚಿಸಲು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಕೊಲಿಜಿಯಂ ತಿಳಿಸಿದೆ.

ಏಪ್ರಿಲ್ 15 ಮತ್ತು ಏಪ್ರಿಲ್ 19ರಂದು ಸಭೆ ನಡೆಸಿ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ವರ್ಗಾವಣೆ ವಿರುದ್ಧ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನ ನಾಲ್ವರು ನ್ಯಾಯಮೂರ್ತಿಗಳ ಹಠಾತ್ ವರ್ಗಾವಣೆ ವಿರೋಧಿಸಿರುವ ಬೆಂಗಳೂರು ವಕೀಲರ ಸಂಘ (ಎಎಬಿ), ಹೈಕೋರ್ಟ್‌ನ ಪದಾಂಕಿತ ಹಿರಿಯ ವಕೀಲರು ಹಾಗೂ ಎಲ್ಲ ವಕೀಲರು ಈ ಕುರಿತಂತೆ ಮಂಗಳವಾರ (ಏ.22) ಪ್ರತಿಭಟನೆ ನಡೆಸಲು ಉದ್ದೇಶಿಸಿದ್ದಾರೆ. ಅಂತೆಯೇ, ಈ ಕುರಿತು ಮುಂದಿನ ಕ್ರಮಗಳನ್ನು ಚರ್ಚಿಸಲು ಮಧ್ಯಾಹ್ನ 1.30ಕ್ಕೆ ಎಎಬಿ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ.

ವರ್ಗಾವಣೆ ಶಿಫಾರಸಿಗೆ ಸಂಬಂಧಿಸಿದಂತೆ ಹೈಕೋರ್ಟ್‌ನ, 'ಅಂತರರಾಷ್ಟ್ರೀಯ ನ್ಯಾಯಪಂಡಿತರ ಆಯೋಗದ ಕರ್ನಾಟಕ ವಿಭಾಗದ ಕರ್ನಾಟಕ ನ್ಯಾಯಪಂಡಿತರ ಟ್ರಸ್ಟ್' ಸಭಾಂಗಣದಲ್ಲಿ ಸೋಮವಾರ ಕರೆಯಲಾಗಿದ್ದ ಪದಾಂಕಿತ ಹಿರಿಯ ವಕೀಲರ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಎಎಬಿ ಅಧ್ಯಕ್ಷ ವಿವೇಕ ರೆಡ್ಡಿ, ಉಪಾಧ್ಯಕ್ಷ ಗಿರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಎಚ್.ವಿ.ಪ್ರವೀಣ್ ಗೌಡ ಮತ್ತು ಖಜಾಂಚಿ ಶ್ವೇತಾ ರವಿಶಂಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಹೈಕೋರ್ಟ್‌ನ 'ಗೋಲ್ಡನ್ ಗೇಟ್' ಮುಂಭಾಗ ಮಂಗಳವಾರ (ಏ.22) ಬೆಳಿಗ್ಗೆ 10.30 ರಿಂದ 11.30ರವರೆಗೆ ವಕೀಲರು ಬೃಹತ್ ಪ್ರತಿಭಟನೆ ನಡೆಸಲಿದ್ದಾರೆ. ಈ ಮೂಲಕ ನ್ಯಾಯಮೂರ್ತಿಗಳ ವರ್ಗಾವಣೆಯ ಶಿಫಾರಸು ನಿರ್ಧಾರವನ್ನು ತಕ್ಷಣವೇ ಹಿಂತೆಗೆದುಕೊಳ್ಳುವಂತೆ ಒತ್ತಾಯಿಸುವ ದಿಸೆಯಲ್ಲಿ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗಳನ್ನು ಭೇಟಿ ಮಾಡಲು ನಿರ್ಧರಿಸಲಾಗಿದೆ' ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಉಪಗ್ರಹಗಳ ಜೋಡಿಸುವ ಪ್ರಕ್ರಿಯೆ ಎರಡನೇ ಬಾರಿಯೂ ಯಶಸ್ವಿ'

ನವದೆಹಲಿ (ಪಿಟಿಐ): ಬಾಹ್ಯಾಕಾಶದಲ್ಲಿ ಎರಡು ಉಪಗ್ರಹಗಳನ್ನು ಜೋಡಿಸುವ 'ಸ್ಪೇಸ್ ಡಾಕಿಂಗ್ ಎಕ್ಸ್‌ಪೆರಿಮೆಂಟ್' (ಸ್ಪೇಡೆಕ್ಸ್) ಕಾರ್ಯಾಚರಣೆ ಮತ್ತೊಂದು ಹಂತದಲ್ಲಿ ಇಸ್ರೊ ಯಶಸ್ವಿಯಾಗಿದೆ. ಈ ಮೂಲಕ ಎರಡನೇ ಬಾರಿಯೂ ಉಪಗ್ರಹಗಳನ್ನು ಜೋಡಿಸುವಲ್ಲಿ ಯಶ ಸಾಧಿಸಿದೆ.

ಈ ಬಗ್ಗೆ ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತೇಂದ್ರ ಸಿಂಗ್ ಅವರು ಸೋಮವಾರ ಮಾಹಿತಿ ಹಂಚಿಕೊಂಡಿದ್ದಾರೆ.

'2024ರ ಡಿ.30ರಂದು ರಾಕೆಟ್ ಉಡಾವಣೆ ಮಾಡಲಾಗಿತ್ತು. 2025ರ ಜ.16ರಂದು ಉಪಗ್ರಹಗಳನ್ನು ಯಶಸ್ವಿಯಾಗಿ ಜೋಡಿಸಲಾಗಿತ್ತು. ಬಳಿಕ ಮಾರ್ಚ್ 13ರಂದು ಉಪಗ್ರಹಗಳನ್ನು ಬೇರ್ಪಡಿಸಲಾಗಿತ್ತು. ಈಗ ಮತ್ತೊಮ್ಮೆ ಉಪಗ್ರಹಗಳನ್ನು ಜೋಡಿಸಲಾಗಿದೆ' ಎಂದು ಹೇಳಿದರು.

'ಮುಂದಿನ ಎರಡು ವಾರಗಳಲ್ಲಿ ಇನ್ನಷ್ಟು ಪ್ರಯೋಗಗಳನ್ನು ಮಾಡುವ ಬಗ್ಗೆ ಯೋಚಿಸಲಾಗಿದೆ' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಉದ್ರಿಕ್ತ ಜನರ ಗುಂಪೊಂದು ಪೊಲೀಸ್ ಅಧಿಕಾರಿಯ ಮೊಬೈಲ್ ಫೋನ್ ಅನ್ನು ಕಸಿದುಕೊಳ್ಳುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದು ವಕ್ಫ್ ಕಾಯ್ದೆಗೆ ಸಂಬಂಧಿಸಿದ ಹಿಂಸಾಚಾರದ ವಿಡಿಯೊ ಎಂದೂ ಪಶ್ಚಿಮ ಬಂಗಾಳದ ಮುರ್ಶಿದಾಬಾದ್‌ನಲ್ಲಿ ಘಟನೆ ನಡೆದಿದೆ ಎಂದೂ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದನೆ ಮಾಡುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

ವಿಡಿಯೊ ಅನ್ನು ರಿವರ್ಸ್ ಇಮೇಜ್ ಸರ್ಚ್‌ಗೆ ಒಳಪಡಿಸಿದಾಗ, ಇದೇ ವಿಡಿಯೊವನ್ನು 2019ರ ಫೆಬ್ರುವರಿ 24ರಂದು ಬಿಜೆಪಿಯ ಹೊಸೂರು ಘಟಕದ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿರುವುದು ಕಂಡುಬಂತು. 'ತಮಿಳುನಾಡಿನ ವೆಲ್ಲೂರು ಜಿಲ್ಲೆಯ ವಣಿಯಂಬಾಡಿಯ ಮುಸ್ಲಿಂ ಬಾಹುಳ್ಯದ ಪ್ರದೇಶದಲ್ಲಿ ಪೊಲೀಸ್ ಇಲಾಖೆಯ ಪರಿಸ್ಥಿತಿ ಇದು' ಎಂದು ಅಡಿಬರಹದಲ್ಲಿ ಬರೆಯಲಾಗಿದೆ. ತಮಿಳುನಾಡಿನಲ್ಲಿ ಇತ್ತೀಚೆಗೆ ಈ ಘಟನೆ ನಡೆದಿದೆ ಎಂದು ಕೆಲವರು ಈ ವಿಡಿಯೊವನ್ನು ಮತ್ತೆ ಹಂಚಿಕೊಂಡಿದ್ದರು. ಆಗ ತಿರುಪತ್ತೂರು ಪೊಲೀಸರು ಇದು 2019ರ ವಿಡಿಯೊ ಎಂದು ಸ್ಪಷ್ಟೀಕರಣ ನೀಡಿದ್ದರು. ಈಗ ಮತ್ತೆ ಕೆಲವರು ಇದು ಪಶ್ಚಿಮ ಬಂಗಾಳದ ವಿಡಿಯೊ ಎಂದು ಸುಳ್ಳು ಪ್ರತಿಪಾದನೆಗಳೊಂದಿಗೆ ಹಂಚಿಕೊಳ್ಳುತ್ತಿದ್ದಾರೆ ಎಂದು ಫ್ಯಾಕ್ಟ್‌ಲಿ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಕಣ್ಣೀರು ಒರೆಸುವ ಕೈ ದೊಡ್ಡದು!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

178

ಮನುಷ್ಯ ಅದ್ಭುತ ಶಕ್ತಿಯ ಆಗರ. ಮನುಷ್ಯನಿಗೆ ಶಕ್ತಿಯ ವಿಕಾಸಕ್ಕಾಗಿ ಈ ಸುಂದರ ದೇಹ ಇದೆ, ಇಂದ್ರಿಯಗಳಿವೆ; ಮನಸ್ಸು ಇದೆ. ಇವುಗಳಿಂದ ಮನುಷ್ಯ ಸುಂದರ ಬದುಕು ಕಟ್ಟಿಕೊಳ್ಳಬೇಕು. ವಿವೇಕದ ಕಣ್ಣಿನಿಂದ ಈ ಜಗತ್ತನ್ನು ನೋಡಿದರೆ ಯಾವುದು ಸತ್ಯ ಯಾವುದು ಮಿಥ್ಯ, ಯಾವುದು ಕೆಟ್ಟದ್ದು ಯಾವುದು ಒಳ್ಳೆಯದು ಎನ್ನುವುದು ಗೊತ್ತಾಗುತ್ತದೆ. ಸೂಕ್ಷ್ಮ ಚಕ್ಷುಗಳಿಂದ ನೋಡಿ ಯಾವುದು ಸತ್ಯ ಎಂದು ತಿಳಿದು ಅದನ್ನು ಹೀರಿಕೊಳ್ಳಬೇಕು. ಅದರಂತೆ ನಡೆಯಬೇಕು. ತಾಯಂದಿರು ಅನ್ನ ಮಾಡುತ್ತಾರೆ. ಅನ್ನ ಮಾಡುವುದಕ್ಕೆ ಮೊದಲು ಅಕ್ಕಿಯಲ್ಲಿ ಕಲ್ಲು, ಭತ್ತ ಆರಿಸುತ್ತಾರೆ. ಕಸ ಇದ್ದ ಅಕ್ಕಿಯಲ್ಲಿ ಅನ್ನ ಮಾಡಿದರೆ ಹೊಟ್ಟೆ ಕೆಡುತ್ತದೆ. ಹಾಗೆಯೇ ಜಗತ್ತಿನಲ್ಲಿ ಕೆಟ್ಟದ್ದು ಒಳ್ಳೆಯದು ಒಟ್ಟಿಗೇ ಇರುತ್ತವೆ. ಕೆಟ್ಟದ್ದನ್ನು ತೆಗೆದು ಒಳ್ಳೆಯದನ್ನು ಆಯ್ಕೆ ಮಾಡಿಕೊಂಡರೆ ಬದುಕು ಸುಂದರವಾಗುತ್ತದೆ. ಇದು ದರ್ಶನ. ನಮ್ಮ ಬದುಕು ಯಾಕೆ ಕೆಟ್ಟಿದೆ ಎಂದರೆ, ನಾವು ಯಾವುದು ಕೆಟ್ಟದ್ದು ಯಾವುದು ಒಳ್ಳೆಯದು ಎನ್ನುವುದನ್ನು ಸೂಕ್ಷ್ಮವಾಗಿ ತಿಳಿದುಕೊಂಡಿಲ್ಲ. ದೇವರು ಅದ್ಭುತವಾದ ಮನಸ್ಸು ಕೊಟ್ಟಿದ್ದಾನೆ. ಅದನ್ನು ಬಳಸಿ ಒಳ್ಳೆಯದು ಕೆಟ್ಟದ್ದು ತಿಳಕೋಬೇಕು.

ಜಗತ್ತಿನಲ್ಲಿ ಯಾರು ದೊಡ್ಡವರಾಗುತ್ತಾರೆ? ದೊಡ್ಡ ಕುರ್ಚಿಯಲ್ಲಿ ಕುಳಿತವರು ದೊಡ್ಡವರಾಗೋದಿಲ್ಲ. ಬಹಳ ದುಡ್ಡಿದ್ದವರು, ಬಹಳ ದೊಡ್ಡ ಮನೆ ಇದ್ದವರು ದೊಡ್ಡವರಾಗುತ್ತಾರೆ ಎಂದು ತಿಳಕೊಂಡಿದ್ದೇವೆ. ಆದರೆ ಗಾಂಧೀಜಿ ಅವರ ಹತ್ತಿರ ಯಾವುದೂ ಇರಲಿಲ್ಲ. ಆದರೂ ಅವರನ್ನು ಜಗತ್ತು ಮಹಾತ್ಮ ಅಂತ ಕರೀತು. ಬಸವಣ್ಣನವರ ಬಳಿಯೂ ಏನೂ ಇರಲಿಲ್ಲ. ಬುದ್ಧನ ಬಳಿಯೂ ಏನೂ ಇರಲಿಲ್ಲ. ಯಾರ ಬಳಿ ದೊಡ್ಡ ಮನಸ್ಸು ಇರುತ್ತದೋ ಅವನು ದೊಡ್ಡವನಾಗುತ್ತಾನೆ. ನಮ್ಮ ಮನಸ್ಸು ಸಂಕುಚಿತವಾಗಿದೆ. ನಾವು ಪ್ರೀತಿಯ ಭಿಕ್ಷೆಯನ್ನು ಕೇಳುತ್ತಿದ್ದೇವೆ. ನಮ್ಮ ಮನೆಯವರು, ಸ್ನೇಹಿತರು, ನೆರೆಹೊರೆಯವರು ಪ್ರೀತಿ ಮಾಡಲಿಲ್ಲ ಎಂದು ಕೊರಗುತ್ತೇವೆ. ಆದರೆ ದೇವರು ನಮ್ಮೆಲ್ಲರ ಹೃದಯದಲ್ಲಿ ಪ್ರೇಮದ ಸಮುದ್ರ ತುಂಬಿದ್ದಾನೆ. ಆದರೆ ನಾವು ಇನ್ನೊಬ್ಬರ ಪ್ರೀತಿ ಕೇಳಿ ಭಿಕ್ಷುಕರಾದೆವೇ ವಿನಾ ನಮ್ಮ ಎದೆಯೊಳಗಿರುವ ಪ್ರೇಮವನ್ನು ಹಂಚಿ ದಾನಿಗಳಾಗಲಿಲ್ಲ. ಇದು ಮನುಷ್ಯನ ದುರ್ದೈವ. ಮನುಷ್ಯ ಹಂಚುವುದನ್ನು ಕಲಿಯಬೇಕು.

ಋಷಿಗಳು ಬೆಳಿಗ್ಗೆ ಎದ್ದ ತಕ್ಷಣ 'ದೇವನೇ ನನ್ನ ಕಣ್ಣುಗಳು ಒಳ್ಳೆಯದನ್ನು ನೋಡಲಿ, ನನ್ನ ಕಿವಿಗಳು ಒಳ್ಳೆಯದನ್ನೇ ಕೇಳಲಿ, ನನ್ನ ಮನಸ್ಸು, ನನ್ನ ದೇಹದ ಎಲ್ಲ ಅಂಗಗಳು ಒಳ್ಳೆಯದನ್ನೇ ಮಾಡಲಿ' ಎಂದು ಬೇಡಿಕೊಳ್ಳುತ್ತಿದ್ದರು. ದೇವರು ನಮಗೆ ಅದ್ಭುತವಾದ ಇಂದ್ರಿಯಗಳನ್ನು ಕೊಟ್ಟಿದ್ದಾನೆ. ಸರಿಯಾಗಿ ಬಳಸದಿದ್ದರೆ ಇವು ಕೆಟ್ಟು ಹೋಗುತ್ತವೆ. ಕಾಲು ಸಣ್ಣದಿರಬಹುದು; ಆದರೆ ಹಿಮಾಲಯವನ್ನು ಹತ್ತುವ ಸಾಮರ್ಥ್ಯ ಇದೆ. ಕೈ ಸಣ್ಣದೇ ಇರಬಹುದು. ಆದರೆ ಸಾವಿರ ಸಾವಿರ ಜನರ ಕಣ್ಣೀರು ಒರೆಸುವ ಸಾಮರ್ಥ್ಯ ಇದೆ. ಗೆದ್ದಾಗ ಚಪ್ಪಾಳೆ ಹೊಡೆಯುವ ಕೈಗಳಷ್ಟೇ ದೊಡ್ಡದಾಗೋದಿಲ್ಲ. ಸೋತ ವ್ಯಕ್ತಿಯ ಕಣ್ಣೀರು ಒರೆಸುವ ಕೈಗಳೂ ದೊಡ್ಡದಾಗುತ್ತವೆ. ಕೈಗಳನ್ನು ಸರಿಯಾಗಿ ಬಳಸಿದರೆ ಬೇಲೂರು, ಹಳೆಬೀಡು, ಹಂಪಿ ನಿರ್ಮಾಣವಾಗುತ್ತದೆ. ಒಂದು ಉಪಕರಣದ ಮೇಲೆ ಕೈಯಾಡಿಸಿದರೆ ರಾಗಗಳು ಉತ್ಪತ್ತಿಯಾಗುತ್ತವೆ. ಅಂತಹ ಸಾಮರ್ಥ್ಯ ಕೈಗಳಿಗೆ ಇದೆ. ಕೈಯಲ್ಲಿ ದುಡಿದು ಗಳಿಸಬೇಕೇ ವಿನಾ ಇನ್ನೊಬ್ಬರತ್ತ ಬೇಡಿ ಭಿಕ್ಷುಕನಾಗಬಾರದು ಮನುಷ್ಯ. ಅದಕ್ಕೆ ಮನುಷ್ಯ ದುಡಿದು ಬದುಕುವುದನ್ನು ಕಲಿಯಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಏಪ್ರಿಲ್ 22, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಕೃಷ್ಣನವಮಿ ಗಂ. 18-13, ನಕ್ಷತ್ರ: ಶ್ರವಣ ಗಂ. 12-44 ಯೋಗ: ಶುಭ ಗಂ. 21-13 ಕರಣ: ತೈತಿಲ ಗಂ. 6-42, ಮೇಷ ಮಾಸದ 09 ನೇ ದಿನ.

ರಾಹುಕಾಲ: ಮಧ್ಯಾಹ್ನ 03-00 – 04-30

ಸೂರ್ಯೋದಯ: 06-17 **ಸೂರ್ಯಾಸ್ತ:** 06-41

ಮುಸ್ಲಿಂ ದಿನಾಂಕ: 23 ಶವ್ವಾಲ್

ಅದೃಷ್ಟ ಸಂಖ್ಯೆ: 4, 3

ಮೇಷ: ಎಂಜಿನಿಯರಿಂಗ್ ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ವಿಶೇಷ ಸಾಧನೆ ತೋರಿರುವುದರಿಂದ ವಿದೇಶಕ್ಕೆ ತೆರಳುವ ಸಂಭವವಿದೆ. ಆಭರಣ ಮಾರಾಟಗಾರರಿಗೆ ಕೆಲಸ ಹೆಚ್ಚಿರಲಿದೆ.

ವೃಷಭ: ಬಹು ವಿಧದ ಉದ್ಯೋಗಾವಕಾಶಗಳು ಬರಲಿವೆ. ಅದನ್ನು ಸದುಪಯೋಗಪಡಿಸಿಕೊಳ್ಳುವಲ್ಲಿ ಪ್ರಾಮಾಣಿಕವಾಗಿ ತೊಡಗಿಸಿಕೊಳ್ಳಿ. ಷೇರಿನಲ್ಲಿ ಹೆಚ್ಚು ಹಣ ತೊಡಗಿಸಬಹುದು.

ಮಿಥುನ: ಕ್ರೀಡಾಪಟುಗಳಿಗೆ, ಸಂಗೀತಗಾರರಿಗೆ ಸಾಧನೆಯ ಅವಕಾಶ ಸಿಕ್ಕಿದರೂ ಅನಾರೋಗ್ಯ ಎದುರಾಗಬಹುದು. ಶ್ರಮಕ್ಕೆ ತಕ್ಕ ಸಂಪಾದನೆ ಹೆಚ್ಚುವುದು. ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು.

ಕರ್ಕಾಟಕ: ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ಪ್ರಚಾರದ ಜೊತೆಗೆ ರಾಜಕೀಯ ಸೇರಲು ಆಹ್ವಾನ ದೊರೆಯಬಹುದು. ಧರ್ಮ ಕಾರ್ಯಗಳಲ್ಲಿ ಭಾಗವಹಿಸುವ ಯೋಗ ಸಿಗುವುದು.

ಸಿಂಹ: ಮುಕ್ತ ಮನೋಭಾವ ನೀವಾಡುವ ಮಾತುಗಳಿಂದ ಬಹಿರಂಗಗೊಳ್ಳಲಿದೆ. ಆರನೆಯ ಇಂದ್ರಿಯದ ಸಹಾಯ ಉಪಯುಕ್ತವಾಗಲಿದೆ. ಕಪ್ಪು ಬಣ್ಣವು ಅದೃಷ್ಟವನ್ನು ಬದಲಾಯಿಸಲಿದೆ.

ಕನ್ಯಾ: ನಿರುದ್ಯೋಗಿಗಳು ಬಂದ ಅವಕಾಶವನ್ನು ಒಪ್ಪಿಕೊಳ್ಳುವುದು ಸದ್ಯದ ಪರಿಸ್ಥಿತಿಗೆ ಉತ್ತಮವಾಗಿ ಕಾಣುತ್ತದೆ. ಹಣದ ವಿಚಾರದಲ್ಲಿ ಖರ್ಚು-ವೆಚ್ಚಗಳ ವಿಷಯದಲ್ಲಿ ಜಾಗ್ರತೆ ಇರಲಿ. ಅಪೇಕ್ಷಿತರಿಗೆ ಸಂತಾನ ಭಾಗ್ಯ ಇದೆ.

ತುಲಾ: ವೈದ್ಯರ ಸಲಹೆಯಂತೆ ವ್ಯಾಯಾಮ ಮತ್ತು ಯೋಗಾಭ್ಯಾಸವನ್ನು ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನ ಮಾಡಿ. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ.

ವೃಶ್ಚಿಕ: ಪ್ರಸ್ತುತ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ, ಪೋಷಣೆಯ ಬಗ್ಗೆ ಸಂಬಂಧ ಪಟ್ಟವರಲ್ಲಿ ಚರ್ಚಿಸುವುದು ಉತ್ತಮ. ಆಸೆಯಂತೆ ವಿದೇಶಿ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಲಭಿಸುವುದು.

ಧನು: ಸಮಾಜದಲ್ಲಿನ ಮುಂದಾಳತ್ವವನ್ನು ಜನರು ಮೆಚ್ಚಿ, ದೊಡ್ಡ ದೊಡ್ಡ ವಿಚಾರಗಳಿಗೆ ಸಲಹೆಗಳನ್ನು ಕೇಳುವಂತಾಗಲಿದೆ. ಮೇಲಧಿಕಾರಿಗಳ ಮೆಚ್ಚುಗೆ ಪಡೆಯಲು ಕೆಲವು ತಂತ್ರಗಾರಿಕೆಯನ್ನು ನಡೆಸಬೇಕಾಗುತ್ತದೆ.

ಮಕರ: ತಂದೆ ಮಕ್ಕಳಲ್ಲಿ ಭಿನ್ನಾಭಿಪ್ರಾಯ ಮೂಡುವಂತಹ ಘಟನೆ ನಡೆಯಲಿದೆ. ಕುಲದ ಕಸುಬು ನಡೆಸುವವರಿಗೆ ಅತ್ಯಂತ ಲಾಭವಾಗುವುದು. ದೇಹದಲ್ಲಿ ಪಿತ್ತಾಧಿಕ್ಯದಿಂದ ಅನಾರೋಗ್ಯ ಉಂಟಾಗಬಹುದು.

ಕುಂಭ: ಒಂದು ಬಾರಿ ಯೋಚಿಸಿ ಮುನ್ನಡೆದ ಹೆಜ್ಜೆಯನ್ನು ಪುನಃ ಹಿಂದಿಡುವ ಕೆಲಸ ಮಾಡದಿರಿ. ಆಹಾರ ಪದಾರ್ಥದ ಮಾರಾಟ ನಡೆಸುವವರು ಗ್ರಾಹಕರ ಆರೋಗ್ಯದ ಬಗ್ಗೆ ಗಮನ ವಹಿಸಿ.

ಮೀನ: ಆರಕ್ಷಕ ಸಿಬ್ಬಂದಿಗೆ ವರ್ಗಾವಣೆಯಾಗುವ ಸಂಭವವಿದೆ. ದಾಂಪತ್ಯದಲ್ಲಿ ಆಗಾಗ ಸಮಸ್ಯೆಗಳು ತೋರಿಬಂದರೂ ಮುಂದಿನ ದಿನಗಳಲ್ಲಿ ಸಂತಸವಿದೆ. ಅನಿವಾರ್ಯವಾಗಿ ದೂರ ಪ್ರಯಾಣ ಕೈಗೊಳ್ಳ ಬೇಕಾಗುವುದು.

ಪದಬಂಧ 6019


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಒಪ್ಪವಾಗಿ ಕಾಪಾಡುವವ ಬಂದಿದ್ದಾನೆ (5)
4.ಈತ ಎಲ್ಲವನ್ನೂ ತಿಳಿದವನು (3)
5.ವರ ಮಾಡಿರುವ ಒತ್ತಾಯ (3)
6.ವೀಣೆಯಲ್ಲಿ ನೆಟ್ಟಿರುವ ದೃಷ್ಟಿ! (3)
7.ನೂಲು ತೆಗೆಯುವ ಸಾಧನ (3)
9.ಹತ್ತಿರಕ್ಕೆ ಹೋದಾಗ ಕಾಣಿಸಿದ ಅರಳೆ (2)
10.ಆರ್ಭಟದಲ್ಲಿನ ಕ್ರೀಡೆ! (2)
12.ಔಚಿತ್ಯವನ್ನು ಮೀರಿದ ಸ್ನೇಹ (3)
14.ಮಜದಲ್ಲಿ ಕಾಲ ಕಳೆಯುತ್ತಿರುವ ಮನುಷ್ಯ (3)
15.ಮೋಕ್ಷ ಮಾಡಿಸಿಕೊಂಡಿರುವ ಕೆನ್ನೆ ಉಲ್ಟಾ ಕಾಣುತ್ತಿದೆ (3)
16.ಮರೆವೆ ಹೀಗೆ ಬಂದಿದೆಯಲ್ಲಾ? (3)
17.ರುಚಿಕಟ್ಟಾದ ಭೋಜನ (5)

ಮೇಲಿಂದ ಕೆಳಕ್ಕೆ

1.ಕೃಷ್ಣನ ಮೊಮ್ಮಗ (4)
2.ಮೃಗದ ನಡುವಳಿಕೆಯಿದು (5)
3.ಕಲ್ಲಿನಿಂದ ಬೀಸಿ ಹೊಡೆಯುವ ಸಾಧನ (3)
4.ಎಡಬಿಡದೆ ಎಂದು ಹೀಗೆನ್ನಿ (3)
8.ಆಟದ ಕೊನೆಗೆ ತೆರೆದ ಬಾಗಿಲು! (3)
9.ಪ್ರಾತಃಕಾಲದಿಂದ ಸಂಜೆವರೆಗಿನ ಕಾಲ (3)
10.ಸಸ್ಯಗಳು ನೀಡುವ ಪ್ರಾಣವಾಯುವಿದು (5)
11.ಕೊನೆಗೆ ರಾಳವನ್ನಿಟ್ಟಾಗಲೇ ನಡುವಣ ವಸ್ತು ಗೋಚರ (4)
13.ಗೆಳೆಯನ ಜೊತೆಯಿರುವ ಸ್ನೇಹಿತೆ (3)
14.ಮರದೊಳಗೆ ಕಾಣಿಸಿದ ಮೊಸಳೆ (3)



6018ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಧೋಗತಿ 3.ಕಷಾಯ
5.ಗದ್ಗದ 7.ಒಸಡು
8.ಸಮೂಹಗಾನ
11.ಗಲಾಟೆ 12.ಬಕ್ಕರಿ
15.ಪರೋಕ್ಷ 16.ಆಜುಬಾಜು

ಮೇಲಿಂದ ಕೆಳಕ್ಕೆ
1.ಅಭ್ಯಂಗ 2.ತಿಪ್ಪೆ
3.ಕರಡು 4.ಯಮಶಿಕ್ಷೆ
6.ದವಸ 7.ಒಣಹರಟೆ
9.ನವಾಬ 10.ಪರಿತಾಪ
11.ಗವಾಕ್ಷ 13.ರಿವಾಜು
14.ಮೇಳ

ಸುಡೊಕು 6404

	7			6			5	
2					5		6	
		1	2			4		9
		2		5			4	
4					6			
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6403 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

252
ಒಟ್ಟು ಕಾರ್ಡಿನಲ್‌ಗಳ ಸಂಖ್ಯೆ

136
80 ವರ್ಷ ಒಳಗಿರುವ ಕಾರ್ಡಿನಲ್‌ಗಳ ಸಂಖ್ಯೆ (80 ವರ್ಷ ಒಳಗಿನವರು ಮಾತ್ರವೇ ಪೋಪ್ ಆಯ್ಕೆ ಚುನಾವಣೆಯಲ್ಲಿ ಮತ ಚಲಾಯಿಸಬಹುದಾಗಿದೆ. 80 ವರ್ಷ ಮೇಲ್ಪಟ್ಟವರು ಚರ್ಚೆಯಲ್ಲಿ ಮಾತ್ರವೇ ಭಾಗವಹಿಸ ಬಹುದು)



6
ಭಾರತದ ಕಾರ್ಡಿನಲ್‌ಗಳ ಸಂಖ್ಯೆ (ಮತಚಾಯಿಸುವ ಅಧಿಕಾರ ಇರುವುದು ನಾಲ್ವರಿಗೆ ಮಾತ್ರ)


92
ಮೂರನೇ ಎರಡರಷ್ಟು ಮತಕ್ಕಿಂತ ಒಂದು ಹೆಚ್ಚಿನ ಮತ ಪಡೆಯುವ ವ್ಯಕ್ತಿಯು ನೂತನ ಪೋಪ್ ಆಗಿ ಆಯ್ಕೆಯಾಗುತ್ತಾರೆ

ಆಧಾರ: ಎಪಿ, ರಾಯಿಟರ್ಸ್, ಬಿಬಿಸಿ

ನೂತನ ಪೋಪ್ ಆಯ್ಕೆಗೆ ಶತಮಾನಗಳ ಇತಿಹಾಸವಿದೆ. ಸೇಂಟ್ ಪೀಟರ್ ಅವರು (ದೊರಕಿರುವ ಐತಿಹಾಸಿಕ ಸಾಕ್ಷ್ಯಗಳ ಅನುಸಾರ) ಮೊದಲ ಪೋಪ್ ಆಗಿದ್ದರು. ತಮ್ಮ ಮುಂದಿನ ಪೋಪ್‌ನ ನೇಮಕವನ್ನು ಅವರೇ ಮಾಡಿದ್ದರಂತೆ. ಕಾಲ ಕಳೆದಂತೆ ಈ ಸಂಪ್ರದಾಯವು ಅಂತ್ಯವಾಗಿ ಚುನಾವಣೆ ಮೂಲಕ ಪೋಪ್ ಆಯ್ಕೆಯನ್ನು ಮಾಡಲಾಗುತ್ತಿದೆ. ಕಾಲ ಕಾಲಕ್ಕೆ ಚುನಾವಣಾ ಪ್ರಕ್ರಿಯೆ ಕೂಡ ಬದಲಾಗಿದೆ. ತಮ್ಮ ಸಂವಿಧಾನಕ್ಕೆ ತಿದ್ದುಪಡಿ ತಂದುಕೊಳ್ಳುವ ಮೂಲಕ ಬದಲಾವಣೆಗಳನ್ನು ಮಾಡಲಾಗಿದೆ. ಪೋಪ್ ಆಯ್ಕೆ ಹೇಗೆ? ಎಂಬ ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಪೋಪ್ ಆಯ್ಕೆಗೆ ಮತದಾನ

- ಪೋಪ್ ನಿಧನವಾದ 15 ಅಥವಾ 20 ದಿನಗಳ ಬಳಿಕ ಮುಂದಿನ ಪೋಪ್‌ನ ಆಯ್ಕೆ ಪ್ರಕ್ರಿಯೆಗಳು ನಡೆಯುತ್ತವೆ
- ತಮ್ಮ ಆಡಳಿತಕ್ಕೆ ಸೂಕ್ತ ಸಲಹೆ–ಸೂಚನೆಗಳನ್ನು ನೀಡಲು, ಪೋಪ್ ಅವರು ಸಮಾಲೋಚನಾ ಸಮಿತಿಯೊಂದನ್ನು ರಚಿಸುತ್ತಾರೆ. ವಿವಿಧ ದೇಶಗಳ ಬಿಷಪ್‌ಗಳನ್ನು ಕಾರ್ಡಿನಲ್‌ಗಳನ್ನಾಗಿ ಈ ಸಮಿತಿಗೆ ನೇಮಿಸಲಾಗುತ್ತದೆ. ಈ ಸಮಿತಿಯೇ ಮುಂದಿನ ಪೋಪ್ ಅನ್ನು ಆಯ್ಕೆ ಮಾಡುತ್ತದೆ
- ಧರ್ಮದೀಕ್ಷೆ ಪಡೆದ ರೋಮನ್ ಕ್ಯಾಥೋಲಿಕ್ ಸಮುದಾಯದ ವ್ಯಕ್ತಿಯೂ ಪೋಪ್ ಆಗಬಹುದು. ಆದರೆ, ಹಲವು ಶತಮಾನಗಳಿಂದ ಕಾರ್ಡಿನಲ್‌ಗಳಲ್ಲೇ ಒಬ್ಬರು ಆಯ್ಕೆಯಾಗುತ್ತಿದ್ದಾರೆ



ಚಿತ್ರಕೃಪೆ: ಗೂಗಲ್ ಅರ್ಥ್, ಚಿತ್ರಗಳು: ಎಎಫ್‌ಪಿ



ಕಪ್ಪು ಮತ್ತು ಬಿಳಿ ಹೊಗೆ ಎಂಬ ಸಂಕೇತ

ನೂತನ ಪೋಪ್ ಆಯ್ಕೆಯ ಬಗ್ಗೆ ಪ್ರತಿನಿತ್ಯವೂ ಜನರಿಗೆ ಮಾಹಿತಿ ನೀಡಲಾಗುತ್ತದೆ. ಇದಕ್ಕಾಗಿ ಕಪ್ಪು ಮತ್ತು ಬಿಳಿ ಹೊಗೆಗಳೆಂಬ ಸಂಕೇತಗಳನ್ನು ರೂಪಿಸಿಕೊಳ್ಳಲಾಗಿದೆ. ಸಿಸ್ಟೀನ್ ಛಾಪೆಲ್ ಕಟ್ಟಡದಲ್ಲಿರುವ ಚಿಮಿಣಿಯ ಮೂಲಕ ಈ ಸಂಕೇತವನ್ನು ರವಾನಿಸಲಾಗುತ್ತದೆ. ಪೋಪ್ ಆಯ್ಕೆ ಪ್ರಕ್ರಿಯೆ ಪೂರ್ಣವಾಗಲಿಲ್ಲ ಎಂದರೆ, ಕಪ್ಪು ಹೊಗೆಯನ್ನು ಹೊರಸೂಸಲಾಗುತ್ತದೆ. ನೂತನ ಪೋಪ್ ಆಯ್ಕೆ ಪೂರ್ಣಗೊಂಡರೆ, ಬಿಳಿ ಹೊಗೆ ಬಿಡಲಾಗುತ್ತದೆ.

ಮತದಾನ ಪ್ರಕ್ರಿಯೆಯು ರಹಸ್ಯವಾಗಿ ನಡೆಯುತ್ತದೆ. ಆದ್ದರಿಂದ ಪ್ರತಿಬಾರಿ ಮತದಾನ ನಡೆದು ಫಲಿತಾಂಶ ಬಹಿರಂಗಗೊಂಡ ಬಳಿಕ ಮತಪತ್ರಗಳನ್ನು ಸುಡಲಾಗುತ್ತದೆ. ಪ್ರತಿನಿತ್ಯವೂ ಹೊಗೆಯ ಸಂಕೇತವನ್ನು ನೀಡಬೇಕಾಗಿರುವುದರಿಂದ ಮತಪತ್ರಗಳನ್ನೂ ಸುಡಲಾಗುತ್ತದೆ. ಸಾಂಪ್ರದಾಯಿಕವಾಗಿ ಕಪ್ಪು ಹೊಗೆ ಮೂಡಿಸಲು, ಮತಪತ್ರಗಳ ಜೊತೆಯಲ್ಲಿ ಒಣ ಹುಲ್ಲುಗಳನ್ನು ಸುಡಲಾಗುತ್ತಿತ್ತು. ಬಿಳಿ ಹೊಗೆಗಾಗಿ ಹಸಿ ಹುಲ್ಲು ಬಳಸಲಾಗುತ್ತಿತ್ತು. ಆಧುನಿಕ ಯುಗದಲ್ಲಿ ರಾಸಾಯನಿಕಗಳನ್ನು ಬಳಸಿ ಹೊಗೆಯನ್ನು ಮೂಡಿಸಲಾಗುತ್ತದೆ.



ಆಯ್ಕೆ ಪ್ರಕ್ರಿಯೆ ಹೇಗೆ?



ಪೋಪ್ ಆಯ್ಕೆಗಾಗಿ ಸಂತಾ ಮಾರ್ತಾನಲ್ಲಿ ಕಾರ್ಡಿನಲ್‌ಗಳ ಚರ್ಚೆಗಳು ನಡೆಯುತ್ತವೆ. ಸಿಸ್ಟೀನ್ ಛಾಪೆಲ್‌ನಲ್ಲಿ ಮತದಾನ ಪ್ರಕ್ರಿಯೆ ನಡೆಯುತ್ತದೆ. ಈ ವೇಳೆ ಸಂತಾ ಮಾರ್ತಾವನ್ನು ಸಂಪೂರ್ಣವಾಗಿ ಬಂದ್ ಮಾಡಲಾಗುತ್ತದೆ. ಕಾರ್ಡಿನಲ್‌ಗಳು ಹೊರ ಜಗತ್ತಿನ ಸಂಪರ್ಕವನ್ನು ಕಡಿದುಕೊಳ್ಳಬೇಕಾಗುತ್ತದೆ. ಮುಂದಿನ ಪೋಪ್‌ನ ಗುಣಲಕ್ಷಣಗಳು ಏನಿರಬೇಕು? ಚರ್ಚ್ ಮುಂದೆ ಇರುವ ಸವಾಲುಗಳೇನು? ಎಂಬ ಬಗ್ಗೆ ಚರ್ಚೆಗಳು ನಡೆಯುತ್ತವೆ. ಎಲ್ಲ ಕಾರ್ಡಿನಲ್‌ಗಳು ಈ ಚರ್ಚೆಯಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳುತ್ತಾರೆ. ಚರ್ಚೆಯಲ್ಲಿ ಯಾರು ಹೇಗೆ ಮಾತನಾಡುತ್ತಾರೆ, ಅವರ ಧಾರ್ಮಿಕ ಜ್ಞಾನ, ಪಾಂಡಿತ್ಯಗಳ ಆಧಾರದಲ್ಲಿ ಕಾರ್ಡಿನಲ್‌ಗಳು ಅವರಲ್ಲೇ ಒಬ್ಬರನ್ನು ಆಯ್ಕೆ ಮಾಡುತ್ತಾರೆ.

ಹಲವು ದಿನಗಳವರೆಗೆ ಈ ಪ್ರಕ್ರಿಯೆ ನಡೆಯಲಿದೆ. ಯಾವುದೇ ವ್ಯಕ್ತಿಗೆ ಮೂರನೇ ಎರಡರಷ್ಟು ಮತಗಳು ದೊರಕುವವರೆಗೂ ಪ್ರತಿನಿತ್ಯವೂ ಎರಡು ಬಾರಿ ಮತದಾನ ನಡೆಯಲಿದೆ. ಈ ಎಲ್ಲ ಪ್ರಕ್ರಿಯೆಗಳು ಬಹಳ ರಹಸ್ಯವಾಗಿ ನಡೆಯುತ್ತವೆ. ಪ್ರತಿ ಬಾರಿ ಮತದಾನ ನಡೆದ ಬಳಿಕ ಫಲಿತಾಂಶವನ್ನು ಬಹಿರಂಗ ಮಾಡಲಾಗುತ್ತದೆ. ಬಹುಮತ ಪಡೆದರೆ, ಫಲಿತಾಂಶ ಬಂದ ಒಂದು ಗಂಟೆಯ ಒಳಗೆ ನೂತನ ಪೋಪ್, ತಮ್ಮ ನಿವಾಸದ ಬಾಲ್ಕನಿಯಿಂದ ಕೈಬೀಸುತ್ತಾರೆ.

ಮುಂದಿನ ಪೋಪ್ ಯಾರಾಗಬಹುದು?

- ಕಾರ್ಡಿನಲ್ ಪಿಯೆಟ್ರೊ ಪಾರೊಲಿನ್, ಇಟಲಿ
- ಕಾರ್ಡಿನಲ್ ಮಾರ್ಕ್ ಒಲೆಟ್, ಕೆನಡಾ
- ಕಾರ್ಡಿನಲ್ ಕ್ರಿಸ್ಟೊಫ್ ಶೌನ್‌ಬೋರ್ನ್, ಆಸ್ಟ್ರಿಯಾ
- ಕಾರ್ಡಿನಲ್ ಲೂಯಿಸ್ ಟ್ಯಾಗಲ್, ಫಿಲಿಪ್ಪೀನ್ಸ್
- ಕಾರ್ಡಿನಲ್ ಮ್ಯಾಟೊ ಜುಪ್ಪಿ, ಇಟಲಿ



ಬೆರ್ಗೋಲಿಯೊನಿಂದ ಫ್ರಾನ್ಸಿಸ್‌ವರೆಗೆ

1936: ಅರ್ಜೆಂಟೀನಾದಲ್ಲಿ ಒರ್ಗೆ ಮಾರಿಯೊ ಬೆರ್ಗೋಲಿಯೊ (ಪೋಪ್ ಫ್ರಾನ್ಸಿಸ್ ಅವರ ಮೊದಲ ಹೆಸರು) ಜನನ
1992: ಬಿಷಪ್ ಆಗಿ ನೇಮಕ
2001: ಕಾರ್ಡಿನಲ್ ಆಗಿ ನೇಮಕ
2013: ಪೋಪ್ ಬೆನೆಡಿಕ್ಟ್ ರಾಜೀನಾಮೆ ಬಳಿಕ ನೂತನ ಪೋಪ್ ಆಗಿ ನೇಮಕ
2025: ನಿಧನ

ಸಂಪ್ರದಾಯ ಮುರಿದ ಸುಧಾರಣಾವಾದಿ

ಚರ್ಚ್‌ನೊಳಗಿನ ಸಂಪ್ರದಾಯವಾದಿಗಳ ವಿರೋಧ ಎದುರಿಸಿದ್ದ ‘ಜನರ ಪೋಪ್’



ವ್ಯಾಟಿಕನ್ ಸಿಟಿ (ಎಎಫ್‌ಪಿ/ಎಪಿ): ಪೋಪ್ ಫ್ರಾನ್ಸಿಸ್ ಅವರು ಒಬ್ಬ ‘ಸುಧಾರಣಾವಾದಿ ಧರ್ಮಗುರು’ ಆಗಿ ಇತಿಹಾಸದ ಪುಟಗಳಲ್ಲಿ ಉಳಿಯಲಿದ್ದಾರೆ. ಶತಮಾನಗಳಿಂದ ಪಾಲಿಸಿಕೊಂಡು ಬರುತ್ತಿದ್ದ ಕೆಲವು ಸಂಪ್ರದಾಯಗಳನ್ನು ಮುರಿದು ಕ್ಯಾಥೊಲಿಕ್ ಚರ್ಚ್ ಅನ್ನು ‘ಸಹಾನುಭೂತಿಯ’ ಕೇಂದ್ರವನ್ನಾಗಿಸಲು ಅವರು ಶ್ರಮಪಟ್ಟರು.

‘ಜನರ ಪೋಪ್’ ಎಂದೇ ಕರೆಯಲ್ಪಡುವ ಅರ್ಜೆಂಟೀನಾದ ಧರ್ಮಗುರು, ತುಳಿತಕ್ಕೊಳಗಾದ ಜನರ ಪರವಾಗಿದ್ದರು. ಜಗತ್ತಿನಾದ್ಯಂತ ಕೋಟ್ಯಂತರ ಮಂದಿಯ ಪ್ರೀತಿಗೆ ಪಾತ್ರರಾಗಿದ್ದ ಸಂದರ್ಭದಲ್ಲೇ, ಚರ್ಚ್‌ನೊಳಗಿನ ಸಂಪ್ರದಾಯವಾದಿಗಳಿಂದ ವಿರೋಧವನ್ನೂ ಎದುರಿಸಿದ್ದಾರೆ.

ವಲಸಿಗರಿಂದ ಹಿಡಿದು ಹವಾಮಾನ ಬದಲಾವಣೆಯಿಂದ ಸಂಕಷ್ಟ ಎದುರಿಸಿದ ಸಮುದಾಯಗಳವರೆಗೆ ಅತ್ಯಂತ ಯಾತನಾಮಯ ಬದುಕು ಸಾಗಿಸುವವರ ಜತೆ ದೃಢವಾಗಿ ನಿಂತಿದ್ದರು.

2013ರ ಮಾರ್ಚ್‌ನಲ್ಲಿ ಪೋಪ್ ಆಗಿ ಆಯ್ಕೆಯಾದ ದಿನದಿಂದಲೂ ಕ್ಯಾಥೊಲಿಕ್ ಚರ್ಚ್‌ನ ನಾಯಕರಾಗಿ ತಮ್ಮ ಛಾಪು ಮೂಡಿಸಲು ಅವರು ಉತ್ಸುಕರಾಗಿದ್ದರು.

13ನೇ ಶತಮಾನದಲ್ಲಿ ಪೋಪ್ ಆಗಿದ್ದ, ತನ್ನೆಲ್ಲಾ ಸಂಪತ್ತನ್ನು ತ್ಯಜಿಸಿ ಬಡವರಿಗಾಗಿ ಜೀವನವನ್ನು ಮುಡಿಪಾಗಿಟ್ಟ ಸೇಂಟ್ ಫ್ರಾನ್ಸಿಸ್ ಬಳಿಕ ಫ್ರಾನ್ಸಿಸ್ ಎಂಬ ಹೆಸರನ್ನು ಪಡೆದ ಮೊದಲ ಪೋಪ್ ಎಂಬ ಹೆಗ್ಗಳಿಕೆಗೂ ಪಾತ್ರರಾಗಿದ್ದರು.

‘ಚರ್ಚ್‌ಗಳು ಬಡವರ ಪರವಾಗಿ ಇರಬೇಕೆಂದು ಬಯಸುತ್ತಿದ್ದೇನೆ’ ಎಂದು 266ನೇ ಪೋಪ್ ಆಗಿ ಆಯ್ಕೆಯಾದ ಮೂರು ದಿನಗಳ ಬಳಿಕ ಅವರು ಹೇಳಿದ್ದರು. ಐಷಾರಾಮಿ ಜೀವನ ಸಾಗಿಸುವ ಅವಕಾಶವಿದ್ದರೂ ಅದನ್ನೆಲ್ಲ ತ್ಯಜಿಸಿ ಸರಳ ಬದುಕಿನ ಮಾರ್ಗ ಹಿಡಿದರು. ವಿಧವೆಯರು, ಅತ್ಯಾಚಾರ ಸಂತ್ರಸ್ತರು ಮತ್ತು ಕೈದಿಗಳ ಜತೆ ದೂರವಾಣಿ ಕರೆಮಾಡಿ ಮಾತನಾಡುತ್ತಿದ್ದರು.

ಪೋಪ್ ಆಗಿ ಆಯ್ಕೆಯಾಗಿ ವ್ಯಾಟಿಕನ್‌ನಲ್ಲಿ ತಮ್ಮ ಮೊದಲ ಈಸ್ಟರ್ ಆಚರಿಸುವ ಮುನ್ನ ಅವರು ರೋಮ್‌ನ ಜೈಲಿನಲ್ಲಿ ಕೈದಿಗಳ ಪಾದಗಳನ್ನು ತೊಳೆದು ಚುಂಬಿಸಿದ್ದರು. ಈ ಹಿಂದಿನ ಪೋಪ್‌ಗಳಿಗಿಂತ ತಾನು ಭಿನ್ನ ಹಾದಿಯಲ್ಲಿ ಸಾಗುತ್ತಿದ್ದೇನೆ ಎಂಬುದನ್ನು ಆರಂಭದಲ್ಲೇ ತೋರಿಸಿ, ಜಾಗತಿಕ ಮೆಚ್ಚುಗೆಯನ್ನು ಗಳಿಸಿದ್ದರು.

ತಮ್ಮ ಮೊದಲ ವಿದೇಶ ಪ್ರವಾಸಕ್ಕಾಗಿ ಫ್ರಾನ್ಸಿಸ್ ಅವರು ಇಟಲಿಯ ದ್ವೀಪ ಲಾಂಪೆಡೂಸಾವನ್ನು ಆಯ್ಕೆಮಾಡಿಕೊಂಡರು. ಏಕೆಂದರೆ, ವಲಸಿಗರು ಇದೇ ದ್ವೀಪದ ಮೂಲಕ ಯುರೋಪ್ ಪ್ರವೇಶಿಸುತ್ತಿದ್ದರು. 2016ರಲ್ಲಿ ಯುರೋಪ್‌ನಲ್ಲಿ ವಲಸೆ ಬಿಕ್ಕಟ್ಟು ತಲೆದೋರಿದ್ದಾಗ ಗ್ರೀಕ್ ದ್ವೀಪವಾದ ಲೆಸ್ಬೋಸ್‌ಗೆ ಭೇಟಿ ನೀಡಿದ್ದ ಅವರು ಆಶ್ರಯ ಕೋರಿ ಅಲ್ಲಿಗೆ ಬಂದಿದ್ದ ಸಿರಿಯಾದ ಮೂರು ಮುಸ್ಲಿಂ ಕುಟುಂಬಗಳೊಂದಿಗೆ ರೋಮ್‌ಗೆ ವಾಪಸಾಗಿದ್ದರು.

ಹಲವರ ವಿರೋಧ ಕಟ್ಟಿಕೊಂಡಿದ್ದರು...

ಪೋಪ್ ಫ್ರಾನ್ಸಿಸ್ ಅವರು ಕ್ಯಾಥೊಲಿಕ್ ಬೋಧನೆಯ ತತ್ವಗಳನ್ನು ಅತ್ಯಂತ ಅಪಾಯಕಾರಿ ರೀತಿಯಲ್ಲಿ ತಿದ್ದಿದ್ದಾರೆಂದು ಅವರ ಟೀಕಾಕಾರರು ಆರೋಪಿಸಿದ್ದಾರೆ. 2017ರಲ್ಲಿ ನಾಲ್ವರು ಸಂಪ್ರದಾಯವಾದಿ ಕಾರ್ಡಿನಲ್‌ಗಳು ಪೋಪ್ ವಿರುದ್ಧ ಬಹಿರಂಗವಾಗಿ ಧ್ವನಿಯೆತ್ತಿದ್ದರಲ್ಲದೆ, ಅವರು ತಂದಿರುವ ಬದಲಾವಣೆಗಳು ಭಕ್ತರಲ್ಲಿ ಸೈದ್ಧಾಂತಿಕ ಗೊಂದಲವನ್ನು ಉಂಟುಮಾಡಿದೆ ಎಂದು ದೂರಿದ್ದರು.

ವಿಚ್ಛೇದಿತರು ಮತ್ತು ಮರುಮದುವೆಯಾದವರಿಗೆ ಹೋಲಿ ಕಮ್ಯೂನ್ಯನ್ (ಪರಮಪ್ರಸಾದ) ಸ್ವೀಕರಿಸಲು ಫ್ರಾನ್ಸಿಸ್ ಅವರು ಅವಕಾಶ ಮಾಡಿಕೊಟ್ಟಿದ್ದರು.


ಫುಟ್‌ಬಾಲ್ ಪ್ರೇಮಿ

- ಫುಟ್‌ಬಾಲ್ ಪ್ರೇಮಿಯಾಗಿದ್ದ ಫ್ರಾನ್ಸಿಸ್ ಅವರು ಚಿಕ್ಕಂದಿನಲ್ಲಿ ತಂದೆಯ ಜತೆ ಫುಟ್‌ಬಾಲ್ ಪಂದ್ಯಗಳನ್ನು ನೋಡಲು ಹೋಗುತ್ತಿದ್ದರು
- ಡೊನಾಲ್ಡ್ ಟ್ರಂಪ್ ಆಡಳಿತವು ವಲಸಿಗರನ್ನು ಗಡೀಪಾರು ಮಾಡುತ್ತಿರುವುದನ್ನು, ‘ದೊಡ್ಡ ಬಿಕ್ಕಟ್ಟು’ ಎಂದು ಖಂಡಿಸಿದ್ದರು
- ಪಾದ್ರಿಗಳಿಂದ ನಡೆಯುವ ಲೈಂಗಿಕ ದೌರ್ಜನ್ಯದಂತಹ ವಿಷಯಗಳ ಬಗ್ಗೆಯೂ ಮಾತನಾಡಿದ್ದ ಅವರು ಹಲವು ಸಂತ್ರಸ್ತರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ್ದಾರೆ

ನೈಟ್‌ಕ್ಲಬ್‌ನಲ್ಲಿ ಬೌನ್ಸರ್...

ಒರ್ಗೆ ಮಾರಿಯೊ ಬೆರ್ಗೋಲಿಯೊ (ಫ್ರಾನ್ಸಿಸ್) ಅವರು ಅರ್ಜೆಂಟೀನಾದ ಬ್ಯೂನಸ್ ಐರಿಸ್‌ನಲ್ಲಿ ಜನಿಸಿದರು. ಇಟಲಿಯಿಂದ ವಲಸೆ ಬಂದ ದಂಪತಿಯ ಐವರು ಮಕ್ಕಳಲ್ಲಿ ಅವರು ದೊಡ್ಡವರು. ಶಾಲಾ ದಿನಗಳಲ್ಲಿ ಮಧ್ಯಾಹ್ನದ ಬಳಿಕ ನೇಯ್ಗೆ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದರು. ಯುವಕನಾಗಿದ್ದಾಗ ಕೆಲ ದಿನ ನೈಟ್‌ಕ್ಲಬ್‌ನಲ್ಲಿ ಬೌನ್ಸರ್ ಆಗಿಯೂ ಕೆಲಸ ಮಾಡಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,851
ಇಂದಿನ ಅಂತ್ಯ	24,125
▲	273
ದಿನದ ಗರಿಷ್ಠ	24,189

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹430
12 ಕ್ಕೆ	₹60
ಮೈಸೂರು	
100ಕ್ಕೆ	₹430

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹9500-15500
ದಾವಣಗೆರೆ	₹13000-13000
ಮಧುಗಿರಿ	₹9000-11600
ತಿಪಟೂರು	₹17800-19500

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹193
ಆರ್‌ಎಸ್‌ಎಸ್-5	₹188
ಗುಡ್ ಲಾಟ್	₹180

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,600
ಮಧ್ಯಮ	₹800-1,200
ಸಣ್ಣ	₹400-800

ಹೈದರಾಬಾದ್: ಸಣ್ಣ ಶಸ್ತ್ರಾಸ್ತ್ರ ತಯಾರಿಕಾ ಘಟಕ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಎಇಯ ಪ್ರಮುಖ ಸಣ್ಣ ಶಸ್ತ್ರಾಸ್ತ್ರ ತಯಾರಿಕೆಯ ಎಡ್ಜ್ ಸಮೂಹದ ಕಾರ್ಕಲ್, ಮೇಘಾ ಎಂಜಿನಿಯರಿಂಗ್ ಆ್ಯಂಡ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ (ಎಂಇಐಎಲ್) ಸಮೂಹದ ಕಂಪನಿಯಾದ ಐಕಾಮ್ ಟೆಲಿ ಲಿಮಿಟೆಡ್‌ನ ಐಕಾಮ್ ಇಂಟಿಗ್ರೇಟೆಡ್ ಎಂಜಿನಿಯರಿಂಗ್ ಪಾಲುದಾರಿಕೆಯಲ್ಲಿ ವಿಶ್ವ ದರ್ಜೆಯ ಸಣ್ಣ ಶಸ್ತ್ರಾಸ್ತ್ರ ತಯಾರಿಕಾ ಘಟಕಕ್ಕೆ ಚಾಲನೆ ನೀಡಲಾಗಿದೆ.

ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತ್ ಅಡಿಯಲ್ಲಿ ಹೈದರಾಬಾದ್‌ನಲ್ಲಿ ಅತ್ಯಾಧುನಿಕ ಸಣ್ಣ ಶಸ್ತ್ರಾಸ್ತ್ರ ತಯಾರಿಕಾ ಘಟಕ ಆರಂಭವಾಗಿದ್ದು, ಈ ಕುರಿತು ಒಪ್ಪಂದ ಮಾಡಿಕೊಳ್ಳಲಾಗಿದೆ ಎಂದು ಕಂಪನಿ ತಿಳಿಸಿದೆ.

ಈ ಘಟಕವು ಸುಧಾರಿತ ಶಸ್ತ್ರಾಸ್ತ್ರಗಳ ಸ್ಥಳೀಯ ತಯಾರಿಕಾ ಕೇಂದ್ರವಾಗಿ ಕಾರ್ಯನಿರ್ವಹಿಸಲಿದೆ. ಮುಂದಿನ ಪೀಳಿಗೆಯ ಶಸ್ತ್ರಾಸ್ತ್ರಗಳು ಭಾರತೀಯ ಸಶಸ್ತ್ರ ಪಡೆಗಳು, ಕೇಂದ್ರ ಸಶಸ್ತ್ರ ಪೊಲೀಸ್ ಪಡೆಗಳು (ಸಿಆರ್‌ಪಿಎಫ್), ವಿಶೇಷ ಪಡೆಗಳು, ರಾಜ್ಯ ಪೊಲೀಸ್ ಪಡೆಗಳು ಮತ್ತು ಎಸ್‌ಜಿಪಿಗಳ ಪ್ರಮುಖ ಅಗತ್ಯಗಳನ್ನು ಪೂರೈಸುತ್ತದೆ ಮತ್ತು ಜಾಗತಿಕ ರಫ್ತಿಗೂ ಸಹಕಾರಿಯಾಗಲಿದೆ ಎಂದು ತಿಳಿಸಿದೆ.

‘ಕಾರ್ಕಲ್ ನಮ್ಮೊಂದಿಗೆ ವಿಶ್ವಾಸಾರ್ಹ ಪಾಲುದಾರರಾಗಿದ್ದು, ವಿಶ್ವ ದರ್ಜೆಯ ಶಸ್ತ್ರಾಸ್ತ್ರಗಳನ್ನು ನಿರ್ಮಿಸಲಿದ್ದೇವೆ. ದೇಶದ ರಕ್ಷಣಾ ಕ್ಷೇತ್ರವನ್ನು ಸಬಲೀಕರಣಗೊಳಿಸುವ ಉದ್ದೇಶ ಹೊಂದಲಾಗಿದೆ’ ಎಂದು ಐಕಾಮ್‌ನ ವ್ಯವಸ್ಥಾಪಕ ನಿರ್ದೇಶಕ ಸುಮಂತ್ ಪಟೂರು ಹೇಳಿದ್ದಾರೆ.

‘ಈ ಒಪ್ಪಂದವು ಯುಎಇಯಿಂದ ಭಾರತಕ್ಕೆ ರಕ್ಷಣಾ ಸಾಮಗ್ರಿಗಳಿಗಾಗಿ ತಂತ್ರಜ್ಞಾನದ ಮೊದಲ ವರ್ಗಾವಣೆಯಾಗಿದೆ. ಈ ಕಾರ್ಖಾನೆಯು ಪ್ರಧಾನಿ ನರೇಂದ್ರ ಮೋದಿಯವರ ಮೇಕ್ ಇನ್ ಇಂಡಿಯಾಕ್ಕೆ ಇರುವ ನಮ್ಮ ಬದ್ಧತೆಯನ್ನು ತೋರಿಸುತ್ತದೆ’ ಎಂದು ಕಾರ್ಕಲ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಮದ್ ಅಲಮೇರಿ ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

25,009 ನಕಲಿ ಕಂಪನಿ ಪತ್ತೆ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ ಕೇಂದ್ರ ಮತ್ತು ರಾಜ್ಯ ಜಿಎಸ್‌ಟಿ ಅಧಿಕಾರಿಗಳು ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್ (ಐಟಿಸಿ) ವಂಚನೆ ಪ್ರಕರಣದಲ್ಲಿ ಭಾಗಿಯಾಗಿರುವ 25,009 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಿದ್ದಾರೆ. ವಂಚನೆಯ ಮೊತ್ತ ₹61,545 ಕೋಟಿಯಾಗಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಈ ಪೈಕಿ ₹1,924 ಕೋಟಿ ಮಾತ್ರ ಪಾವತಿಯಾಗಿದ್ದು, 168 ಜನರನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

2023–24 ಮತ್ತು 2024–25ರ ಆರ್ಥಿಕ ವರ್ಷದಲ್ಲಿ 42,140 ನಕಲಿ ಕಂಪನಿಗಳನ್ನು ಪತ್ತೆ ಹಚ್ಚಲಾಗಿತ್ತು. ಈ ಕಂಪನಿಗಳು ನಕಲಿ ಇನ್‌ವಾಯ್ಸ್ ಸೃಷ್ಟಿಸಿ ₹1.01 ಲಕ್ಷ ಕೋಟಿಗೂ ಹೆಚ್ಚು ವಂಚನೆ ಮಾಡಿವೆ. ಈ ಪೈಕಿ ₹3,107 ಕೋಟಿ ವಶಪಡಿಸಿಕೊಳ್ಳಲಾಗಿದ್ದು, 316 ಜನರನ್ನು ಬಂಧಿಸಲಾಗಿತ್ತು.

ಎಲ್‌ಐಸಿ ಷೇರಿನ ಪಾಲು ಶೇ 7.05ಕ್ಕೆ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಬರೋಡಾದಲ್ಲಿನ ತನ್ನ ಷೇರಿನ ಪಾಲು ಶೇ 7.05ಕ್ಕೆ ಹೆಚ್ಚಳವಾಗಿದೆ ಎಂದು ಭಾರತೀಯ ಜೀವ ವಿಮಾ ನಿಗಮ (ಎಲ್‌ಐಸಿ) ತಿಳಿಸಿದೆ.

ಮುಕ್ತ ಮಾರುಕಟ್ಟೆಯಲ್ಲಿ ಹೆಚ್ಚುವರಿಯಾಗಿ 10.45 ಕೋಟಿ ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಿಂದ ಷೇರಿನ ಪಾಲು ಶೇ 5.03ರಿಂದ ಶೇ 7.05ಕ್ಕೆ ಏರಿದೆ ಎಂದು ನಿಗಮವು ಸೋಮವಾರ ಷೇರುಪೇಟೆಗೆ ತಿಳಿಸಿದೆ.

‘80 ಲಕ್ಷ ಉದ್ಯೋಗ ಸೃಷ್ಟಿಯಾಗಬೇಕು’

ನ್ಯೂಯಾರ್ಕ್ (ಪಿಟಿಐ): ‘2047ರ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ಪರಿವರ್ತಿಸುವ ಗುರಿ ಸಾಧಿಸಬೇಕಾದರೆ ಮುಂದಿನ 10 ರಿಂದ 12 ವರ್ಷಗಳ ಕಾಲ ಪ್ರತೀ ವರ್ಷವೂ 80 ಲಕ್ಷ ಉದ್ಯೋಗಗಳನ್ನು ಭಾರತ ಸೃಷ್ಟಿಸಬೇಕಿದೆ. ಜತೆಗೆ ದೇಶದ ಜಿಡಿಪಿಯಲ್ಲಿ ಉತ್ಪಾದನಾ ವಲಯದ ಪಾಲು ಹೆಚ್ಚಳವಾಗಬೇಕಿದೆ’ ಎಂದು ಕೇಂದ್ರ ಸರ್ಕಾರದ ಆರ್ಥಿಕ ಸಲಹೆಗಾರ ವಿ.ಅನಂತ ನಾಗೇಶ್ವರನ್ ಹೇಳಿದ್ದಾರೆ.

ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ನಡೆದ ‘ಕೊಲಂಬಿಯಾ ಇಂಡಿಯಾ ಶೃಂಗಸಭೆ 2025’ ಕಾರ್ಯಕ್ರಮದಲ್ಲಿ ನಾಗೇಶ್ವರನ್ ಮಾತನಾಡಿದರು.


ಹಿಂದೂ ದೇಗುಲದ ಮೇಲೆ ಖಾಲಿಸ್ತಾನ ಪರ ಬರಹ

ಟೊರಂಟೊ (ಪಿಟಿಐ): ಕೆನಡಾದ ಸರ್ರೆಯಲ್ಲಿರುವ ಹಿಂದೂ ದೇವಸ್ಥಾನವೊಂದರ ಗೋಡೆ ಹಾಗೂ ಕಂಬಗಳ ಮೇಲೆ ಖಾಲಿಸ್ತಾನ ಪರ ಬರಹಗಳನ್ನು ಗೀಚಿ, ವಿರೂಪಗೊಳಿಸಲಾಗಿದೆ. ‘ಶ್ರೀ ಲಕ್ಷ್ಮೀ ನಾರಾಯಣ ದೇವಸ್ಥಾನದಲ್ಲಿ ಏ.19ರಂದು ಬೆಳಗಿನ ಜಾವ 3 ಗಂಟೆಗೆ ಈ ಘಟನೆ ನಡೆದಿದೆ. ದೇವಸ್ಥಾನಕ್ಕೆ ಬಂದ ಇಬ್ಬರು ಅಪರಿಚಿತ ವ್ಯಕ್ತಿಗಳು ಖಾಲಿಸ್ತಾನ ಪರ ಬರಹಗಳನ್ನು ಗೀಚಿದ್ದಾರೆ. ಭದ್ರತೆಗಾಗಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾವನ್ನೂ ದೋಚಿದ್ದಾರೆ’ ಎಂದು ದೇವಸ್ಥಾನದ ಆಡಳಿತ ಮಂಡಳಿ ತಿಳಿಸಿದೆ. ‘ಈ ಪ್ರಕರಣ ಸಂಬಂಧ ಎಫ್‌ಐಆರ್ ದಾಖಲಾಗಿದೆ.

ಐದು ವಹಿವಾಟಿನಲ್ಲಿ ಸಂಪತ್ತು ₹32 ಲಕ್ಷ ಕೋಟಿ ವೃದ್ಧಿ

ಸೆನ್ಸೆಕ್ಸ್ 855 ಅಂಶ ಜಿಗಿತ

ಮುಂಬೈ (ಪಿಟಿಐ): ಬ್ಯಾಂಕಿಂಗ್ ಮತ್ತು ಐ.ಟಿ ಷೇರುಗಳ ಖರೀದಿ ಹೆಚ್ಚಳದಿಂದ ದೇಶದ ಷೇರು ಸೂಚ್ಯಂಕಗಳು ಸೋಮವಾರದ ವಹಿವಾಟಿನಲ್ಲಿ ಶೇ 1ಕ್ಕೂ ಹೆಚ್ಚು ಏರಿಕೆ ಕಂಡಿವೆ.



ಕಂಪನಿಗಳ ಮಾರ್ಚ್ ತ್ರೈಮಾಸಿಕದ ಗಳಿಕೆ ಮತ್ತು ವಿದೇಶಿ ಬಂಡವಾಳದ ಒಳಹರಿವು ಸಹ ಸೂಚ್ಯಂಕಗಳ ಏರಿಕೆಗೆ ನೆರವಾದವು ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 855 ಅಂಶ (ಶೇ 1.09) ಏರಿಕೆಯಾಗಿ, 79,408ಕ್ಕೆ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ವೇಳೆ 1,081 ಅಂಶ ಹೆಚ್ಚಳವಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 273 ಅಂಶ (ಶೇ 1.15) ಏರಿಕೆಯಾಗಿ, 24,125ಕ್ಕೆ ಕೊನೆಗೊಂಡಿತು.

ಕಳೆದ ಐದು ವಹಿವಾಟಿನಲ್ಲಿ ಸೆನ್ಸೆಕ್ಸ್ 5,561 ಅಂಶ ಮತ್ತು ನಿಫ್ಟಿ 1,726 ಅಂಶ ಏರಿಕೆಯಾಗಿವೆ. ಇದರಿಂದ ಹೂಡಿಕೆದಾರರ ಸಂಪತ್ತು ₹32 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ. ಬಿಎಸ್‌ಇ ನೋಂದಾಯಿತ ಕಂಪನಿಗಳ ಮಾರುಕಟ್ಟೆ ಮೌಲ್ಯವು ₹425 ಲಕ್ಷ ಕೋಟಿಯಾಗಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿ ಟೆಕ್ ಮಹೀಂದ್ರ, ಇಂಡಸ್‌ಇಂಡ್ ಬ್ಯಾಂಕ್, ಪವರ್‌ಗ್ರಿಡ್, ಬಜಾಜ್ ಫಿನ್‌ಸರ್ವ್, ಮಹೀಂದ್ರ ಆ್ಯಂಡ್ ಮಹೀಂದ್ರ, ಎಚ್‌ಸಿಎಲ್ ಟೆಕ್, ಎಸ್‌ಬಿಐ, ಕೋಟಕ್ ಮಹೀಂದ್ರ ಬ್ಯಾಂಕ್, ಇನ್ಫೊಸಿಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಅದಾನಿ ಪೋರ್ಟ್ಸ್, ಹಿಂದೂಸ್ತಾನ್ ಯುನಿಲಿವರ್, ಐಟಿಸಿ, ಏಷ್ಯನ್ ಪೇಂಟ್ಸ್ ಮತ್ತು ನೆಸ್ಲೆ ಷೇರಿನ ಮೌಲ್ಯದಲ್ಲಿ ಇಳಿದಿದೆ.

ಏಷ್ಯಾದ ಮಾರುಕಟ್ಟೆಯಲ್ಲಿ ದಕ್ಷಿಣ ಕೊರಿಯಾ ಮತ್ತು ಶಾಂಘೈ ಸಕಾರಾತ್ಮಕ ವಹಿವಾಟು ನಡೆಸಿದ್ದರೆ, ಟೋಕಿಯೊ ನಕಾರಾತ್ಮಕ ವಹಿವಾಟಿನಲ್ಲಿ ಅಂತ್ಯಗೊಂಡಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನಲ್ಲಿ ₹4,667 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ದರ ಶೇ 2.71ರಷ್ಟು ಹೆಚ್ಚಳವಾಗಿದೆ. ಪ್ರತೀ ಬ್ಯಾರೆಲ್ 66.25 ಡಾಲರ್ (₹5,656) ಆಗಿದೆ.

‘ಮಾರ್ಚ್‌ನಲ್ಲಿ ಕಂಪನಿಗಳ ತ್ರೈಮಾಸಿಕದ ಗಳಿಕೆಯು ಉತ್ತಮವಾಗಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸುಂಕ ನೀತಿಗೆ 90 ದಿನದ ವಿರಾಮ ನೀಡಿದ್ದಾರೆ. ಇದರಿಂದ ವಿದೇಶಿ ಒಳಹರಿವು ಹೆಚ್ಚಳವಾಗಿದ್ದು, ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ’ ಎಂದು ಲೆಮನನ್ ಮಾರ್ಕೆಟ್ಸ್ ಡೆಸ್ಕ್‌ನ ವಿಶ್ಲೇಷಕ ಸತೀಶ್ ಚಂದ್ರ ಅಲುರಿ ಹೇಳಿದ್ದಾರೆ.

ರೂಪಾಯಿ ಮೌಲ್ಯ 23 ಪೈಸೆ ಏರಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸೋಮವಾರದ ವಹಿವಾಟಿನಲ್ಲಿ 23 ಪೈಸೆ ಏರಿಕೆಯಾಗಿದೆ. ಪ್ರತೀ ಡಾಲರ್ ಮೌಲ್ಯ ₹85.15 ಆಗಿದೆ.

ದೇಶೀಯ ಷೇರುಸೂಚ್ಯಂಕಗಳ ಏರಿಕೆ ಮತ್ತು ವಿದೇಶಿ ಬಂಡವಾಳದ ಒಳಹರಿವು ಹೂಡಿಕೆದಾರರಿಗೆ ಉತ್ತೇಜನ ನೀಡಿದೆ. ಇದು ರೂಪಾಯಿ ಮೌಲ್ಯ ಹೆಚ್ಚಳಕ್ಕೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯ 26 ಪೈಸೆ ಏರಿಕೆಯಾಗಿದ್ದು, ಪ್ರತೀ ಡಾಲರ್ ₹85.38 ಆಗಿತ್ತು.

‘10 ವರ್ಷ ಮೀರಿದವರು ಸ್ವತಂತ್ರವಾಗಿ ಖಾತೆ ತೆರೆಯಬಹುದು’

ಮುಂಬೈ (ಪಿಟಿಐ): 10 ವರ್ಷ ಮೀರಿದ ಅಪ್ರಾಪ್ತ ವಯಸ್ಕರಿಗೆ ಬ್ಯಾಂಕುಗಳಲ್ಲಿ ಉಳಿತಾಯ/ ಅವಧಿ ಠೇವಣಿ ಖಾತೆಗಳನ್ನು ಸ್ವತಂತ್ರವಾಗಿ ತೆರೆಯಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಅನುಮತಿ ನೀಡಿದೆ.

ಈ ಸಂಬಂಧ ಆರ್‌ಬಿಐ ಪರಿಷ್ಕೃತ ಮಾರ್ಗಸೂಚಿಯನ್ನು ಪ್ರಕಟಿಸಿದೆ.

ಯಾವುದೇ ವಯಸ್ಸಿನ ಅಪ್ರಾಪ್ತ ವಯಸ್ಕರು ತಮ್ಮ ನೈಸರ್ಗಿಕ ಅಥವಾ ಕಾನೂನುಬದ್ಧ ಪೋಷಕರೊಂದಿಗೆ ಉಳಿತಾಯ, ಅವಧಿ ಠೇವಣಿ ಖಾತೆಗಳನ್ನು ತೆರೆಯಲು ಮತ್ತು ನಿರ್ವಹಿಸಲು ಅನುಮತಿಸಬಹುದು ಎಂದೂ ಆರ್‌ಬಿಐ ಸೋಮವಾರ ತಿಳಿಸಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹205-538
ದ್ವಿತಳಿ (ಬಿ.ವಿ)	₹261-690

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1330 (1355)
ಸೋಯಾ (ರಿಫೈನ್ಡ್)	₹1285 (1285)
ಸೂರ್ಯಕಾಂತಿ (ರಿಫೈನ್ಡ್)	₹1390 (1385)
ಪಾಮೋಲಿನ್	₹1280 (1290)

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	39089-43998
ಚಿಪ್ಪು	25269-31199
ಕೋಕ	7089-22269
ಫ್ಯಾಕ್ಟರಿ	4279-25699
ಹೊಸಚಾಲಿ	37289-42899
ಶಿವಮೊಗ್ಗ	
ಬೆಟ್ಟೆ	51009-58911
ಗೊರಬಲು	20009-32869
ರಾಶಿ	47889-60589
ಸರಕು	56109-91069
ಸಿದ್ದಾಪುರ	
ಬಿಳಿಗೋಟು	26009-31209
ಚಾಲಿ	34909-41099
ಕೋಕ	16469-23219
ಹಳೆಚಾಲಿ	38399-38599
ಕೆಂಪುಗೋಟು	19889-22809
ರಾಶಿ	42669-51009
ತಟ್ಟಿಬೆಟ್ಟೆ	29099-32199
ಶಿರಸಿ	
ಬೆಟ್ಟೆ	25421-45181
ಬಿಳಿಗೋಟು	18199-32999
ಚಾಲಿ	35099-43519
ಕೆಂಪುಗೋಟು	11099-22118
ರಾಶಿ	40088-47609
ಯಲ್ಲಾಪುರ	
ಅಪಿ	60599-60599
ಬಿಳಿಗೋಟು	17770-31599
ಚಾಲಿ	31899-43599
ಕೋಕ	4799-18699
ಕೆಂಪುಗೋಟು	18099-26619
ರಾಶಿ	39604-58199
ತಟ್ಟಿಬೆಟ್ಟೆ	30315-39009





2026 ಫೆ.27ಕ್ಕೆ ಮರ್ದಾನಿ 3 ರಿಲೀಸ್

ಯಶ್ ರಾಜ್ ಫಿಲ್ಮ್ಸ್ ನಿರ್ಮಾಣದ, ರಾಣಿ ಮುಖರ್ಜಿ ನಟನೆಯ 'ಮರ್ದಾನಿ 3' ಸಿನಿಮಾ 2026ರ ಫೆ.27ರಂದು ಬಿಡುಗಡೆಯಾಗಲಿದೆ. ಈ ಸಿನಿಮಾವನ್ನು ಅಭಿರಾಜ್ ಮಿನವಾಲಾ ನಿರ್ದೇಶಿಸಿದ್ದಾರೆ.

ಹೊಸತನ ತುಡಿತದ ನಿವೇದಿತಾ

ಅಭಿಲಾಷ್ ಪಿ.ಎಸ್.



ಶ್ರೀ ಮುತ್ತು ಸಿನಿ ಸರ್ವೀಸ್ ಆ್ಯಂಡ್ ಪ್ರೊಡಕ್ಷನ್ಸ್‌ನಡಿ ನಿವೇದಿತಾ ಶಿವರಾಜ್‌ಕುಮಾರ್ ನಿರ್ಮಾಣ ಮಾಡಿರುವ ಚೊಚ್ಚಲ ಸಿನಿಮಾ 'ಫೈರ್‌ಫ್ಲೈ' ಏ.24ರಂದು ತೆರೆಕಾಣಲಿದೆ. ಹಲವು ಕನಸುಗಳನ್ನು ಹೊತ್ತು ಈ ಕ್ಷೇತ್ರಕ್ಕೆ ಹೆಜ್ಜೆ ಇಟ್ಟಿರುವ ನಿವೇದಿತಾ ಹೊಸತನ, ಹೊಸತಂಡಗಳನ್ನು ಕಟ್ಟುವ ನಿರ್ಧಾರ ಮಾಡಿದ್ದಾರೆ.

'ಓದು ಮುಗಿದ ಬಳಿಕ ಮುಂದೇನು ಮಾಡುವುದು ಎಂಬ ಗೊಂದಲದಲ್ಲಿದ್ದೆ. ಈ ಸಂದರ್ಭದಲ್ಲಿ ಉದ್ಯಮ ಆರಂಭಿಸುವ ಯೋಚನೆ ಮಾಡಿದ್ದೆ. ಅಪ್ಪ–ಅಮ್ಮನ ಬಳಿ ಈ ಕುರಿತು ಚರ್ಚಿಸಿದಾಗ ಕುಟುಂಬದ ಉದ್ಯಮವಾದ ಚಿತ್ರ ನಿರ್ಮಾಣವನ್ನೇ ಏಕೆ ಕೈಗೆತ್ತಿಕೊಳ್ಳಬಾರದು ಎಂಬ ಮಾತುಕತೆ ನಡೆಯಿತು. ನಟನೆಯತ್ತ ನನಗೆ ಯಾವ ಆಸಕ್ತಿಯೂ ಇರಲಿಲ್ಲ. ಸಿನಿಮಾ ನಿರ್ಮಾಣ ಕ್ಷೇತ್ರದ ಆಯ್ಕೆ ಒಂದು ಒಕ್ಕೊರಲ ನಿರ್ಧಾರವಾಗಿತ್ತು. 'ಮಾನಸ ಸರೋವರ' ಧಾರಾವಾಹಿ ಮೂಲಕ ನಿರ್ಮಾಣ ಕ್ಷೇತ್ರಕ್ಕೆ ಇಳಿದೆ. ಅದಾದ ಬಳಿಕ ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿದೆ. ಈ ಪ್ರಕ್ರಿಯೆಯಲ್ಲಿ ನನಗೆ ಸಿನಿಮಾ ಬಗ್ಗೆ ಆಸಕ್ತಿ ಮೂಡಿತು. ನಾನು ಸಿನಿಮಾದ ಸುತ್ತವೇ ಬೆಳೆದವಳು. ನನ್ನದೇ ಆಲೋಚನೆಗಳುಳ್ಳ ಹೊಸಬರನ್ನು, ಯುವ ನಿರ್ದೇಶಕರನ್ನು ಭೇಟಿಯಾದಾಗ ಚಿತ್ರ ನಿರ್ಮಾಣದತ್ತ ಗಮನಹರಿಸಿದೆ' ಎಂದು ಮಾತು ಆರಂಭಿಸಿದರು ನಿವೇದಿತಾ.

'ಅಮ್ಮನ (ಗೀತಾ ಶಿವರಾಜ್‌ಕುಮಾರ್) ಪ್ರೊಡಕ್ಷನ್ ಹೌಸ್‌ನಿಂದ ಅಪ್ಪನ 125ನೇ ಸಿನಿಮಾ ಮೊದಲನೆಯದಾಗಿ ಬಂತು. ದೊಡ್ಡ ಬಜೆಟ್‌ನ ಸಿನಿಮಾಗಳನ್ನು ಅವರು ಮಾಡುತ್ತಿದ್ದಾರೆ. ನಾನು ಚಿಕ್ಕದಾಗಿ ವೆಬ್ ಸರಣಿ ಮೂಲಕ ನನ್ನ ಪ್ರೊಡಕ್ಷನ್ ಹೌಸ್ ಆರಂಭಿಸಿದೆ. ಹೊಸದೇನಾದರೂ ಮಾಡಬೇಕು ಎನ್ನುವ ತುಡಿತ ನನ್ನಲ್ಲಿ ಇತ್ತು. ಬೇಕಿದ್ದರೆ ನನಗೂ ಸಿನಿಮಾ ಮಾಡಬಹುದಿತ್ತು. ಆದರೆ ಹೊಸಬರನ್ನು, ಹೊಸದಾದ ಭಿನ್ನ ವಿಷಯಗಳನ್ನು ಪ್ರೇಕ್ಷಕರಿಗೆ ನೀಡಬೇಕು ಎನ್ನುವ ಆಲೋಚನೆ ಇತ್ತು. ಅಜ್ಜಿ (ಪಾರ್ವತಮ್ಮ ರಾಜ್‌ಕುಮಾರ್) ಅವರಿಗೆ ನನ್ನನ್ನು ಹೋಲಿಸುತ್ತಿದ್ದಾರೆ. ಇದು ಅತಿಶಯೋಕ್ತಿ. ಇದು ನನ್ನ ಮೊದಲ ಸಿನಿಮಾವಷ್ಟೇ. ಅವರು ಸಿನಿಮಾ ನಿರ್ಮಾಣ ಆರಂಭಿಸಿದಾಗ ಪುರುಷ ಪ್ರಧಾನ ಇಂಡಸ್ಟ್ರಿ ನಮ್ಮದಾಗಿತ್ತು. ಹೀಗಿದ್ದ ಸಂದರ್ಭದಲ್ಲಿ ಅವರು ಎಲ್ಲವನ್ನು ಮೀರಿ ನಿಂತು ಸಾಧಿಸಿದರು. ಇದೇ ನನಗೆ ಸ್ಫೂರ್ತಿ. ಕಾದಂಬರಿ ಆಧಾರಿತ ಸಿನಿಮಾಗಳನ್ನು ಅವರು ಮಾಡಿದರು. ನಾನೂ ಕಾದಂಬರಿಗಳನ್ನು ಓದುತ್ತೇನೆ. ಮುಂದೆ ಕಾದಂಬರಿ ಆಧಾರಿತ ಸಿನಿಮಾಗಳನ್ನೂ ಮಾಡುವ ಆಸೆ ಇದೆ' ಎಂದರು.

'ಮೂರು ವೆಬ್ ಸರಣಿಗಳನ್ನು ನಿರ್ಮಾಣ ಮಾಡಿದ ಬಳಿಕವೂ ಕನ್ನಡದಲ್ಲಿ ವೆಬ್ ಸರಣಿಗಳ ಮಾರಾಟ ಕಷ್ಟವಾಗಿತ್ತು. ಮಾರುಕಟ್ಟೆಯ ಕಡೆಗೂ ನಾನು ಗಮನಹರಿಸಬೇಕಿತ್ತು. ವಂಶಿ ಅವರು ಈ ಸಿನಿಮಾ ಕಥೆ ಹೇಳಿದಾಗ ಬಹಳ ಇಷ್ಟವಾಯಿತು. ಇದರ ಕಥೆಯಲ್ಲಿನ ಪಾತ್ರಗಳ ಲುಕ್, ಹೇಳುವ ರೀತಿ ಭಿನ್ನವಾಗಿರಬಹುದು, ಆದರೆ ಭಾವನೆಗಳು ಎಲ್ಲರಿಗೂ ಅರ್ಥವಾಗುತ್ತದೆ. ನನ್ನ ಮೊದಲ ಸಿನಿಮಾವಾಗಿ ಇದನ್ನೇ ಆಯ್ಕೆ ಮಾಡಿಕೊಳ್ಳಬಹುದು ಎಂದು ನಿರ್ಧರಿಸಿದೆ. ಸದ್ಯದ ಸ್ಥಿತಿಯಲ್ಲಿ ಗುಣಮಟ್ಟದ, ಒಳ್ಳೆಯ ವಿಷಯಗಳು ಇರುವ ಸಿನಿಮಾಗಳನ್ನು ನೀಡಬೇಕಿದೆ. ಚಿತ್ರರಂಗವೂ ಶ್ರಮ ಹಾಕಬೇಕು. ಹೊಸಬರೇ ಆಗಿರಲಿ ಅಥವಾ ಸ್ಟಾರ್‌ಗಳೇ ಆಗಿರಲಿ ನಿರಂತರವಾಗಿ ಸಿನಿಮಾ ಮಾಡಬೇಕಿದೆ' ಎಂದು ನಿವೇದಿತಾ ಅಭಿಪ್ರಾಯಪಟ್ಟರು.

ಸಿನಿಮಾ ಜೊತೆಗೆ ವೆಬ್ ಸರಣಿ

'ಕನ್ನಡ ವೆಬ್ ಸರಣಿಗಳಿಗೆ ಖಂಡಿತಾ ಭವಿಷ್ಯವಿದೆ. ಸಿನಿಮಾ ಜೊತೆಗೆ ಮುಂದೆ ವೆಬ್ ಸರಣಿಗಳನ್ನೂ ಮಾಡಲಿದ್ದೇನೆ. ನಾನು ಮೊದಲು ವೆಬ್ ಸರಣಿ ಮಾಡಿದ ಬಳಿಕ ಅದನ್ನು ಮಾರಾಟ ಮಾಡಲು ಎರಡು ವರ್ಷ ತೆಗೆದುಕೊಂಡೆ. 'ಹನಿಮೂನ್' ಮೊದಲಿಗೆ ಮಾರಾಟವಾಗಿದ್ದು ತೆಲುಗಿನಲ್ಲಿ. ಕನ್ನಡದಲ್ಲಿ ಯಾರೂ ತೆಗೆದುಕೊಳ್ಳಲಿಲ್ಲ. ತೆಲುಗಿನಲ್ಲಿ ಬಂದ ಬಳಿಕ ಕನ್ನಡದಲ್ಲಿ ಮಾರಾಟವಾಯಿತು. ಒಟಿಟಿ ವೇದಿಕೆಗಳು ಬೆಂಗಳೂರಿನ ಅಂಕಿ ಅಂಶದ ಆಧಾರದ ಮೇಲೆ ವೆಬ್ ಸರಣಿಗಳನ್ನು ನಿರ್ಮಾಣ ಮಾಡುತ್ತಿವೆ ಅಥವಾ ಖರೀದಿಸುತ್ತಿವೆ. ಇದು ನನ್ನ ವೈಯಕ್ತಿಕ ಅಭಿಪ್ರಾಯ. ಒಟ್ಟಾರೆ ರಾಜ್ಯದಲ್ಲಿ ಅಥವಾ ವಿಶ್ವದೆಲ್ಲೆಡೆ ಕನ್ನಡದ ವೀಕ್ಷಕರು ಹೆಚ್ಚಿದ್ದಾರೆ' ಎನ್ನುತ್ತಾರೆ ನಿವೇದಿತಾ.




ಶಿವರಾಜ್‌ಕುಮಾರ್

> ಮಗಳ ಮೊದಲ ಸಿನಿಮಾದಲ್ಲಿ ನಟಿಸಲೇಬೇಕು ಎಂದು ಅಪ್ಪನಿಗೆ ಆಸೆ ಇತ್ತು ಎಂದುಕೊಂಡಿದ್ದೇನೆ. ಅಪ್ಪ ತುಂಬಾ ಖುಷಿಪಟ್ಟು, ಇಷ್ಟಪಟ್ಟು ಮಾಡಿದ ಪಾತ್ರವಿದು. ಪಾತ್ರ ಸಣ್ಣದಾಗಿದ್ದರೂ ಬಹಳ ಮುದ್ದು ಮುದ್ದಾಗಿದೆ.
>
> **ನಿವೇದಿತಾ ಶಿವರಾಜ್‌ಕುಮಾರ್**, ನಿರ್ಮಾಪಕಿ

ತಣ್ಣಗಾದ 'ಸ್ಪಾರ್ಕ್' ವಿವಾದ

ನಿರಂಜನ್ ಸುಧೀಂದ್ರ ನಟನೆಯ 'ಸ್ಪಾರ್ಕ್'ನಲ್ಲಿ 'ನೆನಪಿರಲಿ' ಪ್ರೇಮ್ ವಿಶೇಷ ಪಾತ್ರವೊಂದನ್ನು ನಿಭಾಯಿಸುತ್ತಿದ್ದಾರೆ. ಇತ್ತೀಚೆಗೆ ಬಿಡುಗಡೆಗೊಂಡಿದ್ದ ಅವರ ಪಾತ್ರವನ್ನು ಪರಿಚಯಿಸುವ ಪೋಸ್ಟರ್ ವಿವಾದ ಸೃಷ್ಟಿಸಿತ್ತು.

ನಟ ರಮೇಶ್ ಇಂದಿರಾ ಅವರ ಅನುಮತಿ ಇಲ್ಲದೇ ಅವರ ಚಿತ್ರವೊಂದನ್ನು 'ಸ್ಪಾರ್ಕ್' ಚಿತ್ರತಂಡ ಬಳಸಿಕೊಂಡಿತ್ತು. ಈ ಕುರಿತು ರಮೇಶ್ ಇಂದಿರಾ ಅಸಮಾಧಾನ ವ್ಯಕ್ತಪಡಿಸಿ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದರು. ಇದೀಗ 'ಸ್ಪಾರ್ಕ್' ಚಿತ್ರದ ನಿರ್ದೇಶಕ ಮಹಾಂತೇಶ್ ಹಂದ್ರಾಳ್ ಅವರು ರಮೇಶ್ ಇಂದಿರಾ ಬಳಿ ಕ್ಷಮೆಯಾಚಿಸಿದ್ದಾರೆ. ಈ ಮೂಲಕ ವಿವಾದಕ್ಕೆ ತೆರೆ ಬಿದ್ದಿದೆ.




'ರಾಮಾಯಣ'ಕ್ಕೆ ಸಜ್ಜಾದ ಯಶ್

ಯಶ್ ನಟನೆಯ 19ನೇ ಸಿನಿಮಾ 'ಟಾಕ್ಸಿಕ್' ಸದ್ಯ ಚಿತ್ರೀಕರಣದ ಹಂತದಲ್ಲಿದೆ. ಈ ಚಿತ್ರ 2026ರ ಮಾರ್ಚ್ 19ರಂದು ತೆರೆಗೆ ಬರಲಿದೆ. ಈ ನಡುವೆ 'ರಾಮಾಯಣ'ದ ಸೆಟ್ ಪ್ರವೇಶಿಸಲು ಯಶ್ ಸಜ್ಜಾಗಿದ್ದಾರೆ.

ಸೆಟ್ ಪ್ರವೇಶಕ್ಕೂ ಮುನ್ನ ಅವರು ಉಜ್ಜಯಿನಿಯ ಮಹಾಕಾಳೇಶ್ವರ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿದ್ದಾರೆ. ಮುಂದಿನ ವಾರದಿಂದ 'ರಾಮಾಯಣ' ಮೊದಲ ಭಾಗದ ಶೂಟಿಂಗ್ ಆರಂಭವಾಗಲಿದೆ ಎನ್ನಲಾಗಿದೆ. ನಿತೇಶ್ ತಿವಾರಿ ನಿರ್ದೇಶನದಲ್ಲಿ ಈ ಸಿನಿಮಾ ಮೂಡಿಬರಲಿದ್ದು, ಪ್ರೈಂ ಫೋಕಸ್ ಸ್ಟುಡಿಯೊಸ್ ಬ್ಯಾನರ್‌ನಡಿ ನಮಿತ್ ಮಲ್ಹೋತ್ರಾ ನಿರ್ಮಾಣ ಮಾಡುತ್ತಿದ್ದಾರೆ. 2024ರ ನವೆಂಬರ್‌ನಲ್ಲಿ ಈ ಸಿನಿಮಾ ಘೋಷಣೆಯಾಗಿತ್ತು. ಯಶ್ ಅವರ ಮಾನ್‌ಸ್ಟರ್ ಮೈಂಡ್ ಕ್ರಿಯೇಷನ್ಸ್ ಈ ಸಿನಿಮಾದ ಸಹ ನಿರ್ಮಾಣ ಮಾಡುತ್ತಿದೆ. ಚಿತ್ರವು ಎರಡು ಭಾಗಗಳಲ್ಲಿ ತೆರೆಕಾಣುತ್ತಿದ್ದು, 2026ರ ದೀಪಾವಳಿಗೆ ಮೊದಲ ಭಾಗ, 2027ರ ದೀಪಾವಳಿಗೆ ಎರಡನೇ ಭಾಗ ತೆರೆಕಾಣಲಿದೆ.

ಚಿತ್ರದಲ್ಲಿ ಬಾಲಿವುಡ್ ನಟ ರಣಬೀರ್ ಕಪೂರ್ 'ರಾಮ'ನ ಪಾತ್ರದಲ್ಲಿ ನಟಿಸಲಿದ್ದಾರೆ. ನಟಿ ಸಾಯಿ ಪಲ್ಲವಿ 'ಸೀತೆ'ಯಾಗಿ ಹಾಗೂ ಯಶ್ 'ರಾವಣ'ನ ಪಾತ್ರಧಾರಿಯಾಗಿ ನಟಿಸಲಿದ್ದಾರೆ. ಈ ಚಿತ್ರದಲ್ಲಿ ನಟಿಸುತ್ತಿರುವುದಾಗಿ ರಣಬೀರ್ ಹಾಗೂ ಯಶ್ ಹೇಳಿಕೊಂಡಿದ್ದರೂ, ಚಿತ್ರತಂಡವು ಅಧಿಕೃತವಾಗಿ ಇನ್ನಷ್ಟೇ ಘೋಷಿಸಬೇಕಿದೆ.



> ನನಗೆ ಶಿವನ ಆಶೀರ್ವಾದ ಬೇಕಿತ್ತು. ನಾನೊಬ್ಬ ಶಿವಭಕ್ತ. ನಮ್ಮ ಮನೆದೇವರು ಶಿವ. ಇಲ್ಲಿ ಧ್ಯಾನದ ವೇಳೆ ಸಿಕ್ಕ ಅನುಭವ ಅವರ್ಣನೀಯ
>
> **ಯಶ್**, ನಟ

ಮಂಗಳಾಪುರಂ ಕಥೆ ಹೇಳ್ತಾರೆ ರಿಷಿ

'ಆಪರೇಷನ್ ಅಲಮೇಲಮ್ಮ', 'ಕವಲುದಾರಿ' ಸಿನಿಮಾ ಖ್ಯಾತಿಯ ನಟ ರಿಷಿ ನಟನೆಯ ಹೊಸ ಪ್ರಾಜೆಕ್ಟ್ ಘೋಷಣೆಯಾಗಿದೆ. ಚಿತ್ರಕ್ಕೆ 'ಮಂಗಳಾಪುರಂ' ಎಂಬ ಶೀರ್ಷಿಕೆ ಇಡಲಾಗಿದ್ದು, ನಟ ಅಭಿಮನ್ಯು ಕಾಶಿನಾಥ್ ಅವರೂ ಮುಖ್ಯಭೂಮಿಕೆಯಲ್ಲಿ ಸಾಥ್ ನೀಡುತ್ತಿದ್ದಾರೆ.

ತುಳು ಚಿತ್ರರಂಗದಲ್ಲಿ 'ಉಮಿಲ್' ಹಾಗೂ 'ದೊಂಬರಾಟ' ಸಿನಿಮಾ ನಿರ್ದೇಶಿಸಿದ್ದ ರಂಜಿತ್ ರಾಜ್ ಸುವರ್ಣ, ರಿಷಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. 'ಮಂಗಳಾಪುರಂ' ಸಿನಿಮಾ ಒಂದು ಊರಿನಲ್ಲಿ ನಡೆಯುವ ಮರ್ಡರ್ ಮಿಸ್ಟ್ರಿ ಕಥೆ ಹೊಂದಿದೆ. ನಂಬಿಕೆ, ಮೂಢನಂಬಿಕೆ ಹಾಗೂ ಪವಾಡ ವಿಚಾರದ ಮೇಲೆ ಕಥೆ ಸಾಗಲಿದೆ. ಮಂಗಳೂರು ಭಾಗದ ಕಥೆಯನ್ನು ಚಿತ್ರ ಹೊಂದಿದೆ. 'ಪ್ರತಿಯೊಂದು ಊರಿನ ಒಂದೊಂದು ಜಾಗದಲ್ಲಿ ಒಂದೊಂದು ಕಥೆ ಇರುತ್ತದೆ. ಆ ಜಾಗ ಹೇಗೇ ಇರಲಿ, ಅಲ್ಲಿ ನಡೆಯುವ ಘಟನೆಗಳಿಂದಾಗಿ ಆ ಜಾಗವನ್ನು ನೋಡುವ ದೃಷ್ಟಿಕೋನ ಬದಲಾಗುತ್ತದೆ, ಇದು ಚಿತ್ರದ ಎಳೆ ಎಂದಿದ್ದಾರೆ' ನಿರ್ದೇಶಕರು.

'ಇದು ಕರಾವಳಿ ಭಾಗದ ಬೇರಿನ ಕಥೆ. ನನ್ನದು ಬರಹಗಾರನ ಪಾತ್ರ. ಈತ ಅನಿವಾಸಿ ಭಾರತೀಯ. ಒಂದು ಜಾಗದ ಬಗ್ಗೆ ಆತನ ದೃಷ್ಟಿಕೋನವೇನು ಎಂಬುವುದರ ಮೇಲೆ ಕಥೆ ಸಾಗುತ್ತದೆ. ಆತ ಅಲ್ಲಿಗೆ ಏಕೆ ಬಂದ, ಮುಂದೇನಾಗುತ್ತದೆ ಎಂಬುದು ಕಥಾಹಂದರ. ಕರಾವಳಿ ಭಾಗದ ಸಂಸ್ಕೃತಿ, ಆಚರಣೆಗಳ ಅನಾವರಣ ಇಲ್ಲಿದೆ. ಆ ಜಗತ್ತನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವ ಪ್ರಯತ್ನದಲ್ಲಿದ್ದೇನೆ. ನಿರ್ದೇಶಕರು, ನಿರ್ಮಾಪಕರು ಅದೇ ಭಾಗದವರಾದ ಕಾರಣ ನನ್ನ ಎಲ್ಲಾ ಪ್ರಶ್ನೆಗಳಿಗೆ ಅವರಲ್ಲಿ ಉತ್ತರ ದೊರಕುತ್ತಿದೆ' ಎಂದಿದ್ದಾರೆ ನಟ ರಿಷಿ.

ಈ ಸಿನಿಮಾಗೆ ಶ್ರೀ ವರಾಹಿ ಕ್ರಿಯೇಷನ್ಸ್‌ನಡಿ ಪ್ರಸನ್ನ ತಂತ್ರಿ ಮೂಡಬಿದ್ರೆ ಹಾಗೂ ರಾಮ್ ಪ್ರಸಾದ್ ಬಂಡವಾಳ ಹೂಡಲಿದ್ದಾರೆ. ಚಿತ್ರತಂಡ ಜೂನ್‌ನಿಂದ ಚಿತ್ರೀಕರಣಕ್ಕೆ ಇಳಿಯಲಿದೆ. ಕಾರ್ಕಳ, ತೀರ್ಥಹಳ್ಳಿ, ಮಡಿಕೇರಿ, ಬೆಂಗಳೂರು ಸುತ್ತಮುತ್ತ ಚಿತ್ರೀಕರಣ ನಡೆಯಲಿದೆ. ಚಿತ್ರಕ್ಕೆ ಅನೂಪ್ ಸೀಳಿನ್ ಸಂಗೀತ ನಿರ್ದೇಶನ,ಅಭಿಷೇಕ್ ಕಾಸರಗೋಡು ಛಾಯಾಚಿತ್ರಗ್ರಹಣವಿರಲಿದೆ.





> ಈ ಚಿತ್ರದ ಕಥೆಯನ್ನು 'ಕಾಂತಾರ'ದ ಮುಂಚೆಯೇ ನಿರ್ದೇಶಕರು ಬರೆದಿದ್ದರು. 'ಕಾಂತಾರ' ಬಂದ ಬಳಿಕ ಅದೇ ಮಾದರಿಯ ಸಿನಿಮಾ ಆಗಬಾರದು ಎನ್ನುವ ಕಾರಣಕ್ಕೆ ಕಥೆಯಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಂಡಿದ್ದಾರೆ. ಬೇರೆ ಸಿನಿಮಾಗಳಿಗೆ ಹೋಲುವಂಥ ಅಂಶಗಳು ಇದರಲ್ಲಿ ಇಲ್ಲ.
>
> **ರಿಷಿ**, ನಟ

'ವಾಹನಗಳ ಹಾರ್ನ್: ಹೊಸ ಕಾನೂನು ರೂಪಿಸಲು ಚಿಂತನೆ'

ನವದೆಹಲಿ (ಪಿಟಿಐ): ವಾಹನಗಳ 'ಹಾರ್ನ್'ನಲ್ಲಿ ಭಾರತೀಯ ಸಂಗೀತ ವಾದ್ಯಗಳ ಶಬ್ದಗಳನ್ನು ಮಾತ್ರ ಬಳಸುವಂತೆ ಕಾನೂನು ಜಾರಿಗೊಳಿಸಲು ಚಿಂತನೆ ನಡೆಸಿರುವುದಾಗಿ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸೋಮವಾರ ಹೇಳಿದರು.

'ನವಭಾರತ್ ಟೈಮ್ಸ್'ನ 78ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಮಾತನಾಡಿದ ಅವರು, 'ಎಲ್ಲ ವಾಹನಗಳ ಹಾರ್ನ್‌ಗಳಲ್ಲಿ ಕೊಳಲು, ತಬಲಾ, ಪಿಟೀಲು, ಹಾರ್ಮೋನಿಯಂ ಸೇರಿದಂತೆ ಕೇಳಲು ಹಿತವೆನಿಸುವ ಭಾರತೀಯ ಸಂಗೀತ ವಾದ್ಯಗಳ ಶಬ್ದಗಳನ್ನು ಬಳಸುವಂತೆ ಕಾನೂನು ರೂಪಿಸಲು ನಾನು ಯೋಜಿಸುತ್ತಿದ್ದೇನೆ' ಎಂದು ತಿಳಿಸಿದರು.

ಪೋಪ್ ಫ್ರಾನ್ಸಿಸ್ ಇನ್ನಿಲ್ಲ

ಒಂದನೇ ಪುಟದಿಂದ...

'ಫ್ರಾನ್ಸಿಸ್ ಅವರ ಇಡೀ ಜೀವನವು ಚರ್ಚ್ ಮತ್ತು ಭಗವಂತನ ಸೇವೆಗೆ ಮೀಸಲಾಗಿತ್ತು' ಎಂದು ಅವರ ನಿಧನ ಸುದ್ದಿ ಪ್ರಕಟಿಸಿದ ಹಿರಿಯ ಕಾರ್ಡಿನಲ್ ಕೆವಿನ್ ಫೆರೆಲ್ ಹೇಳಿದ್ದಾರೆ. ತಮ್ಮ ಆಡಳಿತದ ಅವಧಿಯಲ್ಲಿ ಕೆಲವೊಂದು ಸುಧಾರಣೆಗಳನ್ನು ತಂದಿದ್ದ ಫ್ರಾನ್ಸಿಸ್, ಸಂಪ್ರದಾಯವಾದಿಗಳ ಕೆಂಗಣ್ಣಿಗೂ ಗುರಿಯಾಗಿದ್ದರು.

ಅರ್ಜೆಂಟೀನಾದ ಒರ್ಗೆ ಮಾರಿಯೊ ಬೆರ್ಗೋಲಿಯೊ (ಫ್ರಾನ್ಸಿಸ್ ಮೂಲ ಹೆಸರು) ಅವರು 2013ರ ಮಾರ್ಚ್ 13ರಂದು ಪೋಪ್ ಆಗಿ ಆಯ್ಕೆಯಾಗಿದ್ದರು. ಈಚೆಗೆ ನ್ಯುಮೋನಿಯದಿಂದ ಬಳಲಿದ್ದ ಅವರು ಫೆ.14ರಂದು ರೋಮ್‌ನ ಜೆಮೆಲ್ಲಿ ಆಸ್ಪತ್ರೆಗೆ ದಾಖಲಾಗಿದ್ದರು. 38 ದಿನ ಚಿಕಿತ್ಸೆ ಪಡೆದು ಮಾರ್ಚ್ 23ರಂದು ಮನೆಗೆ ಮರಳಿದ್ದರು. ನ್ಯುಮೋನಿಯ ಕಾರಣ 1950ರ ಸಂದರ್ಭದಲ್ಲಿ ಅವರ ಬಲ ಶ್ವಾಸಕೋಶದ ಒಂದು ಭಾಗವನ್ನು ತೆಗೆದು ಹಾಕಲಾಗಿತ್ತು.

ಭಾನುವಾರ ವ್ಯಾಟಿಕನ್‌ನಲ್ಲಿ ಈಸ್ಟರ್ ಸಂಭ್ರಮದಲ್ಲಿ ಪಾಲ್ಗೊಂಡಿದ್ದ ಅವರು ಸೇಂಟ್ ಪೀಟರ್ಸ್ ಸ್ಕ್ವೇರ್‌ನಲ್ಲಿ ನೆರೆದಿದ್ದ ಸಾವಿರಾರು ಮಂದಿಯನ್ನು ಆಶೀರ್ವದಿಸಿದ್ದರು. ಅದರ ಮರುದಿನ ಸಾವು ಸಂಭವಿಸಿದೆ. ಇನ್ನೊಂದು ವಾರ ಫ್ರಾನ್ಸಿಸ್ ಅವರ ಪಾರ್ಥಿವ ಶರೀರದ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತದೆ. ಮೊದಲು ಸಾಂಟಾ ಮಾರ್ಟಾ ಚರ್ಚ್‌ನಲ್ಲಿ ವ್ಯಾಟಿಕನ್‌ನ ಅಧಿಕಾರಿಗಳು ಅಂತಿಮ ನಮನ ಸಲ್ಲಿಸಲಿದ್ದಾರೆ. ಆ ಬಳಿಕ ಸೇಂಟ್ ಪೀಟರ್ಸ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಅನಂತರ ಅಂತ್ಯಕ್ರಿಯೆ ಹಾಗೂ ನೂತನ ಪೋಪ್ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಹೊಸ ಪೋಪ್ ಆಯ್ಕೆಯಾಗುವವರೆಗೂ ಡಬ್ಲಿನ್ ಮೂಲದ ಕೆವಿನ್ ಫೆರೆಲ್ ಅವರು ವ್ಯಾಟಿಕನ್ ಸಿಟಿಯ ದೈನಂದಿನ ಚಟುವಟಿಕೆಗಳ ನೇತೃತ್ವ ವಹಿಸಲಿದ್ದಾರೆ.

'ಯಾವುದೇ ನಿರ್ದಿಷ್ಟ ಅಲಂಕಾರಗಳನ್ನು ಮಾಡದೆ ತಮ್ಮನ್ನು ಹೂಳಬೇಕು. ಆದರೆ ಸಮಾಧಿಯ ಮೇಲೆ 'ಫ್ರಾನ್ಸಿಸ್ಕಸ್' (ಮುಕ್ತನಾದ ಮನುಷ್ಯ) ಎಂಬ ಪದ ಕೆತ್ತಿಸಬೇಕೆಂದು ಪೋಪ್ ಸೂಚಿಸಿದ್ದರು' ಎಂದು ವ್ಯಾಟಿಕನ್ ತಿಳಿಸಿದೆ.

> ಪ್ರಪಂಚದಾದ್ಯಂತ ಕೋಟ್ಯಂತರ ಜನರು ಪೋಪ್ ಫ್ರಾನ್ಸಿಸ್ ಅವರನ್ನು ಸಹಾನುಭೂತಿ ಮತ್ತು ನಮ್ರತೆಯ ದಾರಿದೀಪವಾಗಿ ನೆನಪಿಸಿಕೊಳ್ಳುವರು
>
> **ನರೇಂದ್ರ ಮೋದಿ**, ಪ್ರಧಾನಿ

ಪ್ರಾಧ್ಯಾಪಕ ಹುದ್ದೆಗೆ ₹ 50 ಲಕ್ಷ?

ಒಂದನೇ ಪುಟದಿಂದ...

ದೂರುಗಳೇನು?: 'ನೇಮಕಾತಿ ಅಧಿಸೂಚನೆ ಪ್ರಕಟಗೊಂಡ ನಂತರ ಕೇವಲ 2 ದಿನ ಸಮಯ ನೀಡಿದ್ದು ಏಕೆ' ಎಂದು ದೂರಿನಲ್ಲಿ ಪ್ರಶ್ನಿಸಲಾಗಿದೆ. ನೇಮಕಾತಿಯಲ್ಲಿ ಮೀಸಲಾತಿಯ ರೋಸ್ಟರ್, ಜ್ಯೇಷ್ಠತೆಯನ್ನು ಪರಿಗಣಿಸಿಲ್ಲ ಎಂದೂ ಆರೋಪಿಸಲಾಗಿದೆ. ಜೊತೆಗೆ ಸಂದರ್ಶನ ಪ್ರಕ್ರಿಯೆಯನ್ನು ಚಿತ್ರದುರ್ಗದಲ್ಲಿ ನಡೆಸದೇ ಬೆಂಗಳೂರಿನಲ್ಲಿ ನಡೆಸಿರುವುದು ಅನುಮಾನಾಸ್ಪದ ಎಂದು ದೂರಲಾಗಿದೆ.

'ಟಿ.ಎ, ಡಿ.ಎ ನೀಡದೇ ಬೆಂಗಳೂರಿಗೆ ಕರೆಸಿ ಕೆಲವೇ ನಿಮಿಷದಲ್ಲಿ ಸಂದರ್ಶನ ಮುಗಿಸಲಾಯಿತು. ಹಣ ಕೇಳುವುದಕ್ಕಾಗಿಯೇ ಪ್ರತ್ಯೇಕವಾಗಿ ಮತ್ತೆ ಬೆಂಗಳೂರಿಗೆ ಕರೆಸಿದ್ದರು. ವೈದ್ಯಕೀಯ ಕಾಲೇಜು ನಿರ್ದೇಶಕ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಅಧಿಕಾರಿಗಳು ಅಕ್ರಮದಲ್ಲಿ ನೇರವಾಗಿ ಪಾಲ್ಗೊಂಡಿದ್ದಾರೆ' ಎಂದು ಪ್ರಾದೇಶಿಕ ಆಯುಕ್ತರಿಗೆ ದೂರು ನೀಡಿರುವ ವೈದ್ಯರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಕೇವಲ 6 ಅಧ್ಯಾಪಕರು: ದಾವಣಗೆರೆ ವಿ.ವಿ.ಕ್ಯಾಂಪಸ್, ಜಿ.ಆರ್. ಹಳ್ಳಿ ಜ್ಞಾನಗಂಗೋತ್ರಿ ಆವರಣದಲ್ಲಿ ವೈದ್ಯಕೀಯ ಕಾಲೇಜು ನಡೆಯುತ್ತಿದ್ದು, ಮೂಲ ಸೌಲಭ್ಯಗಳಿಲ್ಲ. ಮೊದಲ ಹಾಗೂ 2ನೇ ವರ್ಷದ 300 ಎಂಬಿಬಿಎಸ್ ವಿದ್ಯಾರ್ಥಿಗಳಿಗೆ ಕೇವಲ 6 ಮಂದಿ ಅಧ್ಯಾಪಕರಿದ್ದಾರೆ. ವಾರಕ್ಕೊಮ್ಮೆ ಹೊರ ಜಿಲ್ಲೆಗಳಿಂದ ಬರುವ ಅಧ್ಯಾಪಕರೇ ವಿದ್ಯಾರ್ಥಿಗಳಿಗೆ ಆಧಾರವಾಗಿದ್ದಾರೆ.

'ಕನ್ನಡ ಅಧ್ಯಯನ ಕೇಂದ್ರದ ಸಭಾಂಗಣವೇ ತರಗತಿಯಾಗಿದೆ. ಪರೀಕ್ಷೆಗಳು ಸಮೀಪಿಸುತ್ತಿದ್ದರೂ ಇಲ್ಲಿಯವರೆಗೆ ಒಂದೇ ಒಂದು ಪ್ರಾಯೋಗಿಕ ತರಗತಿ ನಡೆದಿಲ್ಲ. ಪ್ರಯೋಗಾಲಯವೇ ಇಲ್ಲದ ಕಾರಣ ತರಗತಿಗಳು ನಡೆಯುತ್ತಿಲ್ಲ. ನಾವು ವೈದ್ಯರಾಗುವುದು ಹೇಗೆ ಎಂಬ ಪ್ರಶ್ನೆ ಸೃಷ್ಟಿಯಾಗಿದೆ' ಎಂದು 2ನೇ ವರ್ಷದ ಎಂಬಿಬಿಎಸ್ ವಿದ್ಯಾರ್ಥಿಯೊಬ್ಬರು ಆತಂಕ ವ್ಯಕ್ತಪಡಿಸಿದರು.

ಫೆಡರೇಷನ್ ಕಪ್ ಅಥ್ಲೆಟಿಕ್ಸ್: ಕೂಟ ದಾಖಲೆ ಸ್ಥಾಪಿಸಿದ ಸಾವನ್

ಪ್ರಣವ್ ಪ್ರಮೋದ್ ವೇಗದ ಓಟಗಾರ

ಕೊಚ್ಚಿ (ಪಿಟಿಐ): ಖ್ಯಾತನಾಮ ಓಟಗಾರರನ್ನು ಹಿಂದೆಹಾಕಿದ ರೈಲ್ವೇಸ್‌ನ ಪ್ರಣವ್ ಪ್ರಮೋದ್, ಸೋಮವಾರ ಆರಂಭವಾದ ರಾಷ್ಟ್ರೀಯ ಫೆಡರೇಷನ್ ಕಪ್ ಸೀನಿಯರ್ ಅಥ್ಲೆಟಿಕ್ ಕೂಟದ ಪುರುಷರ 100 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದುಕೊಂಡರು.

ಉತ್ತರಾಖಂಡದಲ್ಲಿ ನಡೆದ ರಾಷ್ಟ್ರೀಯ ಕ್ರೀಡೆಗಳಲ್ಲಿ ಬೆಳ್ಳಿ ಗೆದ್ದಿದ್ದ 23 ವರ್ಷ ವಯಸ್ಸಿನ ಪ್ರಣವ್ 10.27 ಸೆ.ಗಳಲ್ಲಿ ಗುರಿತಲುಪಿ ಮೊದಲ ದಿನ ಗಮನ ಸೆಳೆದರು. ರಾಷ್ಟ್ರೀಯ ಕ್ರೀಡೆಗಳಲ್ಲಿ ಅವರು 10.32 ಸೆ. ತೆಗೆದುಕೊಂಡಿದ್ದರು. ಆದರೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿಪಡಿಸಿದ ಅರ್ಹತಾ ಗಡುವಿನೊಳಗೆ (10.25 ಸೆ.) ಗುರಿ ತಲುಪಲಾಗಲಿಲ್ಲ.

ಒಡಿಶಾದ ಅನಿಮೇಶ್ ಕುಜೂರ್ ಮತ್ತು ಕರ್ನಾಟಕದ ಮಣಿಕಂಠ ಹೋಬಳಿದಾರ್ ಕ್ರಮವಾಗಿ 10.32 ಸೆ. ಮತ್ತು 10.35 ಸೆ. ತೆಗೆದುಕೊಂಡು ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು. ರಾಷ್ಟ್ರೀಯ ದಾಖಲೆ (10.20 ಸೆ.) ಹೊಂದಿರುವ ರಿಲಯನ್ಸ್‌ನ ಗುರಿಂದರ್‌ವೀರ್ ಸಿಂಗ್ ಹಿನ್ನಡೆ ಕಂಡು 11.21 ಸೆ.ಗಳೊಡನೆ ಎಂಟನೇ (ಕೊನೆಯ) ಸ್ಥಾನ ಪಡೆದರು.

ಕೆಲವು ವರ್ಷಗಳಿಂದ ಸಿಂಗ್, ಕುಜೂರ್, ಹೋಬಳಿದಾರ್ ಮತ್ತು ಅಮ್ಲನ್ ಬೊರ್ಗೊಹೈನ್ ಈ ಓಟದಲ್ಲಿ ಮೇಲುಗೈ ಸಾಧಿಸುತ್ತಿದ್ದರು. ಈ ಏಕಸ್ವಾಮ್ಯವನ್ನು ಪ್ರಣವ್ ಮುರಿದರು.

ಸಚಿನ್‌ಗೆ ಚಿನ್ನ: ಜಾವೆಲಿನ್ ಥ್ರೋದಲ್ಲಿ ಪೊಲೀಸ್ ಕ್ರೀಡಾ ನಿಯಂತ್ರಣ ಮಂಡಳಿಯ ಸಚಿನ್ ಯಾದವ್ 83.86 ಮೀ. ಸಾಧನೆಯೊಡನೆ ನಿರೀಕ್ಷೆಯಂತೆ ಚಿನ್ನ ಗೆದ್ದರು. 25 ವರ್ಷ ವಯಸ್ಸಿನ ಸಚಿನ್ ಐದನೇ ಯತ್ನದಲ್ಲಿ ಈ ದೂರ ಸಾಧಿಸಿದರು.

ಈ ಸ್ಪರ್ಧೆಯಲ್ಲಿ ಏಳು ಮಂದಿ ಏಷ್ಯನ್ ಕೂಟಕ್ಕೆ ನಿಗದಿಪಡಿಸಿದ ಅರ್ಹತಾ ಮಟ್ಟ (75.36 ಮೀ) ಮೀರಿದರು. ರೈಲ್ವೇಸ್‌ನ ಯಶ್ವೀರ್ ಸಿಂಗ್ (80.85 ಮೀ.), ರಿಲಯನ್ಸ್‌ನ ಸಾಹಿಲ್ ಸಿಲ್ವಾಲ್ (77.84 ಮೀ.) ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಏಷ್ಯನ್ ಗೇಮ್ಸ್ ಬೆಳ್ಳಿ ವಿಜೇತ ಕಿಶೋರ್ ಜೇನಾ (77.82 ಮೀ) ಮತ್ತೆ ಹಿನ್ನಡೆ ಕಂಡು ನಾಲ್ಕನೇ ಸ್ಥಾನಕ್ಕೆ ಸರಿದರು. ಮಹಾರಾಷ್ಟ್ರದ ಶಿವಂ ಲೋಹಕರೆ (76.75 ಮೀ.), ಕರ್ನಾಟಕದ ಶಶಾಂಕ್ ಪಾಟೀಲ (76.66 ಮೀ.) ಮತ್ತು ಉತ್ತರ ಪ್ರದೇಶದ ರೋಹಿತ್ ಯಾದವ್ (76.37) ಐದರಿಂದ ಏಳರವರೆಗಿನ ಸ್ಥಾನ ಪಡೆದರು.

ಸ್ನೇಹಾಗೆ ಬೆಳ್ಳಿ: ತೆಲಂಗಾಣದ ನಿತ್ಯಾ ಗಂಧೆ ಮಹಿಳೆಯರ 100 ಮೀ. ಓಟದಲ್ಲಿ 11.50 ಸೆ.ಗಳಲ್ಲಿ ಗುರಿತಲುಪಿ ಕೂಟದ ವೇಗದ ರಾಣಿ ಎನಿಸಿದರು. ತಮಿಳುನಾಡಿನ ಅಭಿನಯಾ ರಾಜರಾನಜ್ (11.54 ಸೆ.) ಬೆಳ್ಳಿ ಮತ್ತು ಕರ್ನಾಟಕದ ಸ್ನೇಹಾ ರಮೇಶ್ (11.62 ಸೆ.) ಕಂಚು ಗೆದ್ದರು.



ಚಿನ್ನ ಗೆದ್ದ ಪ್ರಣವ್ ಪ್ರಮೋದ್

ಸಾವನ್‌ಗೆ ಏಷ್ಯನ್ ಟಿಕೆಟ್

ಸೇನೆಯ ಸಾವನ್ ಬರ್ವಾಲ್ ನಿರೀಕ್ಷೆಯಂತೆ ಪುರುಷರ 10,000 ಮೀ. ಓಟದಲ್ಲಿ ಚಿನ್ನದ ಪದಕ ಗೆದ್ದರು. 28ನಿ.57.13 ಸೆ.ಗಳಲ್ಲಿ ಗುರಿ ತಲುಪಿದ ಸಾವನ್ ಕೂಟ ದಾಖಲೆ ಸ್ಥಾಪಿಸಿದರು. ಜೊತೆಗೆ ಏಷ್ಯನ್ ಚಾಂಪಿಯನ್‌ಷಿಪ್‌ಗೆ ನಿಗದಿ ಪಡಿಸಿದ ಅರ್ಹತಾ ಮಾನದಂಡವನ್ನೂ (29:33.26) ಪೂರೈಸಿದರು. ಹಿಂದಿನ ಕೂಟ ದಾಖಲೆಯನ್ನು (28:57.90) ಸುರೇಂದ್ರ ಸಿಂಗ್ 2007ರಲ್ಲಿ ಸ್ಥಾಪಿಸಿದ್ದರು.

ರೈಲ್ವೆಯ ಅಭಿಷೇಕ್ ಪಾಲ್ (29:14.86) ಕೂಡ ಅರ್ಹತಾ ಮಾನದಂಡ ಪೂರೈಸಿದರು. ಸೇನೆಯ ಕಿರಣ್ ಮಾತ್ರೆ (29:47.62) ಕಂಚಿನ ಪದಕ ಪಡೆದರು.

ಮಹಿಳೆಯರ 10,000 ಮೀ. ಓಟದ ಚಿನ್ನ ಅಂತರರಾಷ್ಟ್ರೀಯ ಓಟಗಾರ್ತಿ ಮಹಾರಾಷ್ಟ್ರದ ಸಂಜೀವನಿ ಜಾಧವ್ (33:44.33 ಸೆ.) ಪಾಲಾಯಿತು.



ಸಾವನ್ ಬರ್ವಾಲ್

ಹಾಕಿ: ಚೆಪ್ಪುಡಿರಗೆ ಭರ್ಜರಿ ಜಯ

ಮಡಿಕೇರಿ: ಚೇತನ್ ಚಿಣ್ಣಪ್ಪ ಅವರ ಆಟದ ಬಲದಿಂದ ಚೆಪ್ಪುಡಿರ ತಂಡದವರು 'ಮುದ್ದಂಡ ಕಪ್' ಕೊಡವ ಕೌಟುಂಬಿಕ ಹಾಕಿ ಟೂರ್ನಿಯ ಸೋಮವಾರದ ಪಂದ್ಯದಲ್ಲಿ ಅಟ್ರಂಗಡ ತಂಡದ ವಿರುದ್ಧ 5–0ಯಿಂದ ಭರ್ಜರಿ ಜಯ ಸಾಧಿಸಿದರು.

ಇಲ್ಲಿನ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಕಾಲೇಜಿನ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಚೇತನ್ ಎರಡು ಗೋಲು ಹೊಡೆದರು. ಅವರೊಂದಿಗೆ ನರೇನ್ ಕಾರ್ಯಪ್ಪ, ಗಗನ್ ತಿಮ್ಮಯ್ಯ ಹಾಗೂ ಸಿ.ಕೆ.ಸೋಮಣ್ಣ ತಲಾ ಒಂದು ಗೋಲು ಬಾರಿಸಿದರು.

ನಾಳಿಯಂಡ ಹಾಗೂ ಚೇಂದಂಡ ತಂಡಗಳು ಟೈ ಬ್ರೇಕರ್‌ನಲ್ಲಿ ರೋಚಕ ಗೆಲುವು ಪಡೆದವು. ನಾಳಿಯಂಡ– ಕೊಂಗೇಟಿರ ತಂಡಗಳು ಯಾವುದೇ ಗೋಲು ಗಳಿಸಲಿಲ್ಲ. ನಂತರ ನಡೆದ ಟೈ ಬ್ರೇಕರ್‌ನಲ್ಲಿ 4-3ರಿಂದ ನಾಳಿಯಂಡ ತಂಡ ಗೆಲುವು ಸಾಧಿಸಿತು.

ಬೊಟ್ಟೋಳಂಡ ವಿರುದ್ಧ ಚೇಂದಂಡ ತಂಡದವರು 4-3 ಅಂತರದಲ್ಲಿ ಗೆಲುವು ಪಡೆದರು. ಅಂಜಪರವಂಡ ತಂಡದವರು 4-2 ರಿಂದ ಮೇಕೇರಿರ ವಿರುದ್ಧ ಟೈ ಬ್ರೇಕರ್‌ನಲ್ಲಿ ಗೆದ್ದು ಬೀಗಿದರು. ಪುದಿಯೊಕ್ಕಡ 2-1ರಿಂದ ಕೋಟೇರ ವಿರುದ್ಧ, ಮೇಚಿಯಂಡ 2-0ಯಿಂದ ಚಂಗುಲಂಡ ವಿರುದ್ಧ ಜಯ ಗಳಿಸಿದವು.

ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಇದೇ ಮೊದಲ ಬಾರಿಗೆ ವಿಡಿಯೊ ರೆಫರಲ್ ಅನ್ನು ಕ್ವಾರ್ಟರ್‌ಫೈನಲ್ ಹಾಗೂ ನಂತರ ಪಂದ್ಯಗಳಲ್ಲಿ ಅಳವಡಿಸಲಾಗುತ್ತಿದೆ. ಜೊತೆಗೆ, ಮುದ್ದಂಡ ಕಪ್ ಹಾಕಿ ಉತ್ಸವದ ಸಾಕ್ಷ್ಯಚಿತ್ರ ಚಿತ್ರೀಕರಣ ಏ. 24ರಿಂದ ಆರಂಭವಾಗಲಿದ್ದು, ಇನ್ನು 6 ತಿಂಗಳಲ್ಲಿ ಒಟಿಟಿ ವೇದಿಕೆಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ.

ಟೂರ್ನಿಗೆ ಚಾಲನೆ: ಮಹಿಳಾ ತಂಡಗಳ ನಡುವೆ '5ಎ ಸೈಡ್' ಹಾಕಿ ಟೂರ್ನಿಗೆ ಒಲಿಂಪಿಯನ್ ಎಂ.ಎಂ.ಸೋಮಯ್ಯ ಚಾಲನೆ ನೀಡಿದರು. ಕಲಾವಿದೆ ಐಮುಡಿಯಂಡ ರಾಣಿ ಮಾಚಯ್ಯ, ರಾಷ್ಟ್ರೀಯ ಬ್ಯಾಸ್ಕೆಟ್‌ಬಾಲ್ ಆಟಗಾರ್ತಿ ಮಂಡೇಪಂಡ ಪುಷ್ಪಾ ಕುಟ್ಟಣ್ಣ ಪಾಲ್ಗೊಂಡಿದ್ದರು.

ಚೆಸ್: ಅಗ್ರಸ್ಥಾನದಲ್ಲಿ ಕೋನೇರು ಹಂಪಿ

ಪುಣೆ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಕೋನೇರು ಹಂಪಿ, ಚೀನಾದ ಝು ಜಿನೆರ್ ಅವರನ್ನು ಸೋಲಿಸಿ, ಫಿಡೆ ಮಹಿಳಾ ಗ್ರ್ಯಾನ್‌ಪ್ರಿ ಚೆಸ್ ಟೂರ್ನಿಯ ಏಳನೇ ಸುತ್ತಿನ ನಂತರ ಮುನ್ನಡೆ ಸಾಧಿಸಿದ್ದಾರೆ. ಅವರು 5.5 ಅಂಕ ಸಂಗ್ರಹಿಸಿ ಏಕಾಂಗಿಯಾಗಿ ಅಗ್ರಸ್ಥಾನದಲ್ಲಿದ್ದಾರೆ.

ದಿವ್ಯಾ ದೇಶಮುಖ್ ಸೋಮವಾರ ಏಳನೇ ಸುತ್ತಿನಲ್ಲಿ ಮಂಗೋಲಿಯಾದ ಮುಂಗುನ್‌ಟೂಲ್ ಬಟ್ಖುಯಾಗ್ (2) ಅವರನ್ನು ಬಗ್ಗುಬಡಿದು ಐದು ಅಂಕಗಳೊಡನೆ ಜಂಟಿಯಾಗಿ ಎರಡನೇ ಸ್ಥಾನಕ್ಕೇರಿದ್ದಾರೆ. ಝು ಜಿನೆರ್ ಸಹ ಐದು ಅಂಕ ಗಳಿಸಿದ್ದಾರೆ.

10 ಆಟಗಾರರ ಕಣದಲ್ಲಿರುವ ಭಾರತದ ಆರ್. ವೈಶಾಲಿ (3) ಮತ್ತು ದ್ರೋಣವಲ್ಲಿ ಹಾರಿಕಾ ತಮ್ಮ ಪಂದ್ಯಗಳನ್ನು ಡ್ರಾ ಮಾಡಿಕೊಂಡರು. ಜಿಎಂ ವೈಶಾಲಿ, ಐಎಂ ಕಶ್ಲಿನ್‌ಸ್ಕಾಯಾ ಅಲಿನಾ (2) ಜೊತೆ, ಹಾರಿಕಾ, ಐಎಂ ಶೂವಲೊನಾ ಪೊಲಿನಾ (4) ಜೊತೆ ಡ್ರಾ ಮಾಡಿಕೊಂಡರು.

ಶೂಟಿಂಗ್ ವಿಶ್ವಕಪ್ ಬ್ರಾರ್‌ಗೆ ಬೆಳ್ಳಿ ಪದಕ

ಲಿಮಾ, ಪೆರು (ಪಿಟಿಐ): ಭಾರತದ ಶೂಟರ್ ಸಿಮ್ರನ್‌ಪ್ರೀತ್ ಕೌರ್ ಬ್ರಾರ್ ಅವರು ಸೋಮವಾರ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಮಹಿಳೆಯರ 25 ಮೀಟರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಪದಕ ಗೆದ್ದರು. ಪ್ಯಾರಿಸ್ ಒಲಿಂಪಿಕ್ಸ್ ಡಬಲ್ ಪದಕ ವಿಜೇತೆ ಮನು ಭಾಕರ್ ನಾಲ್ಕನೇ ಸ್ಥಾನ ಪಡೆದರು.

20 ವರ್ಷ ವಯಸ್ಸಿನ ಬ್ರಾರ್ 10 ರ‍್ಯಾಪಿಡ್ ಫೈರ್ ಸರಣಿಗಳಲ್ಲಿ 33 ಹಿಟ್ಸ್ ಗಳಿಸಿದರು. ಚೀನಾದ ಸನ್ ಯುಜಿ (34 ಹಿಟ್ಸ್) ಸತತ ಎರಡನೇ ವಿಶ್ವಕಪ್ ಚಿನ್ನಕ್ಕೆ ಕೊರಳೊಡ್ಡಿದರು. ಚೀನಾದ ಮತ್ತೊಬ್ಬ ಶೂಟರ್ ಯಾವೊ ಕ್ವಿಯಾನ್ಸುನ್ (29 ಹಿಟ್ಸ್) ಕಂಚು ಗೆದ್ದರು. ಅರ್ಜೆಂಟೀನಾದಲ್ಲಿ ನಡೆದ ವಿಶ್ವಕಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಭಾರತದ ಇಶಾ ಸಿಂಗ್ ಆರನೇ ಸ್ಥಾನ ಪಡೆದರು.

ಮನು ಅರ್ಹತಾ ಸುತ್ತಿನಲ್ಲಿ (585 ಅಂಕ) ಎರಡನೇ ಸ್ಥಾನದೊಡನೆ ಫೈನಲ್ ಸುತ್ತು ಪ್ರವೇಶಿಸಿ, ಪದಕದ ಭರವಸೆ ಮೂಡಿಸಿದ್ದರು. ಸಿಮ್ರನ್‌ಪ್ರೀತ್ (580 ಅಂಕ) ಐದನೇ ಸ್ಥಾನ ಪಡೆದಿದ್ದರು. ಭಾರತ ಇಲ್ಲಿ ಗೆದ್ದ ನಾಲ್ಕನೇ ಬೆಳ್ಳಿ ಇದಾಗಿದೆ. ಜೊತೆಗೆ ಎರಡು ಚಿನ್ನ ಮತ್ತು ಒಂದು ಕಂಚಿನ ಪದಕ ಗೆದ್ದಿದೆ.

ಮೇ 24ರಂದು ಕಂಠೀರವ ಕ್ರೀಡಾಂಗಣದಲ್ಲಿ ಕೂಟ, ವಿಶ್ವಖ್ಯಾತ ತಾರೆಯರು ಭಾಗಿ

'ಕ್ಲಾಸಿಕ್ ಜಾವೆಲಿನ್' ಬೆಂಗಳೂರಿಗೆ ಸ್ಥಳಾಂತರ

ನವದೆಹಲಿ (ಪಿಟಿಐ): ಪಂಚಕುಲಾದಲ್ಲಿ ಮೇ 24ರಂದು ನಿಗದಿಯಾಗಿದ್ದ ಬಹುನಿರೀಕ್ಷಿತ ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಥ್ರೋ ಸ್ಪರ್ಧೆಯನ್ನು ಬೆಂಗಳೂರಿನ ಕಂಠೀರವ ಕ್ರೀಡಾಂಗಣಕ್ಕೆ ಸ್ಥಳಾಂತರಿಸಲಾಗಿದೆ ಎಂದು ಜಾವೆಲಿನ್ ಥ್ರೋ ತಾರೆ, ಸಂಘಟಕ ನೀರಜ್ ಚೋಪ್ರಾ ತಿಳಿಸಿದರು.

ಚೊಚ್ಚಲ ಆವೃತ್ತಿಯ ಸ್ಪರ್ಧೆಯಲ್ಲಿ ಎರಡು ಬಾರಿಯ ವಿಶ್ವ ಚಾಂಪಿಯನ್ ಆ್ಯಂಡರ್ಸನ್ ಪೀಟರ್ಸ್ ಮತ್ತು 2016ರ ರಿಯೊ ಒಲಿಂಪಿಕ್ಸ್ ಚಾಂಪಿಯನ್ ಥಾಮಸ್ ರೋಹ್ಲರ್ ಸೇರಿದಂತೆ ಹಲವು ತಾರೆಯರು ಭಾಗವಹಿಸಲಿದ್ದಾರೆ. ಪಂಚಕುಲಾದ ತಾವೂ ದೇವಿಲಾಲ್ ಕ್ರೀಡಾಂಗಣದಲ್ಲಿ ನೇರಪ್ರಸಾರಕ್ಕೆ ಸಾಕಷ್ಟು ಬೆಳಕಿನ ವ್ಯವಸ್ಥೆ ಇಲ್ಲದ ಕಾರಣ ಸ್ಥಳಾಂತರಿಸಲಾಗಿದೆ. ಈ ಸ್ಪರ್ಧೆಗೆ ವಿಶ್ವ ಅಥ್ಲೆಟಿಕ್ಸ್‌ನಿಂದ 'ಎ' ಕೆಟಗರಿ ಸ್ಥಾನಮಾನ ದೊರೆಕಿದ್ದು, ತನ್ನ ಈವೆಂಟ್ ಕ್ಯಾಲೆಂಡರ್‌ನಲ್ಲಿಯೂ ಸ್ಥಳ ಬದಲಾವಣೆ ದಾಖಲಿಸಿದೆ.

ಪ್ಯಾರಿಸ್ ಒಲಿಂಪಿಕ್ಸ್ ಕಂಚು ವಿಜೇತ ಗ್ರೆನೆಡಾದ ಪೀಟರ್ಸ್, ಜರ್ಮನಿಯ ರೋಹ್ಲರ್, ರಿಯೊ ಒಲಿಂಪಿಕ್ಸ್ ಬೆಳ್ಳಿ ವಿಜೇತ ಕೆನ್ಯಾದ ಜೂಲಿಯಸ್ ಯೆಗೊ ಮತ್ತು ಅಮೆರಿಕದ ಕರ್ಟಿಸ್ ಥಾಂಪ್ಸನ್ ಅವರು ಕೂಟದಲ್ಲಿ ಪಾಲ್ಗೊಳ್ಳುವುದನ್ನು ಖಚಿತಪಡಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಚಾಂಪಿಯನ್, ಪಾಕಿಸ್ತಾನದ ಅರ್ಷದ್ ನದೀಂ ಅವರನ್ನೂ ಆಹ್ವಾನಿಸಲಾಗಿದೆ. ತರಬೇತುದಾರರ ಜೊತೆ ಚರ್ಚಿಸಿದ ನಂತರ ಸಂಪರ್ಕಿಸುವುದಾಗಿ ಅವರು ಹೇಳಿದ್ದಾರೆ. ಈತನಕ ದೃಢಪಡಿಸಿಲ್ಲ' ಎಂದು ಸೋಮವಾರ ವರ್ಚುವಲ್ ಮಾಧ್ಯಮ ಸಂವಾದದಲ್ಲಿ 27 ವರ್ಷ ವಯಸ್ಸಿನ ಚೋಪ್ರಾ ಮಾಹಿತಿ ನೀಡಿದರು.

'ಪಂಚಕುಲಾದಲ್ಲಿ ಸ್ಪರ್ಧೆಯನ್ನು ಆಯೋಜಿಸಲು ಬಯಸಿದ್ದೆ. ಆದರೆ, ಅಲ್ಲಿನ ಕ್ರೀಡಾಂಗಣದಲ್ಲಿ ಫ್ಲಡ್‌ಲೈಟ್ ಕೊರತೆಯಿದೆ. ವಿಶ್ವ ಅಥ್ಲೆಟಿಕ್ಸ್‌ನ ನೇರಪ್ರಸಾರಕ್ಕೆ ಬೇಕಾಗಿರುವ 600 ಲಕ್ಸ್ (ಬೆಳಕಿನ ತೀವ್ರತೆಯ ಅಳತೆ) ಸೌಕರ್ಯ ಆ ಕ್ರೀಡಾಂಗಣದಲ್ಲಿ ಇಲ್ಲ. ಅದನ್ನು ಅಳವಡಿಸಲು ಬಹಳಷ್ಟು ಸಮಯಾವಕಾಶ ಬೇಕಾಗುತ್ತದೆ' ಎಂದು ಹೇಳಿದರು.

'ಕಂಠೀರವ ಕ್ರೀಡಾಂಗಣದಲ್ಲಿ ಈ ಸ್ಪರ್ಧೆ ಆಯೋಜಿಸುವ ಸಂಬಂಧ ಕರ್ನಾಟಕದ ಮುಖ್ಯಮಂತ್ರಿಯೊಂದಿಗೆ ಮಾತುಕತೆ ನಡೆಸಿದ್ದೇನೆ. ಜೆಎಸ್‌ಡಬ್ಲ್ಯು ತಂಡವು ಕೂಟವನ್ನು ಯಶಸ್ವಿಯಾಗಿ ಆಯೋಜಿಸಲು ಸಜ್ಜಾಗಿದೆ. ಅಂತರ ರಾಷ್ಟ್ರೀಯ ಸ್ಪರ್ಧಿಗಳಿಗೆ ಅತ್ಯುತ್ತಮ ಆತಿಥ್ಯ ನೀಡುವುದು ಮತ್ತು ಕ್ರೀಡಾಭಿಮಾನಿಗಳಿಗೆ ಅತ್ಯುತ್ತಮ ಅನುಭವ ನೀಡುವುದು ನಮ್ಮ ಆದ್ಯತೆ' ಎಂದರು.

'ನಾನು ಸೇರಿದಂತೆ ಭಾರತದ ಮೂರು ಅಥವಾ ನಾಲ್ಕು ಸ್ಪರ್ಧಿಗಳು ಕಣಕ್ಕೆ ಇಳಿಯಲಿದ್ದೇವೆ. ಇದು ಟೋಕಿಯೊದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಅರ್ಹತೆ ಪಡೆಯಲು ಉತ್ತಮ ವೇದಿಕೆಯಾಗಿದೆ. ವಾರ್ಷಿಕವಾಗಿ ನಡೆಯುವ ಈ ಕೂಟದಲ್ಲಿ ಸದ್ಯಕ್ಕೆ ಪುರುಷರ ಜಾವೆಲಿನ್ ಸ್ಪರ್ಧೆ ಅಳವಡಿಸಲಾಗಿದೆ. ಭವಿಷ್ಯದಲ್ಲಿ ಇತರ ಸ್ಪರ್ಧೆಗಳನ್ನು ಸಹ ಸೇರಿಸಲಾಗುತ್ತದೆ' ಎಂದು ತಿಳಿಸಿದರು.

ಈ ಕೂಟವನ್ನು ಭಾರತ ಅಥ್ಲೆಟಿಕ್ಸ್ ಫೆಡರೇಷನ್ (ಎಎಫ್‌ಐ) ಮತ್ತು ವಿಶ್ವ ಅಥ್ಲೆಟಿಕ್ಸ್ ಸಹಯೋಗದೊಂದಿಗೆ ಚೋಪ್ರಾ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಜಂಟಿಯಾಗಿ ಆಯೋಜಿಸುತ್ತಿದೆ. ಕ್ರೀಡಾಭಿಮಾನಿಗಳು ಟಿಕೆಟ್ ಕೊಂಡು ಈ ಸ್ಪರ್ಧೆಯನ್ನು ವೀಕ್ಷಿಸಬಹುದಾಗಿದೆ.

ಚೋಪ್ರಾ ಅವರು ಏಪ್ರಿಲ್ 16ರಂದು ದಕ್ಷಿಣ ಆಫ್ರಿಕಾದ ಪೊಚೆಫ್‌ಸ್ಟ್ರೂಮ್‌ನಲ್ಲಿ ನಡೆದ ಪೋಚ್ ಆಹ್ವಾನ ಟ್ರ್ಯಾಕ್ ಕೂಟದಲ್ಲಿ 84.52 ಮೀಟರ್ ಸಾಧನೆಯೊಡನೆ ಈ ಬಾರಿಯ ಋತು ಆರಂಭಿಸಿದ್ದಾರೆ. ಮೇ 16ರಂದು ದೋಹಾ ಡೈಮಂಡ್ ಲೀಗ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ.



ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ

ಹಾಕಿ ಸರಣಿ: ಭಾರತ ಮಹಿಳಾ ತಂಡ ಆಸ್ಟ್ರೇಲಿಯಾಕ್ಕೆ

ಪ್ರಜಾವಾಣಿ ವಾರ್ತೆ



ಸಲೀಮಾ

ಬೆಂಗಳೂರು: ಐದು ಪಂದ್ಯಗಳ ಹಾಕಿ ಸರಣಿಯನ್ನು ಆಡಲು ಸಲೀಮಾ ಟೇಟೆ ನೇತೃತ್ವದ ಭಾರತ ಮಹಿಳಾ ತಂಡ ಭಾನುವಾರ ರಾತ್ರಿ ಆಸ್ಟ್ರೇಲಿಯಾಕ್ಕೆ ತೆರಳಿತು. ಏಪ್ರಿಲ್ 26ರಂದು ಆರಂಭವಾಗುವ ಈ ಸರಣಿ, ಎಫ್‌ಐಎಚ್ ಪ್ರೊ ಲೀಗ್‌ಗೆ ಸಿದ್ಧತೆ ನಡೆಸಲು ಅವಕಾಶ ಕಲ್ಪಿಸಿದೆ.

ಭಾರತ ತಂಡ ಏ. 26 ಮತ್ತು 27ರಂದು ಆಸ್ಟ್ರೇಲಿಯಾ ಎ ತಂಡದ ವಿರುದ್ಧ ಆಡಲಿದೆ. ಬಳಿಕ ಮೇ 1, 3 ಮತ್ತು 4ರಂದು ಆಸ್ಟ್ರೇಲಿಯಾ ಸೀನಿಯರ್ ತಂಡದ ಎದುರು ಕಣಕ್ಕಿಳಿಯಲಿದೆ. ಪಂದ್ಯಗಳು ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆಯಲಿವೆ.

ಆಸ್ಟ್ರೇಲಿಯಾ ಮಹಿಳಾ ತಂಡ ವಿಶ್ವ ಕ್ರಮಾಂಕದಲ್ಲಿ ಐದನೇ ಸ್ಥಾನ ಪಡೆದಿದೆ. ಭಾರತ ತಂಡ ಒಂಬತ್ತನೇ ಸ್ಥಾನದಲ್ಲಿದೆ.

ಸಲೀಮಾ ನಾಯಕತ್ವದ 26 ಮಂದಿಯ ತಂಡಕ್ಕೆ ನವನೀತ್ ಕೌರ್ ಉಪ ನಾಯಕಿ ಆಗಿದ್ದಾರೆ. ತಂಡವು ಈ ಸರಣಿ ನಂತರ ಎಫ್‌ಐಎಚ್ ಪ್ರೊ ಲೀಗ್‌ನ ಯುರೋಪಿಯನ್ ಲೆಗ್‌ಗೆ ಸಜ್ಜಾಗಬೇಕಿದೆ. ಈ ಲೀಗ್ ಜೂನ್ 7ರಂದು ನೆದರ್ಲೆಂಡ್ಸ್‌ನಲ್ಲಿ ಆರಂಭವಾಗಲಿದೆ.



ಪ್ರಸಿದ್ಧ ಕೃಷ್ಣ, ರಶೀದ್ ಖಾನ್‌ಗೆ ತಲಾ ಎರಡು ವಿಕೆಟ್ • ಅಗ್ರಸ್ಥಾನ ಭದ್ರಪಡಿಸಿಕೊಂಡ ಟೈಟನ್ಸ್ • ಕೋಲ್ಕತ್ತಕ್ಕೆ ನಿರಾಸೆ

ಗಿಲ್, ಸುದರ್ಶನ್ ಆಟಕ್ಕೆ ಒಲಿದ ಜಯ



ಕೋಲ್ಕತ್ತ (ಪಿಟಿಐ): ನಾಯಕ ಶುಭಮನ್ ಗಿಲ್ (90;55ಎ) ಮತ್ತು ಸಾಯಿ ಸುದರ್ಶನ್ (52;36ಎ) ಅವರ ಅರ್ಧಶತಕಗಳ ಬಳಿಕ ಬೌಲರ್‌ಗಳ ಸಾಂಘಿಕ ದಾಳಿಯ ನೆರವಿನಿಂದ ಗುಜರಾತ್ ಟೈಟನ್ಸ್ ತಂಡವು ಸೋಮವಾರ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ 39 ರನ್‌ಗಳಿಂದ ಜಯ ಗಳಿಸಿತು. ಅಂಕ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಮತ್ತಷ್ಟು ಭದ್ರಪಡಿಸಿಕೊಂಡಿತು.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಗೆಲುವಿಗೆ 199 ರನ್ ಬೆನ್ನಟ್ಟಿದ ಹಾಲಿ ಚಾಂಪಿಯನ್ ಕೋಲ್ಕತ್ತ ತಂಡವು ಯಾವುದೇ ಹಂತದಲ್ಲೂ ಪ್ರತಿರೋಧ ತೋರದೆ 8ಕ್ಕೆ 159 ರನ್ ಗಳಿಸಿ ಸವಾಲನ್ನು ಮುಗಿಸಿತು. ನಾಯಕ ಅಜಿಂಕ್ಯ ರಹಾನೆ (50;36ಎ, 4x5, 6x1) ಹೊರತುಪಡಿಸಿ ಉಳಿದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಹೊತ್ತು ನಿಲ್ಲಲಿಲ್ಲ.



ಕ್ವಿಂಟನ್ ಡಿ ಕಾಕ್ ಬದಲು ಆರಂಭಿಕ ಆಟಗಾರನಾಗಿ ಅವಕಾಶ ಪಡೆದ ರೆಹಮಾನುಲ್ಲಾ ಗುರ್ಬಾಜ್ (1) ನಿರಾಸೆ ಮೂಡಿಸಿದರು. ಅವರಿಗೆ ಮೊದಲ ಓವರ್‌ನಲ್ಲೇ ವೇಗಿ ಮೊಹಮ್ಮದ್ ಸಿರಾಜ್ ಪೆವಿಲಿಯನ್ ದಾರಿ ತೋರಿಸಿದರು. ಸುನೀಲ್ ನಾರಾಯಣ್ (17), ವೆಂಕಟೇಶ್ ಅಯ್ಯರ್ (14), ರಿಂಕು ಸಿಂಗ್ (17) ಮತ್ತೆ ವಿಫಲರಾದರು. ತವರಿನಲ್ಲಿ ಆಡಿದ ನಾಲ್ಕು ಪಂದ್ಯಗಳಲ್ಲಿ ಕೋಲ್ಕತ್ತ ತಂಡಕ್ಕೆ ಇದು ಮೂರನೇ ಸೋಲು.

'ಪರ್ಪಲ್ ಕ್ಯಾಪ್' ಧರಿಸಿರುವ ಟೈಟನ್ಸ್‌ನ ವೇಗಿ, ಕನ್ನಡಿಗ ಪ್ರಸಿದ್ಧ ಕೃಷ್ಣ ಮತ್ತೆ ಎರಡು ವಿಕೆಟ್ ಗಳಿಸಿ ಮಿಂಚಿದರು. ಲಯಕ್ಕೆ ಪರದಾಡುತ್ತಿದ್ದ ಸ್ಪಿನ್ನರ್ ರಶೀದ್ ಖಾನ್ ಎರಡು ವಿಕೆಟ್ ಕಬಳಿಸಿದರು.

ಗಿಲ್ ಅಬ್ಬರ: ಇದಕ್ಕೂ ಮೊದಲು ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗುಜರಾತ್ ತಂಡವು ಗಿಲ್, ಸುದರ್ಶನ್ ಮತ್ತು ಜೋಸ್ ಬಟ್ಲರ್ ಅವರ ಬಿರುಸಿನ ಆಟದಿಂದ 3 ವಿಕೆಟ್‌ಗೆ 196 ರನ್‌ಗಳ ಉತ್ತಮ ಮೊತ್ತ ಕಲೆಹಾಕಿತು.

ಗಿಲ್ ಈ ಋತುವಿನ ಮೊದಲ ಶತಕದತ್ತ ಕಾಲಿಡುವಂತೆ ಕಂಡರು. ಆದರೆ ವೈಭವ್ ಆರೋರಾ ಫುಲ್‌ಟಾಸ್ ಎಸೆತವನ್ನು ಫ್ಲಿಕ್ ಮಾಡುವ ಯತ್ನದಲ್ಲಿ ಡೀಪ್ ಸ್ಕ್ವೇರ್ ಲೆಗ್‌ನಲ್ಲಿದ್ದ ರಿಂಕು ಸಿಂಗ್ ಅವರಿಗೆ ಕ್ಯಾಚಿತ್ತರು. ಗಿಲ್ ಆಟದಲ್ಲಿ 10 ಬೌಂಡರಿ, ಮೂರು ಸಿಕ್ಸರ್‌ಗಳಿದ್ದವು. ಸುದರ್ಶನ್ ಆರು ಬೌಂಡರಿ ಮತ್ತು ಒಂದು ಸಿಕ್ಸರ್ ಬಾರಿಸಿದರು. ಅವರು ಈ ಆವೃತ್ತಿಯಲ್ಲಿ ಐದನೇ ಅರ್ಧಶತಕ ದಾಖಲಿಸಿದರು.

ಗಿಲ್ ಮತ್ತು ಸುದರ್ಶನ್ ಮೊದಲ ವಿಕೆಟ್‌ಗೆ 114 (75ಎ) ರನ್‌ಗಳ ಜೊತೆಯಾಟವಾಡಿದರು. ತಂಡವು ಉತ್ತಮ ಬುನಾದಿ ಪಡೆದರೂ ಕೊನೆಯ ಹಂತದಲ್ಲಿ ನಿರೀಕ್ಷಿತ ವೇಗದಲ್ಲಿ ರನ್ ಗಳಿಸಲಾಗಲಿಲ್ಲ. ವಿಕೆಟ್‌ಗಳು ಕೈಲಿದ್ದರೂ ಅಂತಿಮ ಐದು ಓವರುಗಳಲ್ಲಿ 59 ರನ್‌ಗಳು ಮಾತ್ರ ಬಂದವು. ಈ ಹಿಂದಿನ ಪಂದ್ಯದಲ್ಲಿ ಅಜೇಯ 97 ರನ್ ಗಳಿಸಿದ್ದ ಬಟ್ಲರ್ ಬಿರುಸಿನ ಆಟವಾಡಿ 23 ಎಸೆತಗಳಲ್ಲಿ 8 ಬೌಂಡರಿಗಳಿದ್ದ 41 ರನ್ ಗಳಿಸಿ ಮತ್ತೆ ಅಜೇಯರಾಗುಳಿದರು.

ಸ್ಕೋರುಗಳು: ಗುಜರಾತ್ ಟೈಟನ್ಸ್: 20 ಓವರುಗಳಲ್ಲಿ 3ಕ್ಕೆ198 (ಸಾಯಿ ಸುದರ್ಶನ್ 52, ಶುಭಮನ್ ಗಿಲ್ 90, ಜಾಸ್ ಬಟ್ಲರ್ ಔಟಾಗದೇ 41; ವೈಭವ್ ಆರೋರಾ 44ಕ್ಕೆ1, ಹರ್ಷಿತ್ ರಾಣಾ 45ಕ್ಕೆ1, ರಸೆಲ್ 13ಕ್ಕೆ1) **ಕೋಲ್ಕತ್ತ ನೈಟ್ ರೈಡರ್ಸ್:** 20 ಓವರ್‌ಗಳಲ್ಲಿ 8ಕ್ಕೆ 159 (ಅಜಿಂಕ್ಯಾ ರಹಾನೆ 50, ಆ್ಯಂಡ್ರೆ ರಸೆಲ್ 21, ಅಂಗ್‌ಕ್ರಿಷ್ ರಘುವಂಶಿ 26; ಪ್ರಸಿದ್ಧ ಕೃಷ್ಣ 25ಕ್ಕೆ 2, ರಶೀದ್ ಖಾನ್ 25ಕ್ಕೆ 2, ಮೊಹಮ್ಮದ್ ಸಿರಾಜ್ 32ಕ್ಕೆ 1, ಇಶಾಂತ್ ಶರ್ಮಾ 18ಕ್ಕೆ 1, ಸಾಯಿ ಕಿಶೋರ್ 19ಕ್ಕೆ 1). **ಫಲಿತಾಂಶ:** ಗುಜರಾತ್ ಟೈಟನ್ಸ್‌ಗೆ 39 ರನ್‌ಗಳ ಜಯ.

ಪಂದ್ಯದ ಆಟಗಾರ: ಶುಭಮನ್ ಗಿಲ್



ರಾಜಸ್ಥಾನ್ ರಾಯಲ್ಸ್ ಪರವಾಗಿ ಆಡಿದ ಐಪಿಎಲ್‌ನ ಅತ್ಯಂತ ಕಿರಿಯ ಆಟಗಾರ, ವೈಭವ್ ಸೂರ್ಯವಂಶಿ ಅತ್ಯುತ್ತಮ ಸಾಧನೆ ತೋರಿದ್ದಾರೆ!

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಗುಜರಾತ್ ಟೈಟನ್ಸ್	8	6	2	12	1.104
ಡೆಲ್ಲಿ ಕ್ಯಾಪಿಟಲ್ಸ್	7	5	2	10	0.589
ರಾಯಲ್ ಚಾಲೆಂಜರ್ಸ್ ಬೆಂಗಳೂರು	8	5	3	10	0.472
ಪಂಜಾಬ್ ಕಿಂಗ್ಸ್	8	5	3	10	0.177
ಲಖನೌ ಸೂಪರ್ ಜೈಂಟ್ಸ್	8	5	3	10	0.088
ಮುಂಬೈ ಇಂಡಿಯನ್ಸ್	8	4	4	8	0.483
ಕೋಲ್ಕತ್ತ ನೈಟ್ ರೈಡರ್ಸ್	8	3	5	6	0.212
ರಾಜಸ್ಥಾನ ರಾಯಲ್ಸ್	8	2	6	4	-0.633
ಸನ್‌ರೈಸರ್ಸ್ ಹೈದರಾಬಾದ್	7	2	5	4	-1.217
ಚೆನ್ನೈ ಸೂಪರ್ ಕಿಂಗ್ಸ್	8	2	6	4	-1.392

ಆರೇಂಜ್ ಕ್ಯಾಪ್
ಸಾಯಿ ಸುದರ್ಶನ್ (ಜಿಟಿ) 417 ರನ್

ಪರ್ಪಲ್ ಕ್ಯಾಪ್
ಪ್ರಸಿದ್ಧ ಕೃಷ್ಣ (ಜಿಟಿ) 16 ವಿಕೆಟ್

ಎ+ ಕೆಟಗರಿಯಲ್ಲಿ ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ
ಶ್ರೇಯಸ್, ಇಶಾನ್‌ಗೆ ಮತ್ತೆ ಕೇಂದ್ರೀಯ ಗುತ್ತಿಗೆ

ನವದೆಹಲಿ (ಪಿಟಿಐ): ಭಾರತ ಟೆಸ್ಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೇಂದ್ರೀಯ ಗುತ್ತಿಗೆ ಪಟ್ಟಿಯ ಅತ್ಯುನ್ನತ ಎ+ ಕೆಟಗರಿಯಲ್ಲಿ ಉಳಿದುಕೊಂಡಿದ್ದಾರೆ. ಮಂಡಳಿ ಸೋಮವಾರ ಪ್ರಕಟಿಸಿದ ಪಟ್ಟಿಯಲ್ಲಿ ಒಟ್ಟು 34 ಮಂದಿ ಸ್ಥಾನ ಪಡೆದಿದ್ದಾರೆ.


ಶ್ರೇಯಸ್


ವರುಣ್


ಇಶಾನ್ ಕಿಶನ್

ಕಳೆದ ಬಾರಿ ಐಪಿಎಲ್‌ಗೆ ಆದ್ಯತೆ ನೀಡಿ ರಣಜಿ ಟ್ರೋಫಿ ಪಂದ್ಯ ತಪ್ಪಿಸಿಕೊಂಡು ಬಿಸಿಸಿಐ ಕೆಂಗಣ್ಣಿಗೆ ಗುರಿಯಾಗಿ ಪಟ್ಟಿಯಿಂದ ಹೊರಬಿದ್ದಿದ್ದ ಶ್ರೇಯಸ್ ಅಯ್ಯರ್ ಮತ್ತು ಇಶಾನ್ ಕಿಶನ್ ಅವರು ಪಟ್ಟಿಯಲ್ಲಿ ಮರಳಿ ಸ್ಥಾನ ಪಡೆದಿದ್ದಾರೆ. ರಿಷಭ್ ಪಂತ್ 'ಎ' ಕೆಟಗರಿಯಲ್ಲಿ, ಅಯ್ಯರ್ ಬಿ ಕೆಟಗರಿ ಮತ್ತು ಇಶಾನ್ ಸಿ ಕೆಟಗರಿ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

ವಾರ್ಷಿಕ ₹7 ಕೋಟಿ ಸಂಭಾವನೆಯಿರುವ ಎ+ ದರ್ಜೆಯಲ್ಲಿ ಅಗ್ರಗಣ್ಯ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ, ಅನುಭವಿ ಆಲ್‌ರೌಂಡರ್ ರವೀಂದ್ರ ಜಡೇಜ ಇದ್ದಾರೆ. ಎ ದರ್ಜೆಯಡಿ ಬರುವ ಆಟಗಾರರು ವಾರ್ಷಿಕ ₹5 ಕೋಟಿ, ಬಿ ದರ್ಜೆಯಡಿ ಸ್ಥಾನ ಪಡೆದಿರುವ ಆಟಗಾರರು ₹3 ಕೋಟಿ ಮತ್ತು ಸಿ ದರ್ಜೆಯಡಿ ಸ್ಥಾನ ಪಡೆದಿರುವ ಆಟಗಾರರು ₹1 ಕೋಟಿ ಪಡೆಯಲಿದ್ದಾರೆ. 'ಸಿ' ಕೆಟಗರಿ ಪಟ್ಟಿಯಲ್ಲಿ 19 ಆಟಗಾರರಿದ್ದಾರೆ. ಇವರಲ್ಲಿ ಐವರು ಇದೇ ಮೊದಲ ಬಾರಿ ಸ್ಥಾನ ಪಡೆದಿದ್ದಾರೆ. ಅಭಿಷೇಕ್ ಶರ್ಮಾ, ಹರ್ಷಿತ್ ರಾಣಾ, ವರುಣ್ ಚಕ್ರವರ್ತಿ, ನಿತೀಶ್ ಕುಮಾರ್ ರೆಡ್ಡಿ ಮತ್ತು ಆಕಾಶ್ ದೀಪ್ ಈ ಐವರು.

ಈ ಪಟ್ಟಿಯಿಂದ ಹೊರಬಿದ್ದಿರುವ ಪ್ರಮುಖ ಆಟಗಾರ ಎಂದರೆ ಶಾರ್ದೂಲ್ ಠಾಕೂರ್. ಅವರು 2023ರ ಏಕದಿನ ವಿಶ್ವಕಪ್‌ನಲ್ಲಿ (ಪುಣೆಯಲ್ಲಿ ಬಾಂಗ್ಲಾದೇಶ ವಿರುದ್ಧ ಪಂದ್ಯ) ಕೊನೆಯ ಬಾರಿ ಭಾರತ ತಂಡಕ್ಕೆ ಆಡಿದ್ದರು.

ಬಿಸಿಸಿಐ ಕೇಂದ್ರೀಯ ಗುತ್ತಿಗೆ ಪಟ್ಟಿ: ಎ+ ಕೆಟಗರಿ: ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಜಸ್‌ಪ್ರೀತ್ ಬೂಮ್ರಾ ಮತ್ತು ರವೀಂದ್ರ ಜಡೇಜ. **ಎ ಕೆಟಗರಿ:** ಮೊಹಮ್ಮದ್ ಸಿರಾಜ್, ಕೆ.ಎಲ್.ರಾಹುಲ್, ಶುಭಮನ್ ಗಿಲ್, ಹಾರ್ದಿಕ್ ಪಾಂಡ್ಯ, ಮೊಹಮ್ಮದ್ ಶಮಿ ಮತ್ತು ರಿಷಭ್ ಪಂತ್. **ಬಿ ಕೆಟಗರಿ:** ಸೂರ್ಯಕುಮಾರ್ ಯಾದವ್, ಕುಲದೀಪ್ ಯಾದವ್, ಅಕ್ಷರ್ ಪಟೇಲ್, ಯಶಸ್ವಿ ಜೈಸ್ವಾಲ್, ಮತ್ತು ಶ್ರೇಯಸ್ ಅಯ್ಯರ್. **ಸಿ ಕೆಟಗರಿ:** ರಿಂಕು ಸಿಂಗ್, ತಿಲಕ್ ವರ್ಮಾ, ಋತುರಾಜ್ ಗಾಯಕವಾಡ್, ಶಿವಂ ದುಬೆ, ರವಿ ಬಿಷ್ಣೋಯಿ, ವಾಷಿಂಗ್ಟನ್ ಸುಂದರ್, ಮುಕೇಶ್ ಕುಮಾರ್, ಸಂಜು ಸ್ಯಾಮ್ಸನ್, ಅರ್ಷದೀಪ್ ಸಿಂಗ್, ಪ್ರಸಿದ್ಧ ಕೃಷ್ಣ, ರಜತ್ ಪಾಟೀದಾರ್, ಧ್ರುವ್ ಜುರೇಲ್, ಸರ್ಫರಾಜ್ ಖಾನ್, ನಿತೀಶ್ ಕುಮಾರ್ ರೆಡ್ಡಿ, ಇಶಾನ್ ಕಿಶನ್, ಅಭಿಷೇಕ್ ಶರ್ಮಾ, ಆಕಾಶ್ ದೀಪ್, ವರುಣ್ ಚಕ್ರವರ್ತಿ ಮತ್ತು ಹರ್ಷಿತ್ ರಾಣಾ.

ಲಖನೌ ತಂಡಕ್ಕೆ ಡೆಲ್ಲಿ ಸವಾಲು ಇಂದು

ಲಖನೌ (ಪಿಟಿಐ): 'ನವಾಬರ ನಗರ' ಲಖನೌಗೆ ಬಂದಿಳಿದಿರುವ ಡೆಲ್ಲಿ ಕ್ಯಾಪಿಟಲ್ಸ್ ತಂಡವು ತನ್ನ ಆರಂಭ ಆಟಗಾರರಿಂದ ಸುಧಾರಿತ ಪ್ರದರ್ಶನದ ನಿರೀಕ್ಷೆಯಲ್ಲಿದೆ. ಅಕ್ಷರ್ ಪಟೇಲ್ ನಾಯಕತ್ವದ ಈ ತಂಡವು, ಆತ್ಮವಿಶ್ವಾಸದಿಂದ ಇರುವ ಲಖನೌ ಸೂಪರ್ ಜೈಂಟ್ಸ್ ತಂಡವನ್ನು ಮಂಗಳವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಎದುರಿಸಲಿದೆ.


ಅಕ್ಷರ್ ಪಟೇಲ್


ರಿಷಭ್ ಪಂತ್

ಡೆಲ್ಲಿ ತಂಡ ಈ ಋತುವಿನಲ್ಲಿ ಉತ್ತಮ ಆರಂಭದ ಸಮಸ್ಯೆ ಎದುರಿಸಿದೆ. ಫಾಫ್ ಡುಪ್ಲೆಸಿ, ಜೇಕ್ ಫ್ರೇಸರ್ ಮೆಕ್‌ಗುರ್ಕ್, ಅಭಿಷೇಕ್ ಪೊರೆಲ್ ಜೊತೆಗೆ ಇತ್ತೀಚೆಗೆ ಕರುಣ್ ನಾಯರ್ ಕೂಡ ಆರಂಭ ಆಟಗಾರರಾಗಿ ಇಳಿದಿದ್ದಾರೆ. ಕಳೆದ ಐದು ಪಂದ್ಯಗಳಲ್ಲಿ ಮೂರು ಬಾರಿ ಸಂಯೋಜನೆ ಬದಲಾಗಿದೆ. ಆದರೆ ಫಲಿತಾಂಶದಲ್ಲಿ ಹೆಚ್ಚೇನೂ ವ್ಯತ್ಯಾಸವಾಗಿಲ್ಲ. ಮೊದಲ ವಿಕೆಟ್ ಜೊತೆಯಾಟದಲ್ಲಿ ಕ್ರಮವಾಗಿ ದಾಖಲಾದ ರನ್‌ಗಳು 23, 34, 9 ಮತ್ತು 0.

ದಕ್ಷಿಣ ಆಫ್ರಿಕಾದ ದಿಗ್ಗಜ ಡುಪ್ಲೆಸಿ ಅವರ ಫಿಟ್ನೆಸ್ ಮೇಲೆ ಕಣ್ಣಿಡಲಾಗಿದೆ. ಉಳಿದಂತೆ ತಂಡ ಅಂಥ ಸಮಸ್ಯೆ ಎದುರಿಸಿಲ್ಲ. ಮಧ್ಯಮ ಕ್ರಮಾಂಕದಲ್ಲಿ ಕೆ.ಎಲ್. ರಾಹುಲ್ ಅವರು ಆಧಾರವಾಗಿದ್ದಾರೆ.

ಆದರೆ ದಿಗ್ವೇಶ್ ರಾಠಿ, ರವಿ ಬಿಷ್ಣೋಯಿ, ಆವೇಶ್ ಖಾನ್ ಮತ್ತು ಶಾರ್ದೂಲ್ ಠಾಕೂರ್ ಅವರನ್ನೊಳಗೊಂಡ ಲಖನೌ ದಾಳಿ ಉತ್ತಮವಾಗಿಯೇ ಇದೆ. ಶಾರ್ದೂಲ್ ಕೆಲವು ಪಂದ್ಯಗಳಲ್ಲಿ ಧಾರಾಳಿ ಎನಿಸಿದ್ದಾರೆ. ರಾಜಸ್ಥಾನ ರಾಯಲ್ಸ್ ವಿರುದ್ಧ ಈ ಹಿಂದಿನ ಪಂದ್ಯದಲ್ಲಿ ಆವೇಶ್ ಖಾನ್ ಮಾಡಿದ 18 ಮತ್ತು 20ನೇ ಓವರ್ ಲಖನೌ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಆ ರೋಚಕ ಗೆಲುವು ರಿಷಭ್ ಪಂತ್ ಬಳಗದ ಮನೋಬಲ ಹೆಚ್ಚಿದೆ.

ಲಖನೌ ತಂಡದ ಮೊದಲ ಮೂವರು ಆಟಗಾರರು– ಮಿಚೆಲ್ ಮಾರ್ಷ್, ನಿಕೋಲಸ್ ಪೂರನ್ ಮತ್ತು ಏಡನ್ ಮರ್ಕರಂ ಉತ್ತಮ ಲಯದಲ್ಲಿದ್ದಾರೆ. ಪವರ್ ಪ್ಲೇ ಅವಧಿಯಲ್ಲಿ ಸಾಕಷ್ಟು ರನ್ ಹರಿಸುತ್ತಿದ್ದಾರೆ.

ಪಂತ್ ಪರದಾಟ: ಲಖನೌ ತಂಡ ಎದುರಿಸುತ್ತಿರುವ ಸಮಸ್ಯೆ ಎಂದರೆ ನಾಯಕ ಪಂತ್ ಸತತವಾಗಿ ವಿಫಲರಾಗುತ್ತಿರುವುದು. ಎಂಟು ಪಂದ್ಯಗಳಲ್ಲಿ ಅವರು ಗಳಿಸಿರುವುದು ಬರೇ 106. ಇದರಲ್ಲಿ ಒಂದೇ ಇನಿಂಗ್ಸ್‌ನಲ್ಲಿ ಗಳಿಸಿದ 63 ರನ್ ಸೇರಿದೆ. ಅವರು ಡೆಲ್ಲಿ ವಿರುದ್ಧದ ಪಂದ್ಯದಲ್ಲಿ ಮಿಚೆಲ್ ಸ್ಟಾರ್ಕ್, ಕುಲದೀಪ್ ಯಾದವ್, ವಿಪ್ರಜ್ ನಿಗಂ ಮತ್ತು ಮುಕೇಶ್ ಕುಮಾರ್ ಅವರಿರುವ ಗುಣಮಟ್ಟದ ದಾಳಿ ಎದುರಿಸಬೇಕಾಗುತ್ತದೆ.

ಡೆಲ್ಲಿ ನಾಯಕ ಅಕ್ಷರ್ ಪಟೇಲ್ ಬ್ಯಾಟಿಂಗ್‌ನಲ್ಲಿ 159ರ ಸ್ಟ್ರೈಕ್‌ರೇಟ್‌ನಲ್ಲಿ 140 ರನ್ ಗಳಿಸಿದ್ದಾರೆ. ಆದರೆ ಬೌಲಿಂಗ್‌ನಲ್ಲಿ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಏಳು ಪಂದ್ಯಗಳಲ್ಲಿ ಬರೇ ಒಂದು ವಿಕೆಟ್ ಪಡೆದಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30.
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಮತ್ತು ಜಿಯೊ ಸ್ಟಾರ್ ಆ್ಯಪ್

ಆರ್‌ಸಿಬಿ ವಿರುದ್ಧ ಪಂದ್ಯಕ್ಕೆ ಸಂಜು ಅಲಭ್ಯ



ಜೈಪುರ (ಪಿಟಿಐ): ಆರ್‌ಸಿಬಿ ವಿರುದ್ಧ ಗುರುವಾರ ಬೆಂಗಳೂರಿನಲ್ಲಿ ನಡೆಯುವ ಐಪಿಎಲ್ ಪಂದ್ಯಕ್ಕೆ ನಾಯಕ ಸಂಜು ಸಾಮ್ಸನ್ ಲಭ್ಯರಿರುವುದಿಲ್ಲ ಎಂದು ರಾಜಸ್ಥಾನ ರಾಯಲ್ಸ್ ಸೋಮವಾರ ಖಚಿತಪಡಿಸಿದೆ.

ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಪಂದ್ಯದ ವೇಳೆ ಅವರು ಪಕ್ಕೆಲುಬಿನ ನೋವಿಗೆ ಒಳಗಾಗಿದ್ದು ಇನ್ನೂ ಚೇತರಿಸಿಲ್ಲ. ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಈ ಹಿಂದಿನ ಪಂದ್ಯದಲ್ಲೂ ಅವರು ಆಡಿರಲಿಲ್ಲ. ರಾಯಲ್ಸ್ ತಂಡದ ವೈದ್ಯಕೀಯ ಸಿಬ್ಬಂದಿ ಅವರ ಪುನರಾಗಮನ ದಿನಾಂಕ ನಿಗದಿಪಡಿಸಿಲ್ಲ.

'ಚಿಕಿತ್ಸಾ ಪ್ರಕ್ರಿಯೆಯ ಭಾಗವಾಗಿ ಸಂಜು ಸ್ಯಾಮ್ಸನ್ ಅವರು ತಂಡದ ನೆಲೆಯಾದ ಜೈಪುರದಲ್ಲೇ ಆಯ್ದ ವೈದ್ಯಕೀಯ ಸಿಬ್ಬಂದಿಯ ಆರೈಕೆಯಲ್ಲಿ ಇರಲಿದ್ದಾರೆ. ಅವರು ಬೆಂಗಳೂರಿಗೆ ಪಯಣಿಸುವುದಿಲ್ಲ' ಎಂದು ರಾಯಲ್ಸ್ ಬಿಡುಗಡೆ ಮಾಡಿದ ಹೇಳಿಕೆ ತಿಳಿಸಿದೆ.

ಸಂಜು ಗೈರಿನಲ್ಲಿ ರಿಯಾನ್ ಪರಾಗ್ ಅವರು ನಾಯಕತ್ವ ವಹಿಸುತ್ತಿದ್ದು, ವಿಕೆಟ್ ಕೀಪಿಂಗ್ ಹೊಣೆಯನ್ನು ಧ್ರುವ್ ಜುರೇಲ್ ನಿರ್ವಹಿಸುವರು. ಈ ಬಾರಿ ಆಡಿರುವ ಏಳು ಪಂದ್ಯಗಳಲ್ಲಿ ಸಂಜು ಒಂದು ಅರ್ಧ ಶತಕ ಸೇರಿದಂತೆ 224 ರನ್ ಕಲೆಹಾಕಿದ್ದಾರೆ.

